16 October 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 297 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

**ಭಾವನಾಂತರಂಗ**

ಅಹಂಕಾರದ ಗುಣ ಜೀವನಕ್ಕೆ ನೆಮ್ಮದಿ ತರುವುದಿಲ್ಲ, ಮನಸ್ಸನ್ನು ಸದಾ ವಿಚಲಿತಗೊಳಿಸುತ್ತದೆ!

ಸ್ನೇಹಾ ಆನಂದ್



642 ಅಧಿಕಾರಿಗಳು, ಸಿಬ್ಬಂದಿಯ ಪರಿಶ್ರಮ — ಪುಟ ಸಂ. 2



17ರಂದು ವಿ.ರವಿಚಂದ್ರನ್‌ರಿಂದ ದಸರಾ ಉದ್ಘಾಟನೆ — ಪುಟ ಸಂ. 3



ತಾಲೀಮಿನಲ್ಲೂ ಕಂಬಳ ಜೋರು — ಪುಟ ಸಂ. 2

## ಎಚ್‌ಡಿಕೆ ಗೋಸುಂಬೆ ರೀತಿ: ಸಚಿವ ಬಾಲಕೃಷ್ಣ ವಾಗ್ದಾಳಿ



**ಮೈಸೂರು:** ಎಚ್.ಡಿ.ಕುಮಾರಸ್ವಾಮಿ ಗೋಸುಂಬೆ ರೀತಿ. ಯಾವಾಗ ಹೇಗೆ ಬಣ್ಣ ಬದಲಾಯಿಸುಬತ್ತಾರೋ ಗೊತ್ತಾಗುವುದಿಲ್ಲ ಎಂದು ಸಚಿವ ಬಾಲಕೃಷ್ಣ ಕಿಡಿಕಾರಿದ್ದಾರೆ.

ಮೈಸೂರಿನಲ್ಲಿ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಣ್ಣ ಬದಲಾಯಿಸುವುದನ್ನು ಕುಮಾರಸ್ವಾಮಿ ಅವರನ್ನ ನೋಡಿ ಕಲಿಯಬೇಕು. ಸಿದ್ದರಾಮಯ್ಯ ಅವರನ್ನು ಹಿಂದೆ ಕುಮಾರಸ್ವಾಮಿ ಟೀಕಿಸುತ್ತಿದ್ದರು. ಈಗ ಸಿದ್ದರಾಮಯ್ಯ ಮೇಲೆ ಪ್ರೀತಿ ತೋರಿಸುತ್ತಿದ್ದಾರೆ. ಅವರ ಪ್ರೀತಿಯೂ ಅಪಾಯಕಾರಿ. ಅವರ ಮತ್ತೊಂದು ಕೂಡ ಅಪಾಯಕಾರಿ. ಅವರ ಎಲ್ಲಾ ವಿಚಾರ ಗೊತ್ತಾದ ಮೇಲೆಯೇ ನಾನು ಅವರಿಂದ ದೂರವಾಗಿದ್ದು ಎಂದು ಟೀಕಿಸಿದರು.

ಯಾರಾದರೂ ಈ ದೇಶದಲ್ಲಿ ಪ್ರತಿನಿತ್ಯ ಸುದ್ದಿಗೋಷ್ಠಿ ಮಾಡುವ ಕೇಂದ್ರ ಸಚಿವ ಇದ್ದರೆಯೇ? ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಮಾತನಾಡುವುದನ್ನು ನೋಡಿದ್ದೇವೆ. ದಿನ ಬೆಳಗ್ಗೆ ಎದ್ದು ಆರೋಪ ಮಾಡುವುದೇ ಇವರ ಕೆಲಸ. ಇವರ ಬಳಿ ಕೇಂದ್ರ ಸರ್ಕಾರ ಇದೆ. ಅವರೇ ಈ ಪ್ರಕರಣವನ್ನ ಸಿಬಿಐಗೆ ಕೊಟ್ಟು ತನಿಖೆ ಮಾಡಿಸಲಿ. ಇವರ ಬಳಿ ಏನೇನು ದಾಖಲೆ ಇದೆ ಎಲ್ಲವೂ ಅಲ್ಲಿಗೆ ಕೊಡಲಿ. ಸುಮ್ಮನೆ ಮಾತನಾಡುವುದು ಬೇಡ ಎಂದು ವಾಗ್ದಾಳಿ ನಡೆಸಿದರು.

ಅಪಪ್ರಚಾರ ಮಾಡಬಾರದೆಂದು ಸಿದ್ದರಾಮಯ್ಯ ತಡೆಯಾಜ್ಞೆ ತಂದಿದ್ದಾರೆ. ಅದು ಅವರ ನಿರ್ಧಾರ. ನಮ್ಮ ಸರ್ಕಾರದಲ್ಲಿ ಅಂತಹದ್ದು ಯಾವುದೂ ನಡೆದಿಲ್ಲ. ಇದರ ಬಗ್ಗೆ ಆರೋಪ ಮಾಡುವ ಕುಮಾರಸ್ವಾಮಿ ಅವರನ್ನೇ ಕೇಳಿ ಎಂದು ಹರಿಹಾಯ್ದರು.

## ಸ್ಟಿಂಗ್ ಹಿಂದೆ ಜೆಡಿಎಸ್ ಕೈವಾಡ

### ಸಚಿವ ಚಲುವರಾಯಸ್ವಾಮಿ ಗಂಭೀರ ಆರೋಪ



**ಶ್ರೀರಂಗಪಟ್ಟಣ:** ಡಿ.ಕೆ.ಶಿವಕುಮಾರ್ ಸಿಎಂ ಆಗಿರುವುದನ್ನು ಒಪ್ಪದಿರುವುದಕ್ಕೆ ಕುಮಾರಸ್ವಾಮಿ ಯಾರು? ಎಂದು ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಖಾರವಾಗಿ ಪ್ರಶ್ನಿಸಿದರು.

ಕುಮಾರಸ್ವಾಮಿ ಅವರ ಕೆಲಸ ಮಾಡಲಿ. ಅದನ್ನು ಬಿಟ್ಟು ಹೀಗೆ ಮಾತನಾಡಲು ಅವರಿಗೆ ತಲೆ ಕೆಟ್ಟಿರಬೇಕು. ಸ್ಟಿಂಗ್ ಆಪರೇಷನ್ ಅನ್ನು ಜನತಾ ದಳದವರನ್ನು ಬಿಟ್ಟು ಇನ್ಯಾರು ಮಾಡಲು ಸಾಧ್ಯ? ಅವರ ಸೋಷಿಯಲ್ ಮೀಡಿಯಾ ಪೇಜ್‌ನಿಂದಲೇ ಸಿದ್ದರಾಮಯ್ಯ ಮೇಲೆ ಸ್ಟಿಂಗ್ ನಡೆಸಲಾಗಿದೆ ಎಂಬ ವಿಡಿಯೋ ಹರಿದಾಡುತ್ತಿದೆ. ಹೀಗಾಗಿ ವಿಡಿಯೋ ಹರಿಬಿಟ್ಟ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ ಎಂದರು.

ಯಾವುದೋ ಹಳೆ ವಿಡಿಯೋ ದೃಶ್ಯ ಈಗ ಬಿಡುಗಡೆಯಾಗಲು ಕಾರಣವೇನು? ಯಾವುದೇ ಕಾರಣಕ್ಕೂ ಕಾನೂನು ಮೀರಿ, ಮುಜುಗರ ಉಂಟುಮಾಡುವ ತಪ್ಪನ್ನು ಸಿದ್ದರಾಮಯ್ಯ ಮಾಡುವುದಿಲ್ಲ ಎಂದರು.

ಇಲ್ಲಿಯವರೆಗೂ ಇಲ್ಲದ ಅನುಕಂಪ, ಅಕ್ಕರೆ ಇದೀಗ ಸಿದ್ದರಾಮಯ್ಯ ಮೇಲೆ ಹುಟ್ಟಲು ಕುಮಾರಸ್ವಾಮಿ ಅವರಿಗೆ ಹೇಗೆ ಸಾಧ್ಯ? ಮಗು ಚಿವುಟಿ, ತೊಟ್ಟಿಲು ತೂಗುವ ನಾಟಕ ಬೇಡ. ಹಾಸನದ ಪೆನ್ ಡ್ರೈವ್ ವಿಚಾರದಲ್ಲಿ ಪ್ರಜ್ವಲ್ ರೇವಣ್ಣಗೆ ಮಾತ್ರ ಅನ್ಯಾಯವಾಗಿದೆ ಎನ್ನುವ ಎಚ್‌ಡಿಕೆಗೆ, ಸಂತ್ರಸ್ತರಾದ ನೂರಾರು ಮಹಿಳೆಯರ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲ ಎಂದು ಕಿಡಿಕಾರಿದರು.

## ಬಾಲಕಿ ಅತ್ಯಾಚಾರ, ಕೊಲೆ: ಅಪರಾಧ ಸಾಬೀತು

**ಮೈಸೂರು:** ಮೈಸೂರು ದಸರಾದಲ್ಲಿ ಕಳೆದ ವರ್ಷ ಬಲೂನ್ ಮಾರುವ ಬಾಲಕಿಯನ್ನು ಅಪಹರಿಸಿ, ಅತ್ಯಾಚಾರಗೈದು ಕೊಲೆ ಮಾಡಿದ್ದ ಕೇಸ್‌ನಲ್ಲಿ ಕಾಮುಕನ ಅಪರಾಧ ಸಾಬೀತಾಗಿದೆ.

ಮೈಸೂರು ಶೀಘ್ರಗತಿ ನ್ಯಾಯಾಲಯದ ನ್ಯಾಯಾಧೀಶರಾದ ಅನಿಲ್ ಪಿ ವಘಾಡೆ ಅವರು ಕಾರ್ತಿಕ್‌ನನ್ನು (32) ಅಪರಾಧಿ ಎಂದು ಆದೇಶಿಸಿದ್ದಾರೆ. ಅ.16ರಂದು ಶಿಕ್ಷೆ ಪ್ರಮಾಣ ಪ್ರಕಟವಾಗಲಿದೆ.

ಕಳೆದ ವರ್ಷ ದಸರಾ ಸಮಯದಲ್ಲಿ ಈ ಘಟನೆ ನಡೆದಿತ್ತು. ದಸರಾ ಹಿನ್ನೆಲೆಯಲ್ಲಿ ಕುಟುಂಬವೊಂದು ಗುಲ್ಬರ್ಗಾದಿಂದ ಬಲೂನ್ ಮಾರಲು ಮೈಸೂರಿಗೆ ಬಂದಿತ್ತು. ಆ ಕುಟುಂಬ ದಸರಾ ವಸ್ತುಪ್ರದರ್ಶನ ಬಳಿ ಟೆಂಟ್‌ನಲ್ಲಿ ಮಲಗಿದ್ದಾಗ 9 ವರ್ಷದ ಬಾಲಕಿಯನ್ನು ಕಾರ್ತಿಕ್ ಎಳೆದೊಯ್ದು ಅತ್ಯಾಚಾರ ಮಾಡಿ ಭೀಕರವಾಗಿ ಕೊಲೆ ಮಾಡಿದ್ದ. ಈ ಸಂಬಂಧ ನಜರಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಬಳಿಕ ಘಟನೆ ನಡೆದ 24 ಗಂಟೆಯಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಿದ್ದರು.



# ಸಿದ್ದರಾಮಯ್ಯಗೆ ಕೃಪಾ ಆಳ್ವ ಖೆಡ್ಡಾ?

## ರಾಕೇಶ್ ಶೆಟ್ಟಿ ಮನೆಗೆ ಸಿದ್ದರಾಮಯ್ಯ ಏಕೆ ಹೋಗಿದ್ದರು: ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ

**ಬೆಂಗಳೂರು:** ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಷಡ್ಯಂತ್ರದಲ್ಲಿ ಕರಾವಳಿ ಭಾಗದ ಕಾಂಗ್ರೆಸ್ ನಾಯಕಿ ಕೃಪಾ ಆಳ್ವ ಭಾಗಿಯಾಗಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಬೆಂಗಳೂರಿನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಸಿದ್ದರಾಮಯ್ಯ ಮೊದಲ ಆಡಳಿತಾವಧಿಯಲ್ಲಿ ಕೃಪಾ ಆಳ್ವ ರಾಜ್ಯದ ಮಕ್ಕಳ ಹಕ್ಕು ರಕ್ಷಣಾ ಆಯೋಗದ ಅಧ್ಯಕ್ಷೆಯಾಗಿದ್ದರು ಎಂದು ತಿಳಿಸಿದರು.

ಸಿದ್ದರಾಮಯ್ಯ ವಿರುದ್ಧದ ಸ್ಟಿಂಗ್ ಆಪರೇಷನ್‌ನಲ್ಲಿ ಕೃಪಾ ಆಳ್ವಾ ನೇರವಾಗಿ ಭಾಗಿಯಾಗಿದ್ದಾರೆ ಎಂದು ಆರೋಪಿಸಿದರು.

ರಾಕೇಶ್ ಶೆಟ್ಟಿ ಮತ್ತು ಕೃಪಾ ಆಳ್ವಾ ಹೆಸರು ಸಿದ್ದರಾಮಯ್ಯ ಪರ ವಕೀಲರು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳಲ್ಲಿ ಇದೆ. ಆ ಕಾರ್ಯಾಚರಣೆ ಹೇಗೆಲ್ಲಾ ನಡೆದಿದೆ ಎಂಬುದನ್ನೂ ಅದರಲ್ಲಿ ವಿವರಿಸಿದ್ದಾರೆ. ಈ ವಿಚಾರ ಸಿದ್ದರಾಮಯ್ಯ ಅವರಿಗೆ ಗೊತ್ತಿತ್ತು. ರಾಕೇಶ್ ಶೆಟ್ಟಿ ಎಂತಹ ನೀಚ ಎಂಬುದು ಗೊತ್ತಿದ್ದರೂ ಸಿದ್ದರಾಮಯ್ಯ ಅವನ ಮನೆಗೆ ಏಕೆ ಅಷ್ಟು ಬಾರಿ ಹೋಗಿದ್ದರು ಎಂದು ಪ್ರಶ್ನಿಸಿದರು.

ಗೃಹ ಸಚಿವರೇ ಅಧಿಕಾರ ಇದೆ ಅಂತ ಏನು ಬೇಕಾದ್ರು ಮಾಡಬಹುದಾ? ಗೃಹ ಇಲಾಖೆ ನಿಮ್ಮಪ್ಪನದ್ದಾ? ನನ್ನ ಕಾರ್ಯಕರ್ತರನ್ನ ಅರೆಸ್ಟ್ ಮಾಡ್ತೀರಾ? ನಾನೇ ಈಗ ನಿನ್ನ ಕಚೇರಿಗೆ ಬರ್ತೀನಿ, ತಾಖತ್ತಿದ್ದರೆ ನನ್ನನ್ನ ಅರೆಸ್ಟ್ ಮಾಡಿ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಸವಾಲು ಹಾಕಿದ್ದಾರೆ.

ಕುಮಾರಸ್ವಾಮಿ ಮೇಲೆ ಅನುಮಾನ ಬಂದರೂ ಅರೆಸ್ಟ್ ಮಾಡಿಸ್ತೀನಿ ಅಂತೀಯಾ? ಬಾ ಅಖಾಡಕ್ಕೆ ನೋಡೋಣ? ಸಿಎಂ ಪಕ್ಕದಲ್ಲಿ ಕೂತಿದ್ದವನ ಮೇಲೆ ಅನುಮಾನ ಬಂದಿಲ್ಲ. ಸಿಎಂ ಒಬ್ಬರನ್ನ ಟ್ರ್ಯಾಪ್ ಮಾಡಿಸಿದ್ದಾರೆ, ಅವರನ್ನ ಬಿಟ್ಟುಬಿಟ್ಟಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು.

ನನ್ನ ಮಗನ ಪೋಸ್ಟರ್



### 2 ದಿನಗಳ ಗಡುವು: ಮತ್ತೆ ಪ್ರತಿಭಟನೆ

**ಬೆಂಗಳೂರು:** ಸ್ಟಿಂಗ್ ಆಪರೇಷನ್ ನಡೆಸಿದವರ ವಿರುದ್ಧ 2 ದಿನಗಳಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಮತ್ತೆ ಪ್ರತಿಭಟನೆ ನಡೆಸುತ್ತೇವೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಗಡವು ನೀಡಿದ್ದಾರೆ.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ವಿರುದ್ಧ ನಡೆಸಿದ ಸ್ಟಿಂಗ್ ಆಪರೇಷನ್‌ನಲ್ಲಿ ರಾಕೇಶ್ ಶೆಟ್ಟಿ, ಕೃಪಾ ಆಳ್ವಾ ಅವರು ಭಾಗಿಯಾಗಿದ್ದಾರೆ. ಅವರನ್ನು ಬಂಧಿಸುವುದನ್ನು ಬಿಟ್ಟು ಜೆಡಿಎಸ್ ಕಾರ್ಯಕರ್ತರನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಆರೋಪಿಸಿದರು.

ನಮ್ಮ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದಲ್ಲಿ ಕೆಲಸ ಮಾಡುವ ಕಾರ್ಯಕರ್ತರನ್ನು ಅಕ್ರಮವಾಗಿ ವಶಕ್ಕೆ ಪಡೆದುಕೊಂಡಿದ್ದು ಏಕೆ? ಸಂಶಯ ಬಂದರೆ ಕುಮಾರಸ್ವಾಮಿಯನ್ನೂ ಕರೆಸಿ ವಿಚಾರಣೆ ನಡೆಸುತ್ತೇವೆ ಎಂದು

### ಸುರ್ಜೇವಾಲಾ ಜತೆಗೆ ಸ್ಟಿಂಗ್ ಪರಿಣಿತನ ಚಿತ್ರ

ಬಾಗೇಪಲ್ಲಿ ಪ್ರಶಾಂತ್ ಎಂಬ ವ್ಯಕ್ತಿಯನ್ನು ಇರಿಸಿಕೊಂಡು ರಾಕೇಶ್ ಶೆಟ್ಟಿ ಮಾರುವೇಷದ ಕಾರ್ಯಾಚರಣೆ ನಡೆಸುತ್ತಿದ್ದಾನೆ.



ಪ್ರಶಾಂತ್ ಎಂಬಾತ ಹಿಸ್ಟರಿ ಶೀಟರ್ ಆಗಿದ್ದಾನೆ. ಆತ ಪೊಲೀಸರು ಮತ್ತು ರಾಜಕಾರಣಿಗಳಿಂದಲೂ ಹಣ ವಸೂಲಿ ಮಾಡಿದ್ದಾನೆ. ಆ ವ್ಯಕ್ತಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಜತೆಗೂ ಫೋಟೊ ತೆಗೆಸಿಕೊಂಡಿದ್ದಾನೆ ಎಂದು ಆರೋಪಿಸಿದರು. ಫೋಟೊಗಳನ್ನು ಬಿಡುಗಡೆ ಮಾಡಿದರು.

## ರಮೇಶ್ ಜಾರಕಿಹೊಳಿ ಮೊದಲೇ ಎಚ್ಚರಿಸಿದ್ದರು!

**ಬೆಂಗಳೂರು:** ರಾಜ್ಯದಲ್ಲಿ 'ಸ್ಟಿಂಗ್ ಆಪರೇಷನ್' ಕೋಲಾಹಲ ತಾರಕಕ್ಕೇರಿದೆ. ತನಿಖೆಗೆ ಆಗ್ರಹಿಸಿದ ಬೆನ್ನಲ್ಲೇ ಟಾರ್ಗೆಟ್ ಪಾಲಿಟಿಕ್ಸ್ ಶುರುವಾಗಿದೆ ಅಂತಾ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಬೆಂಕಿ ಉಗುಳಿದ್ದಾರೆ.

ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿದ ಎಚ್‌ಡಿಕೆ, ಸಿಎಂ ಡಿಕೆ ಶಿವಕುಮಾರ್ ವಿರುದ್ಧ ಬಾಂಬ್ ಸಿಡಿಸಿದ್ದಾರೆ. ಮೂರನೇ ಕಣ್ಣಿಗೆ ಮೂಲವೇ ಮುಖ್ಯಮಂತ್ರಿ ಎಂದು ದೂಷಿಸಿದ್ದಾರೆ.



ಸ್ಟಿಂಗ್ ಆಪರೇಷನ್ ಕಳ್ಳಾಟ ಇಂದು ನಿನ್ನೆಯದಲ್ಲ. ಕಳೆದ 2024ರ ಆಗಸ್ಟ್ 2ರಂದೇ ರಮೇಶ್ ಜಾರಕಿಹೊಳಿ ಎಚ್ಚರಿಕೆ ನೀಡಿದ್ದರು. ಪ್ರಜ್ವಲ್ ರೇವಣ್ಣ ನಂತರ ಸಿದ್ದರಾಮಯ್ಯ, ಡಾ.ಜಿ.ಪರಮೇಶ್ವರ್ ವಿಡಿಯೋಗಳೂ ಬರಬಹುದು. ಆ ಮಹಾನಾಯಕನನ್ನು ಈಗಲೇ ಅಧಿಕಾರದಿಂದ ಇಳಿಸಿ ಅಂತ ರಮೇಶ್ ಜಾರಕಿಹೋಳಿ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಆದರೆ, ಅಂದು ನಿರ್ಲಕ್ಷ್ಯ ಮಾಡಿದ್ದಕ್ಕೆ ಇಂದು ಈ ಪರಿಸ್ಥಿತಿ ಎದುರಾಗಿದೆ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಯಾವುದೋ ಮಹಿಳೆ ಮುಖಕ್ಕೆ ಟವಲ್ ಕಟ್ಟಿ ಛೂ ಬಿಟ್ಟರೆ ಬಲೆಗೆ ಬೀಳೋಕೆ ನನ್ನೇನು ರೇವಣ್ಣ ಅಂದುಕೊಂಡಿದ್ದಾರೆಯೇ. ಅವರನ್ನೇನೋ 5 ದಿನ ಜೈಲಿಗೆ ಕಳುಹಿಸಿದ್ರಲ್ಲಪ್ಪ. ನನ್ನನ್ನೂ ಹಾಗೇ ಅಂದುಕೊಂಡಿದ್ದೀರಾ ಎಂದು ಕುಟುಕಿದರು.

## ಮಾವುತ ವಸಂತನ ಪತ್ನಿ ಅಂಬಿಕಾ ನಿಧನ

**ಮೈಸೂರು:** ಮೈಸೂರು ದಸರಾ ಸಂಭ್ರಮದ ನಡುವೆ ದಸರಾ ಆನೆ ಅಭಿಮನ್ಯು ಮಾವುತ ವಸಂತನಿಗೆ ಆಘಾತ ಎದುರಾಗಿದೆ. ನಿಶಾನೆ ಆನೆಯಾಗಿ ಅಭಿಮನ್ಯ ಕರ್ತವ್ಯ ನಿರ್ವಹಿಸುತ್ತಿರುವ ಹಿನ್ನೆಲೆಯಲ್ಲಿ ವಸಂತನ ಕುಟುಂಬ ಮೈಸೂರಿಗೆ ಬಂದಿತ್ತು.

ಮೈಸೂರಿನಲ್ಲಿ ವಸಂತನ ಪತ್ನಿ 35 ವರ್ಷದ ಅಂಬಿಕಾ ಅನಾ ರೋಗ್ಯಕ್ಕೆ ತುತ್ತಾಗಿದ್ದರು. ಮೈಸೂರಿನ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿತ್ತು. ಕಳೆದ ಎರಡು ದಿನಗಳಿಂದ ಆರೋಗ್ಯ ಮತ್ತಷ್ಟು ಹದಗೆಟ್ಟಿದ್ದು ಗುರುವಾರ ಮೃತಪಟ್ಟಿದ್ದಾರೆ.

ಅಂಬಿಕಾ ಪಾರ್ಥಿವ ಶರೀರವನ್ನು ಮತ್ತಿಗೋಡು ಆನೆ ಕ್ಯಾಂಪ್‌ಗೆ ರವಾನಿಸಲಾಗಿದೆ. ದಸರಾ ಗಜಪಡೆಯ ಇತರ ಮಾವುತರು ಹಾಗೂ ಕಾವಾಡಿಗರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಳ್ಳಲು ಮೈಸೂರಿನಿಂದ ತೆರಳಿದ್ದಾರೆ.

1977ರಲ್ಲಿ ಕೊಡಗಿನ ಕಾಡಿನಲ್ಲಿ ಅಭಿಮನ್ಯು ಸೆರೆ ಸಿಕ್ಕಾಗಿನಿಂದಲೂ ವಸಂತ ಅವರ ತಂದೆ ಸಣ್ಣಪ್ಪ ಅವರೇ ಅಭಿಮನ್ಯುವಿನ ಮುಖ್ಯ ಮಾವುತರಾಗಿದ್ದರು. ತಂದೆಯ ನಂತರ ವಸಂತ ಅಭಿಮನ್ಯುವಿಗೆ ಮಾವುತರಾಗಿದ್ದರು.



## ಕುಮಾರಸ್ವಾಮಿ V/S ಪ್ರಿಯಾಂಕ್ ಖರ್ಗೆ

### ಸಿದ್ದರಾಮಯ್ಯ ವಿರುದ್ಧ ನಡೆದ ಸ್ಟಿಂಗ್ ಸಂಚಿನಲ್ಲಿ ಶಾಮೀಲು: ಎಚ್.ಡಿ.ಕುಮಾರಸ್ವಾಮಿ

**ಬೆಂಗಳೂರು:** ಗೃಹ ಸಚಿವ ಸ್ಥಾನದಲ್ಲಿರಲು ಪ್ರಿಯಾಂಕ್ ಖರ್ಗೆ ನಾಲಾಯಕ್ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಗುಡುಗಿದ್ದಾರೆ.

ರಾಜ್ಯದಲ್ಲಿ ಸಂಚಲನ ಸೃಷ್ಟಿಸಿರುವ ಸ್ಟಿಂಗ್ ಆಪರೇಷನ್ ವಿಚಾರವಾಗಿ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಆಕ್ರೋಶ ಹೊರಹಾಕಿದ್ದಾರೆ. ಸ್ಟಿಂಗ್ ಸಾಮ್ರಾಟನ ಸಿಂಡಿಕೇಟ್‌ನಲ್ಲಿ ನೀವು ಒಂದು ಭಾಗ ಎಂಬುದು ನನಗೆ ಗ್ಯಾರಂಟಿ ಆಗಿದೆ ಎಂದು ಕಿಡಿಕಾರಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ನಡೆದ ಸ್ಟಿಂಗ್ ಸಂಚಿನಲ್ಲಿ ಶಾಮೀಲಾಗಿ ಅವರ ಪದಚ್ಯುತಿಗೆ ಕಾರಣನಾದ ನೀಲಿ ಕಣ್ಣಿನ ಮಂತ್ರಿ ಪ್ರಿಯಾಂಕ್ ಖರ್ಗೆ, ಸ್ಟಿಂಗ್ ಮಾಡಿದ ಅಸಲಿ ಕಿರಾತಕನನ್ನು ಬಿಟ್ಟು ಅಮಾಯಕರ ಬೆನ್ನತ್ತಿದ ನೀವು ಗೃಹಮಂತ್ರಿ ಹುದ್ದೆಗೆ ನಾಲಾಯಕ್ ಎಂದು ಕಿಡಿಕಾರಿದ್ದಾರೆ.




ಸಿದ್ಧಾರ್ಥ, ಡಾ.ಅಂಬೇಡ್ಕರ್ ಹೆಸರಿನಲ್ಲಿ ಲೂಟಿ ಮೇಲೆ ಲೂಟಿ ಮಾಡಿದ 'ಬಲಿತ ದಲಿತ'ನೇ, ನಿಮ್ಮ ಮೀಸಲು ಕ್ಷೇತ್ರವನ್ನು ದುರ್ಬಲ ದಲಿತನಿಗೆ ಬಿಟ್ಟುಕೊಟ್ಟು ಸಾಮಾನ್ಯ ಕ್ಷೇತ್ರದಿಂದ ಗೆದ್ದು ಬನ್ನಿ.

## ನಿಮ್ಮ ಭಾಷೆಯಲ್ಲಿಯೇ ಪ್ರತ್ಯುತ್ತರ ನೀಡುವೆ: ಪ್ರಿಯಾಂಕ್

**ಬೆಂಗಳೂರು:** 'ಸ್ಟಿಂಗ್ ಆಪರೇಷನ್'ಗೆ ಸಂಬಂಧಿಸಿದಂತೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಗೃಹ ಸಚಿವ ಪ್ರಿಯಾಂಕ್ ಖರ್ಗೆ ನಡುವಿನ ವಾಕ್ಸಮರ ತೀವ್ರ ಸ್ವರೂಪ ಪಡೆದುಕೊಂಡಿವೆ. ಕುಮಾರಸ್ವಾಮಿ ಎಲ್ಲಾ ಆರೋಪಕ್ಕೆ ಉತ್ತರ ಕೊಡುವುದಕ್ಕೆ ಆಗಲ್ಲ. ನಮಗೆ ದೂರು ಬಂದಿದೆ. ಹೀಗಾಗಿ ಕೆಲವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದೇವೆ. ಸಂಶಯ ಬಂದರೆ ಕುಮಾರಸ್ವಾಮಿ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತೇವೆ ಎಂದು ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು. ವಿಧಾನಸೌಧದ ಕೆಂಗಲ್ ಗೇಟ್ ಬಳಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಪ್ರಿಯಾಂಕ್ ಖರ್ಗೆ, ಕುಮಾರಸ್ವಾಮಿ ಅವರು ಏಕವಚನದಲ್ಲಿ ಮಾತನಾಡಿದ ತಕ್ಷಣ ಪ್ರಿಯಾಂಕ್ ಖರ್ಗೆ ಹೆದರಿಕೊಳ್ಳುತ್ತಾನೆ, ನಮ್ಮನ್ನು ಹೆದರಿಸಬಹುದು, ಬೆದರಿಸಬಹುದು ಅಂದುಕೊಂಡಿದ್ದರೆ ಅದು ಅವರ ಭ್ರಮೆ. ಅವರು ಮರ್ಯಾದೆ ಕೊಟ್ಟು ಮಾತನಾಡಿದರೆ ನಾವು ಕೇಳಲು ರೆಡಿ ಇದ್ದೇವೆ. ಆದರೆ ಅವರು ನಮಗೆ ಯಾವ ಭಾಷೆಯಲ್ಲಿ ಮಾತನಾಡುತ್ತಾರೋ, ಅದೇ ಭಾಷೆಯಲ್ಲಿ ಅವರಿಗೆ ಪ್ರತ್ಯುತ್ತರ ನೀಡಲು ನಾವು ಸಂಪೂರ್ಣ ಸಿದ್ಧರಿದ್ದೇವೆ ಎಂದು ಎಚ್ಚರಿಸಿ ದರು. ತಾಕತ್ತಿದ್ದರೆ ನನ್ನನ್ನು ಅರೆಸ್ಟ್ ಮಾಡಲಿ ಎಂಬ ಕುಮಾರಸ್ವಾಮಿ ಹೇಳಿಕೆಗೆ ಪ್ರತಿಕ್ರಿಯಿಸಿದ ಪ್ರಿಯಾಂಕ್ ಖರ್ಗೆ, ಸುಮ್ಮನೆ ಬಂಧಿಸಲು ಹೇಗೆ ಸಾಧ್ಯ? ಅರೆಸ್ಟ್ ಮಾಡುವುದನ್ನು ಅವರಿಂದ ನಾನು ಕಲಿಯಬೇಕಾಗಿಲ್ಲ. ಮೊದಲು

ಪುಟ 2ಕ್ಕೆ

## ಮೊಬೈಲ್ ಕರೆಯಲ್ಲಿ ಹೆಸರು ಕಡ್ಡಾಯ ಆದೇಶ

**ನವದೆಹಲಿ:** ಅಪರಿಚಿತ ಮೊಬೈಲ್ ಸಂಖ್ಯೆಗಳಿಂದ ಬರುವ ಕರೆಗಳನ್ನು ಗುರುತಿಸಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರ ಹೊಸ ವ್ಯವಸ್ಥೆ ಜಾರಿಗೆ ತರಲು ಮುಂದಾಗಿದೆ.

ನವೆಂಬರ್ 1ರಿಂದ ದೇಶದ ದೂರಸಂಪರ್ಕ ಸೇವಾ ಕಂಪನಿಗಳು ಕಾಲಿಂಗ್ ನೇಮ್ ಪ್ರೆಸೆಂಟೇಷನ್ ವ್ಯವಸ್ಥೆಯನ್ನು ಜಾರಿಗೆ ತರಬೇಕು ಎಂದು ದೂರಸಂಪರ್ಕ ಇಲಾಖೆ ಸೂಚಿಸಿದೆ.

ಈ ವ್ಯವಸ್ಥೆಯಡಿ ಮೊಬೈಲ್‌ಗೆ ಕರೆ ಬಂದಾಗ ಕರೆ ಮಾಡುವವರ ಸಂಖ್ಯೆ ಜೊತೆಗೆ ಅವರ ಹೆಸರೂ ಪರದೆ ಮೇಲೆ ಕಾಣಿಸಿಕೊಳ್ಳಲಿದೆ.

ಪುಟ 2ಕ್ಕೆ

# ಸಂಭ್ರಮದ ಶ್ರೀರಂಗಪಟ್ಟಣ ದಸರಾ

## ಚಲನಚಿತ್ರ ನಟ, ನಿರ್ದೇಶಕ ಡಾ.ವಿ.ರವಿಚಂದ್ರನ್ ಚಾಲನೆ



**ಶ್ರೀರಂಗಪಟ್ಟಣ:** ಐತಿಹಾಸಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆ ಪ್ರತೀಕವಾದ ಶ್ರೀರಂಗಪಟ್ಟಣ ದಸರಾ ಮಹೋತ್ಸವಕ್ಕೆ ಗುರುವಾರ ಖ್ಯಾತ ಚಲನಚಿತ್ರ ನಟ, ನಿರ್ದೇಶಕ ಡಾ.ವಿ.ರವಿಚಂದ್ರನ್ ಚಾಲನೆ ನೀಡಿದರು. ತಾಯಿ ಚಾಮುಂಡೇಶ್ವರಿಗೆ ಕುಂಭ ಲಗ್ನದಲ್ಲಿ ಪುಷ್ಪಾರ್ಚನೆ ನೆರವೇರಿಸುವ ಮೂಲಕ ನಾಡಹಬ್ಬದ ಸಂಭ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ದಸರಾ ಮಹೋತ್ಸವದ ಅಂಗವಾಗಿ ಶ್ರೀರಂಗಪಟ್ಟಣ ತಾಲ್ಲೂಕಿನ ಕಿರಂಗೂರು ಗ್ರಾಮದ ಬಾಬುರಾಯನ ವೃತ್ತದ ಬನ್ನಿಮಂಟಪದಲ್ಲಿ ವಿಶೇಷ ಪೂಜಾ ಕೈಂಕರ್ಯ ನೆರವೇರಿದವು. 250 ಕೆ.ಜಿ. ತೂಕದ ಮರದ ಅಂಬಾರಿಯಲ್ಲಿ ವಿರಾಜಮಾನಳಾಗಿದ್ದ ತಾಯಿ ಚಾಮುಂಡೇಶ್ವರಿಯನ್ನು ಹೊತ್ತ ಧನಂಜಯ ಹೆಜ್ಜೆ ಹಾಕಿದ.

ದಸರಾ ಮೆರವಣಿಗೆಯಲ್ಲಿ ಅಂಬಾರಿ

ಪುಟ 2ಕ್ಕೆ

### ಸಾಂಸ್ಕೃತಿಕ ವೈಭವ

ಶ್ರೀರಂಗಪಟ್ಟಣದಲ್ಲಿ ದಸರಾ ಮಹೋತ್ಸವದ ಅಂಗವಾಗಿ ಅಕ್ಟೋಬರ್ 15ರಿಂದ 18ರವರೆಗೆ ಒಟ್ಟು ನಾಲ್ಕು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ಶ್ರೀರಂಗನಾಥಸ್ವಾಮಿ ದೇವಾಲಯದ ಪ್ರಧಾನ ವೇದಿಕೆಯಲ್ಲಿ ಗುರುವಾರ ಸಂಜೆ ಸಾಂಸ್ಕೃತಿಕ ವೇದಿಕೆಗೆ ಸಚಿವ ಚಲುವರಾಯಸ್ವಾಮಿ ಚಾಲನೆ ನೀಡಿದರು. ಮೈಸೂರು ದಸರಾದಷ್ಟೇ ಇತಿಹಾಸ ಹೊಂದಿರುವ ಶ್ರೀರಂಗಪಟ್ಟಣ ದಸರಾದಲ್ಲಿ ಈ ಬಾರಿ ವಿಜಯನಗರ ಸಾಮ್ರಾಜ್ಯ ಹಾಗೂ ಶ್ರೀರಂಗನಾಥಸ್ವಾಮಿ ದೇವಾಲಯದ 416 ವರ್ಷಗಳ ಪಾರಂಪರಿಕ ಲಾಂಛನವನ್ನು

ಪುಟ 2ಕ್ಕೆ

## 17ರಿಂದ 4 ದಿನ ಡ್ರೋನ್ ಪ್ರದರ್ಶನ

**ಮೈಸೂರು:** ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ–2026 ಮಹೋತ್ಸವದ ಅಂಗವಾಗಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ (ಸೆಸ್ಕ್) ವತಿಯಿಂದ ಮೈಸೂರಿನ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಅ.17, 18, 20 ಹಾಗೂ 21ರಂದು ಅತ್ಯಾಕರ್ಷಕ ಡ್ರೋನ್ ಪ್ರದರ್ಶನ ಆಯೋಜಿಸಲಾಗಿದೆ.

ಡ್ರೋನ್ ಪ್ರದರ್ಶನ ನಡೆಯುವ ಸಂದರ್ಭದಲ್ಲಿ ಹಲವು ಖಾಸಗಿ ವ್ಯಕ್ತಿಗಳು ಹಾಗೂ ಸಂಸ್ಥೆಗಳು ತಮ್ಮ ಡ್ರೋನ್‌ಗಳನ್ನು ಹಾರಿಸಿ, ಸೆಸ್ಕ್ ವತಿಯಿಂದ ನಡೆಸುವ ಡ್ರೋನ್ ಪ್ರದರ್ಶನದ ದೃಶ್ಯಗಳನ್ನು ಸೆರೆಹಿಡಿಯುವುದು ಹಾಗೂ ಡ್ರೋನ್‌ಗಳ ಮೂಲಕ ಚಿತ್ರೀಕರಿಸಿದ ದೃಶ್ಯಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡುವುದಕ್ಕೆ ನಿರ್ಬಂಧ ಹೇರಲಾಗಿದೆ. ಪ್ರಾಧಿಕಾರದ ಅನುಮತಿ ಪಡೆಯದೆ ಖಾಸಗಿ ಡ್ರೋನ್‌ಗಳ ಮೂಲಕ ಚಿತ್ರೀಕರಿಸಿದರೆ ಕಠಿಣ ಜರುಗಿಸಲಾಗುವುದು ಎಂದು ಸೂಚಿಸಲಾಗಿದೆ.



**ಮೊದಲನೇ ಪುಟದಿಂದ**

## ಸಿದ್ದರಾಮಯ್ಯಗೆ ಕೃಪಾ ಆಳ್ವ ಖೆಡ್ಡಾ?

ತೆಂಟಿಸಿದಾಗ ಎಲ್ಲಿ ಹೋಗಿದ್ರಿ? ಪ್ರಿಯಾಂಕ್ ಖರ್ಗೆ ಅವರೇ ಹೆದರಿಸಿ ಬೆದರಿಸಿ ಮಾಡ್ತೀನಿ ಅಂದರೆ ನಾನು ರೆಡಿ, ನಿಮ್ಮ ಕಮೀಷನರ್ ಕಚೇರಿಗೆ ಬರ್ತೀನಿ ಅರೆಸ್ಟ್ ಮಾಡಿ ಎಂದು ಸವಾಲ್ ಎಸೆದರು.

ನಾವೇನು ಎಲೆಕ್ಟ್ರಾನಿಕ್ ಉಪಕರಣಗಳನ್ನ ಜೆಪಿ ನಗರದ ಮನೆಯಲ್ಲಿ ಇಟ್ಟುಕೊಂಡಿದ್ದೀವಾ? ಅಧಿಕಾರ ಕೊಟ್ಟಾಗ ನ್ಯಾಯಯುತವಾಗಿ ನಡೆಸಬೇಕು ಅಲ್ಲವಾ? ಸ್ಟಿಂಗ್ ಮಾಡಿದವನ್ನ ಯಾಕೆ ಅರೆಸ್ಟ್ ಮಾಡಿಲ್ಲ? ಒಬ್ಬ ವ್ಯಕ್ತಿ ಪೊಲೀಸ್ ಅಧಿಕಾರಿಯನ್ನು ಕೊಲೆ ಮಾಡ್ತೀನಿ ಅಂತಾನೆ. ಯಾಕೆ ಅರೆಸ್ಟ್ ಮಾಡಿಲ್ಲ? ಎಂದು ಪ್ರಶ್ನಿಸಿದರು.

## 2 ದಿನಗಳ ಗಡುವು: ಮತ್ತೆ ಪ್ರತಿಭಟನೆ

ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ. ಗೃಹ ಸಚಿವನ ಖಾತೆ ಅವರಪ್ಪನ ಮನೆಯ ಆಸ್ತಿ ಅಲ್ಲ. ರಾಜ್ಯದ ಜನರಿಗೆ ಉತ್ತರದಾಯಿಯಾಗು ಎಂದು ಪ್ರಿಯಾಂಕ್ ಖರ್ಗೆ ವಿರುದ್ಧ ಏಕವಚನದಲ್ಲಿ ವಾಗ್ದಾಳಿ ನಡೆಸಿದರು.

ನನ್ನ ಕಾರ್ಯಕರ್ತರನ್ನು ಬಂಧಿಸಿ ನಿಮಗೆ ಬೇಕಾದ ಹಾಗೆ ಹೇಳಿಕೆ ಬರೆಸಿಕೊಂಡಿದ್ದೀರಿ. ತಾಕತ್ತಿದ್ದರೆ ನನ್ನ ಮೇಲೆ ಎಫ್‌ಐಆರ್ ಮಾಡಿ, ಹೇಳಿಕೆ ಬರೆದುಕೊಳ್ಳಿ. ನಿಮ್ಮ ಕಚೇರಿಗೇ ಬರುತ್ತೇನೆ. ತಾಕತ್ತಿದ್ದರೆ ಬಂಧಿಸಿ ಎಂದು ಪ್ರಿಯಾಂಕ್ ಖರ್ಗೆಗೆ ಸವಾಲು ಹಾಕಿದರು. ನಂತರ ಅಲ್ಲಿಂದ ಹೊರಟು ನಗರ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ವಿರುದ್ಧವೇ ಮಾರುವೇಷದ ಕಾರ್ಯಾಚರಣೆ ನಡೆಸಿದ್ದವರ ವಿರುದ್ಧ ಎಫ್‌ಐಆರ್ ದಾಖಲಿಸಿ ಎಂದು ಒತ್ತಾಯಿಸಿದರು. ನಂತರ ಕಚೇರಿಯಿಂದ ಹೊರಬಂದು, ಮೆಟ್ಟಿಲುಗಳ ಮೇಲೆ ಧರಣಿ ನಡೆಸಿದರು.

ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಅವರು ಹೊರಬಂದು ಕುಮಾರಸ್ವಾಮಿ ಅವರ ಜತೆ ಮಾತುಕತೆ ನಡೆಸಿದರು. ಆನಂತರ ಎರಡು ದಿನಗಳಲ್ಲಿ ಕ್ರಮ ತೆಗೆದುಕೊಳ್ಳದಿದ್ದರೆ ಪ್ರತಿಭಟನೆ ನಡೆಸುತ್ತೇವೆ ಎಂದು ಗಡವು ನೀಡಿ, ಪ್ರತಿಭಟನೆ ಕೈಬಿಟ್ಟರು.

## ಕುಮಾರಸ್ವಾಮಿ V/S ಪ್ರಿಯಾಂಕ್ ಖರ್ಗೆ

ನಿಮಗೆ, ನಿಮ್ಮಪ್ಪನಿಗೆ ಇನ್ನೆಷ್ಟು ವರ್ಷ ಮೀಸಲು ಕ್ಷೇತ್ರಗಳು ಬೇಕು? ಇನ್ನೆಷ್ಟು ವರ್ಷ ದಲಿತರ ಹೆಸರಿನಲ್ಲಿ ಅಧಿಕಾರ ಅನುಭವಿಸುತ್ತೀರಾ? ಅಸಲಿ ದಲಿತರಿಗೆ ಅಧಿಕಾರ ಕೊಡಿ ಎಂದು ಸವಾಲು ಹಾಕಿದ್ದಾರೆ.

ನಮ್ಮ ಹುಡುಗರನ್ನು ರಕ್ಷಿಸಿಕೊಳ್ಳುವುದು ನನಗೆ ಗೊತ್ತು. ಓಡುವುದು ನನ್ನ ಜಾಯಮಾನವಲ್ಲ. ನಾನು ಕೆಪಿಎಸ್ಸಿ, ಸ್ಟಿಂಗ್ ವಿಷಯ ಪ್ರಸ್ತಾಪಿಸಿದ ಕೂಡಲೇ ಎಷ್ಟು ಕಡೆ ರನ್ನಿಂಗ್ ರೇಸ್ ಮಾಡಿದ್ದೀರಿ ಎಂದು ನನಗೆ ಗೊತ್ತಿದೆ. ಅಂಗಲಾಚುವವನಲ್ಲ ಈ ಕುಮಾರಸ್ವಾಮಿ. ನಿಮ್ಮ ಪೊಲೀಸ್ ಕಮಿಷನರ್ ಬಳಿ ಏನು ಹೇಳಿದ್ದೇನೆ ಎಂಬುದನ್ನು ತಿಳಿದುಕೊಳ್ಳಿ ಎಂದು ತಿರುಗೇಟು ನೀಡಿದ್ದಾರೆ.

ನಿಮ್ಮ ಪಕ್ಷದ ಹಿರಿಯ ನಾಯಕನನ್ನು ಸ್ಟಿಂಗ್ ಮಾಡಿದ ನಟೋರಿಯಸ್ ಸ್ಟಿಂಗ್ ಪಿನ್‌ನನ್ನೇ ಬಂಧಿಸಲು ಯೋಗ್ಯತೆ ನಿಮಗೆ ಇಲ್ಲ. ಅವನು ಬಂದು ನಿಮ್ಮ ಡಿಸಿಪಿ ಮುಂದೆ ಕಾಲು ಮೇಲೆ ಕಾಲು ಹಾಕಿ ಕೂರುತ್ತಾನೆ. ನಿಮ್ಮ ಇಲಾಖೆ ನಿವೃತ್ತ ಐಪಿಎಸ್ ಅಧಿಕಾರಿಗೆ ಕೊಲೆ ಬೆದರಿಕೆ ಹಾಕ್ತಾನೆ. ನಿಮ್ಮ ಪೊಲೀಸ್ ಅಧಿಕಾರಿಗಳ ಸ್ಟಿಂಗ್ ಮಾಡಿ ಹಫ್ತಾ ವಸೂಲಿ ಮಾಡ್ತಾನೆ. ಅವನನ್ನು ಹಿಡಿದು ಸೆದೆಬಡಿಯುವುದು ಬಿಟ್ಟು ಪುಂಗಿ ಬಿಡ್ತಾ ಇದ್ದೀರಾ ಎಂದು ವಾಗ್ದಾಳಿ ನಡೆಸಿದ್ದಾರೆ.

## ನಿಮ್ಮ ಭಾಷೆಯಲ್ಲಿಯೇ ಪ್ರತ್ಯುತ್ತರ ನೀಡುವೆ: ಪ್ರಿಯಾಂಕ್

ತಾಕತ್ತಿದ್ದರೆ ನಿಮ್ಮ ಬಳಿ ಇರುವ ದಾಖಲೆಗಳನ್ನು ಕೊಡಿ. ನಿಮ್ಮ ಬಳಿ ಸಾಕ್ಷ್ಯಾಧಾರಗಳಿದ್ದು, ನೀವು ತಪ್ಪು ಮಾಡಿದ್ದರೆ ನಿಮ್ಮನ್ನು ಖಂಡಿತವಾಗಿಯೂ ಅರೆಸ್ಟ್ ಮಾಡೇ ಮಾಡುತ್ತೇವೆ. ಗಾಳಿಯಲ್ಲಿ ಗುಂಡು ಹಾರಿಸುವುದನ್ನು ಬಿಟ್ಟು ಮಾಹಿತಿ ಹಾಗೂ ದಾಖಲೆಗಳಿದ್ದರೆ ಕೊಡಿ ಎಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ದಾಖಲೆಗಳಿದ್ದರೆ ಕಮೀಷನರ್ ಕಚೇರಿಯಲ್ಲೇ ದೂರು ಕೊಡಲಿ ಎಂದು ಸವಾಲು ಹಾಕಿದರು.

## ಸಂಭ್ರಮದ ಶ್ರೀರಂಗಪಟ್ಟಣ ದಸರಾ

ಹೊತ್ತ ಧನಂಜಯ ಆನೆಯೊಂದಿಗೆ ಲಕ್ಷ್ಮಿ ಹಾಗೂ ರೂಪ ಆನೆಗಳು ಗಾಂಭೀರ್ಯದಿಂದ ಹೆಜ್ಜೆ ಹಾಕಿ ಶ್ರೀರಂಗಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಾಗಿದವು. ಆನೆಗಳ ರಾಜಗಾಂಭೀರ್ಯ, ಧಾರ್ಮಿಕ ಆಚರಣೆಗಳು ಹಾಗೂ ಉತ್ಸವದ ವೈಭವ ಸಾರ್ವಜನಿಕರ ಗಮನ ಸೆಳೆದವು.

ಮೆರವಣಿಗೆಯಲ್ಲಿ 62 ಕಲಾತಂಡಗಳು ಹಾಗೂ 10 ಸ್ತಬ್ಧಚಿತ್ರಗಳು ಭಾಗ ವಹಿಸಿ ನಾಡಿನ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಅನಾವರಣ ಗೊಳಿಸಿದವು. ವಿವಿಧ ಕಲಾತಂಡಗಳ ಪ್ರದರ್ಶನ ಹಾಗೂ ಸಾಂಪ್ರದಾಯಿಕ ಮೆರವಣಿಗೆಯು ದಸರಾ ಮಹೋತ್ಸವದ ಮೆರುಗನ್ನು ಹೆಚ್ಚಿಸಿತು.

ಡಾ. ಭಾನುಕೃಷ್ಣ ಅವರ ನೇತೃತ್ವದಲ್ಲಿ ಶಮಿವೃಕ್ಷ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ವಿಧಿವಿಧಾನಗಳನ್ನು ಸಾಂಪ್ರದಾಯಿಕವಾಗಿ ನೆರವೇರಿಸಲಾಯಿತು.

ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿ, ಎಚ್.ಸಿ.ಬಾಲಕೃಷ್ಣ, ಶಾಸಕರಾದ ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಶಾಸಕ ದರ್ಶನ್ ಪುಟ್ಟಣ್ಣಯ್ಯ, ವಿಧಾನ ಪರಿಷತ್ ಸದಸ್ಯರಾದ ದಿನೇಶ್ ಗೂಳಿಗೌಡ ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಸಲ್ಲಿಸಿದರು.

ಜಿಲ್ಲಾಧಿಕಾರಿ ಡಾ.ಕುಮಾರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ., ಅಪರ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಉಪಸ್ಥಿತರಿದ್ದರು.

## ಸಾಂಸ್ಕೃತಿಕ ವೈಭವ

ಬಿಡುಗಡೆಗೊಳಿಸಲಾಯಿತು. ಕೃಷ್ಣರಾಜಸಾಗರ ಜಲಾಶಯದ ಬಳಿ ವಾರಣಾಸಿ ಮಾದರಿಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಆಯೋಜಿಸಲಾಗಿದೆ.

## ಮೊಬೈಲ್ ಕರೆಯಲ್ಲಿ ಹೆಸರು ಕಡ್ಡಾಯ ಆದೇಶ

–ಇದರಿಂದ ಅಪರಿಚಿತ ಕರೆಗಳ ಗುರುತು ಪತ್ತೆಹಚ್ಚಲು ಹಾಗೂ ಸ್ಪ್ಯಾಮ್ ಕರೆಗಳು ಮತ್ತು ಆನ್‌ಲೈನ್ ವಂಚನೆಗಳ ಬಗ್ಗೆ ಎಚ್ಚರಿಕೆ ವಹಿಸಲು ಗ್ರಾಹಕರಿಗೆ ಅನುಕೂಲವಾಗಲಿದೆ.

ಮೊಬೈಲ್‌ನಲ್ಲಿ ಸೇವ್ ಆಗದ ಸಂಖ್ಯೆಯಿಂದ ಕರೆ ಬಂದಾಗ ಸಾಮಾನ್ಯವಾಗಿ ಆ ಸಂಖ್ಯೆಯಷ್ಟೇ ಕಾಣಿಸುತ್ತದೆ. ಆದರೆ ಸಿಎನ್‌ಎಪಿ ವ್ಯವಸ್ಥೆ ಜಾರಿಯಾದ ಬಳಿಕ, ಗ್ರಾಹಕರ ಸಂಪರ್ಕ ಪಟ್ಟಿಯಲ್ಲಿ ಸೇವ್ ಆಗದ ದೇಶೀಯ ಸಂಖ್ಯೆಯಿಂದ ಕರೆ ಬಂದರೆ ದೂರಸಂಪರ್ಕ ಕಂಪನಿ ದಾಖಲೆಗಳಲ್ಲಿರುವ ಹೆಸರನ್ನು ಪ್ರದರ್ಶಿಸಲಾಗುತ್ತದೆ. ಈಗಾಗಲೇ ಸಂಪರ್ಕ ಪಟ್ಟಿಯಲ್ಲಿ ಸಂಖ್ಯೆ ಸೇವ್ ಆಗಿದ್ದರೆ ಆ ಪಟ್ಟಿಯಲ್ಲಿರುವ ಹೆಸರೇ ಕಾಣಿಸುತ್ತದೆ.

## ಕೀಲು ನೋವು ಅಲಕ್ಷಿಸಬೇಡಿ, ಆರೋಗ್ಯಕರ ಜೀವನ ನಡೆಸಿ: ಜೆಎಸ್‌ಎಸ್ ನಿರ್ದೇಶಕ ಮಧು

**ಮೈಸೂರು:** ಕೀಲು ನೋವು ಮತ್ತು ಸಂಧಿವಾತದ ಸಮಸ್ಯೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ವಿಶ್ವ ಸಂಧಿವಾತ ದಿನಾಚರಣೆಯನ್ನು ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್ ಮತ್ತು ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ಜ್ಯೋತಿ ಬೆಳಗಿಸುವುದರ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆಎಸ್‌ಎಸ್ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಪಿ.ಮಧು ಸಂಧಿವಾತ ಎಂದರೆ ಕೇವಲ ವೃದ್ಧರನ್ನಷ್ಟೇ ಕಾಡುವ ಕಾಯಿಲೆ ಎಂಬ ತಪ್ಪು ಕಲ್ಪನೆ ಸಮಾಜದಲ್ಲಿದೆ. ಆದರೆ ಇಂದು ಬದಲಾದ ಜೀವನ ಶೈಲಿಯಿಂದಾಗಿ ಯುವ ಪೀಳಿಗೆಯೂ ಈ ಸಮಸ್ಯೆಗೆ ತುತ್ತಾಗುತ್ತಿದೆ. ಕೀಲುಗಳ ಶಾಶ್ವತ ಹಾನಿಯನ್ನು ತಡೆಯಬಹುದು ಮತ್ತು



ರೋಗಿಗಳು ತಮ್ಮ ಸಾಮಾನ್ಯ ಜೀವನವನ್ನು ಮುಂದುವರಿಸಬಹುದು ಎಂದು ತಿಳಿಸಿದರು.

ಹಾಗೂ ಸಾರ್ವಜನಿಕರಿಗಾಗಿ ವಿಶೇಷ ರಿಯಾಯಿತ ದರದ ಆರೋಗ್ಯ ತಪಾಸಣಾ ಪ್ಯಾಕೇಜ್ ಬಿಡುಗಡೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಕ್ಲಿನಿಕಲ್ ಇಮ್ಯುನಾಲಜಿ ಹಾಗೂ ರುಮಾಟಾಲಜಿ ವಿಭಾಗದ ಮುಖ್ಯಸ್ಥ ಡಾ.ಆರ್.ಸುಬ್ರಮಣಿಯನ್, ಸಹ ಪ್ರಾಧ್ಯಾಪಕ ಡಾ.ಶಿವಪ್ರಸಾದ್, ಸಹಾಯಕ ಪ್ರಾಧ್ಯಾಪಕರಾದ ಡಾ.ಮಹಾಬಲೇಶ್ವರ್ ಇನ್ನಿತರರು ಉಪಸ್ಥಿತರಿದ್ದರು.

## ದಸರಾದಲ್ಲಿ ಕವಿತೆ ಹೇಳಿ ಗಿಡ ಪಡೆಯಿರಿ

**ಮೈಸೂರು:** 'ಸಸ್ಯಯಜ್ಞ' ತಂಡವು ಮೈಸೂರು ದಸರಾ ಮಹೋತ್ಸವದ ಅಂಗವಾಗಿ 'ಕವಿತೆ ಹೇಳಿ ಗಿಡ ಪಡೆಯಿರಿ' ಎಂಬ ವಿನೂತನ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಕನ್ನಡ ಪುಸ್ತಕ ಪ್ರಾಧಿಕಾರವು ನಗರದ ಓವಲ್ ಮೈದಾನದಲ್ಲಿ ಆಯೋಜಿಸಿರುವ ಪುಸ್ತಕ ಮೇಳದ ಆವರಣದಲ್ಲಿ 23 ಬಗೆಯ ಔಷಧೀಯ ಸಸ್ಯಗಳು ಹಾಗೂ 18 ಪ್ರಕಾರದ ಹಣ್ಣಿನ ಗಿಡಗಳು ಲಭ್ಯವಿದ್ದು, ಸಂತೋಷ್ ಎಂಬುವವರು ತಮ್ಮ ತಂದೆ–ತಾಯಿಯ ಹೆಸರಿನಲ್ಲಿ ಸಾರ್ವಜನಿಕರಿಗೆ ಒಟ್ಟು 500 ಗಿಡಗಳನ್ನು ವಿತರಿಸುವ ಅಭಿಯಾನ ನಡೆಸುತ್ತಿದ್ದಾರೆ.

ಪರಿಸರ ಹಾಗೂ ಅಕ್ಷರ ಸಂಸ್ಕೃತಿಯ ರಕ್ಷಣೆಗೆ ಮುಂದೆ ಬರಬೇಕು. ಮರ–ಗಿಡಗಳನ್ನು ಬೆಳೆಸುವುದರ ಜತೆಗೆ ಕನ್ನಡದ ಕಾವ್ಯ–ಸಾಹಿತ್ಯವನ್ನು ಉತ್ತೇಜಿಸುವ ಈ ಪರಿಕಲ್ಪನೆ ನಿಜಕ್ಕೂ ಮಾದರಿಯಾದುದು. ಹಸಿರು ಉಸಿರಾದರೆ, ಸಾಹಿತ್ಯ ನಮ್ಮ ಸಂಸ್ಕೃತಿಯ ಜೀವನಾಡಿ. ಪ್ರತಿಯೊಬ್ಬರೂ ಪರಿಸರ ಪ್ರೇಮವನ್ನು ಬದುಕಿನ ಭಾಗವಾಗಿಸಿಕೊಳ್ಳಬೇಕು. ನನ್ನ ಆತ್ಮತೃಪ್ತಿಗಾಗಿ ಹಾಗೂ ಯುವಜನತೆಗೆ ಪ್ರೇರಣೆಯಾಗಲಿ ಎಂಬ



ಸದುದ್ದೇಶದಿಂದ 25 ಸಾವಿರ ಮೊತ್ತವನ್ನು ಗಿಡಗಳ ರೂಪದಲ್ಲಿ ನೀಡುತ್ತಿದ್ದೇನೆ. ಇಂತಹ ರಚನಾತ್ಮಕ ಕಾರ್ಯಗಳಿಗೆ ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು" ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಸಚಿವರು 'ಸಸ್ಯಯಜ್ಞ' ತಂಡದಿಂದ 'ಲಕ್ಷ್ಮಣ ಫಲ' ಗಿಡವನ್ನು ಸ್ವೀಕರಿಸಿದರು. ನಂತರ ಶ್ರೀ ಸಾಯಿನಾಥ ಪ್ರಕಾಶನದ ಮಳಿಗೆಗೆ ಭೇಟಿ ನೀಡಿ, 'ಮಕ್ಕಳ ಸಾಹಸದ ಸತ್ಯ ಕಥೆಗಳು' ಎಂಬ ಪುಸ್ತಕವನ್ನು ಖರೀದಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್ ಗೌಡ ಉಪಸ್ಥಿತರಿದ್ದರು.

### ವಿದ್ಯುತ್ ದೀಪಾಲಂಕಾರ ಸೌಂದರ್ಯದ ಬೆಳಕಿನ ಹಿಂದೆ

# 642 ಅಧಿಕಾರಿಗಳು, ಸಿಬ್ಬಂದಿಯ ಪರಿಶ್ರಮ

**ಮೈಸೂರು:** ನಾಡಹಬ್ಬ ದಸರೆಯ ವೈಭವಕ್ಕೆ ಕಿರೀಟವಿಟ್ಟಂತೆ ಮೈಸೂರು ನಗರ ಪ್ರತಿವರ್ಷವೂ ವಿದ್ಯುತ್ ದೀಪಾಲಂಕಾರದ ಸೌಂದರ್ಯದಿಂದ ಲಕ್ಷಾಂತರ ಜನರು, ಪ್ರವಾಸಿಗರನ್ನು ಆಕರ್ಷಿಸುತ್ತದೆ. ಆದರೆ ಕಣ್ಮನ ಸೆಳೆಯುವ ವಿದ್ಯುತ್ ದೀಪಾಲಂಕಾರದ ಸಂಭ್ರಮದ ಹಿಂದೆ ವಿದ್ಯುತ್ ವ್ಯವಸ್ಥೆಯ ನಿರ್ವಹಣೆಗಾಗಿ ಶ್ರಮಿಸುವ ನೂರಾರು ಅಧಿಕಾರಿಗಳು ಮತ್ತು ಸಿಬ್ಬಂದಿಯ ಪರಿಶ್ರಮ ಅಡಗಿದೆ.

ದಸರಾ ಬಂತೆಂದರೆ ಅರಮನೆ ಮಾತ್ರವಲ್ಲದೇ ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ಬಣ್ಣಬಣ್ಣದ ವಿದ್ಯುತ್ ದೀಪಗಳಿಂದ ಸೃಷ್ಟಿಯಾಗುವ ಬೆಳಕಿನ ಚಿತ್ತಾರ ದಸರೆಯ ಸಂಭ್ರಮವನ್ನು ಇಮ್ಮಡಿಗೊಳಿಸುತ್ತಿದೆ. ಈ ದೀಪಾಲಂಕಾರ ಕೇವಲ ಸೌಂದರ್ಯದ ಪ್ರದರ್ಶನ ಮಾತ್ರವೇ ಆಗಿರದೆ, ಸುಗಮ ನಿರ್ವಹಣೆಗೆ ತಾಂತ್ರಿಕ ಸಿದ್ಧತೆ, ಸಮನ್ವಯ ಮತ್ತು ನಿರಂತರ ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ(ಚಾವಿಸನಿನಿ) ಯಶಸ್ವಿಯಾಗಿ ನಿರ್ವಹಿಸುತ್ತಿದೆ. ಅದೇ ರೀತಿಯಲ್ಲಿ 2026ರ ದಸರಾ ಮಹೋತ್ಸವಕ್ಕೆ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ನಿಯೋಜಿಸಿ, ಜವಾಬ್ದಾರಿವಹಿಸಲಾಗಿದೆ.

**ಮೂರು ತಂಡಗಳಲ್ಲಿ 642 ಸಿಬ್ಬಂದಿ**

ದಸರಾ ದೀಪಾಲಂಕಾರಕ್ಕಾಗಿ ಈ ಬಾರಿ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿದಂತೆ ಒಟ್ಟು 642 ಮಂದಿಯನ್ನು ನಿಯೋಜಿಸಲಾಗಿದೆ. ನಿಯೋಜಿಸಿರುವ ಅಧಿಕಾರಿಗಳು ಹಾಗೂ ಸಿಬ್ಬಂದಿಯಲ್ಲಿ ಎನ್.ಆರ್. ಮೊಹಲ್ಲಾ ವಿಭಾಗದ 323 ಮಂದಿ, ವಿ.ವಿ. ಮೊಹಲ್ಲಾ ವಿಭಾಗದ 243 ಮಂದಿ ಹಾಗೂ ಡೆಪ್ಯುಟೇಷನ್ ಮೂಲಕ ಬಂದಿರುವ 76 ಮಂದಿ



ಒಳಗೊಂಡಿದ್ದಾರೆ. ವಿದ್ಯುತ್ ದೀಪಾಲಂಕಾರದ ಕೆಲಸ ನಿರ್ವಹಣೆ ಮತ್ತು ಮೇಲ್ವಿಚಾರಣೆಯಲ್ಲಿ ಈ ತಂಡಗಳು ಪ್ರಮುಖ ಪಾತ್ರವಹಿಸಲಿವೆ.

ಇವರೊಂದಿಗೆ ತಾಂತ್ರಿಕ ಮೇಲ್ವಿಚಾರಣೆಗಾಗಿ 16 ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು(ಎಇಇ), 50 ಸಹಾಯಕ ಇಂಜಿನಿಯರ್‌ಗಳು(ಎಇ) ಹಾಗೂ 56 ಕಿರಿಯ ಇಂಜಿನಿಯರ್‌ಗಳನ್ನು(ಜೆಇ) ನಿಯೋಜಿಸಲಾಗಿದೆ. ಇವರೊಂದಿಗೆ ಮೀಟರ್ ರೀಡರ್‌ಗಳು, ಆಪರೇಟರ್‌ಗಳು, ಓವರ್‌ಸಿಯರ್‌ಗಳು, ಮೆಕ್ಯಾನಿಕ್‌ಗಳು, ಸಹಾಯಕ ಸ್ಟೋರ್ ಕೀಪರ್‌ಗಳು, ಲೈನ್ ಮೆಕ್ಯಾನಿಕ್‌ಗಳು ಹಾಗೂ ಪವರ್‌ಮ್ಯಾನ್‌ಗಳು ಸೇರಿ ವಿವಿಧ ವರ್ಗಗಳ ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ.

**ಹಿರಿಯ ಅಧಿಕಾರಿಗಳು ಭಾಗಿ**

ಇಂಧನ ಸಚಿವರಾದ ಕೆ.ಜೆ. ಜಾರ್ಜ್ ಸಲಹೆ ಹಾಗೂ ಮಾರ್ಗದರ್ಶನದೊಂದಿಗೆ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಹಾಗೂ ವ್ಯವಸ್ಥಾಪಕ ನಿರ್ದೇಶಕಿ ಎಂ.ಎಸ್. ಅರ್ಚನಾ ನೇತೃತ್ವದಲ್ಲಿ ದೀಪಾಲಂಕಾರದ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆ. ಇವರೊಂದಿಗೆ ಸೆಸ್ಕ್ ತಾಂತ್ರಿಕ ನಿರ್ದೇಶಕರಾದ ಎಲ್. ಲೋಕೇಶ್, ಮೈಸೂರು ವೃತ್ತದ ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್, ಕಾರ್ಯಪಾಲಕ ಇಂಜಿನಿಯರ್‌ಗಳಾದ ಮಾದೇಶ್ ಹಾಗೂ ಸಂದೀಪ್ ಅವರುಗಳು ದೀಪಾಲಂಕಾರದ ನಿರ್ವಹಣೆ ಹಾಗೂ ಮೇಲ್ವಿಚಾರಣೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

**ಬೆಳಕಿನ ಹಿಂದೆ ತಾಂತ್ರಿಕ ಹೊಣೆ**

ದಸರಾ ಮಹೋತ್ಸವದ ಸಂದರ್ಭದಲ್ಲಿ ವಿದ್ಯುತ್ ವ್ಯವಸ್ಥೆ ಸುಗಮವಾಗಿ ಹಾಗೂ ಸುರಕ್ಷಿತವಾಗಿ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು ಅತ್ಯಂತ ಮಹತ್ವದ ಜವಾಬ್ದಾರಿ. ದೀಪಾಲಂಕಾರದ ವ್ಯವಸ್ಥೆಗಳ ನಿರ್ವಹಣೆ, ತಾಂತ್ರಿಕ ಪರಿಶೀಲನೆ, ಮೇಲ್ವಿಚಾರಣೆ ಹಾಗೂ ಸಮಸ್ಯೆಗಳು ಎದುರಾದಾಗ ಅವುಗಳಿಗೆ ತಕ್ಷಣ ಸ್ಪಂದಿಸುವ ಕಾರ್ಯಗಳಲ್ಲಿ ಸಿಬ್ಬಂದಿಯ ಸೇವೆ ಅಗತ್ಯವಾಗುತ್ತದೆ. ಇಂತಹ ದೊಡ್ಡ ಪ್ರಮಾಣದ ಕೆಲಸಗಳಲ್ಲಿ ತಾಂತ್ರಿಕ ಜ್ಞಾನ, ಸಮಯಪ್ರಜ್ಞೆ, ಸುರಕ್ಷತಾ ಕ್ರಮಗಳ ಪಾಲನೆ ಮತ್ತು ಪರಸ್ಪರ ಸಮನ್ವಯ ಮುಖ್ಯವಾಗಿವೆ.

> ಮೈಸೂರು ದಸರಾ ಸಂದರ್ಭದಲ್ಲಿ ವಿದ್ಯುತ್ ದೀಪಾಲಂಕಾರ ಮೈಸೂರು ನಗರದ ಸೌಂದರ್ಯ ಹೆಚ್ಚಿಸಿ, ವಿಶಿಷ್ಟ ಅನುಭವ ನೀಡುತ್ತದೆ. ಈ ವೈಭವ, ಸಂಭ್ರಮವನ್ನು ಸಾಕಾರಗೊಳಿಸುವ ಕಾರ್ಯದಲ್ಲಿ ಸೆಸ್ಕ್‌ನ ಎಲ್ಲಾ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊಡುಗೆ ಸ್ಮರಣೀಯವಾಗಿದೆ. ಕಣ್ಣಿಗೆ ಕಾಣುವ ಬೆಳಕಿನ ಹಿಂದೆ ಅಡಗಿರುವ ಕಾಣದ ಕೈಗಳ ಸೇವೆ ದಸರೆಯ ಸಂಭ್ರಮದ ಅವಿಭಾಜ್ಯ ಭಾಗವಾಗಿದೆ.
>
> **ಎಂ.ಎಸ್. ಅರ್ಚನಾ,**
> ವ್ಯವಸ್ಥಾಪಕ ನಿರ್ದೇಶಕಿ, ಸೆಸ್ಕ್

## ಸಮಾಜ ತಿದ್ದುವವರು ಕವಿಗಳು: ಪೌರಾಡಳಿತ ಸಚಿವ ಹೆಚ್.ಸಿ.ಬಾಲಕೃಷ್ಣ

**ಮೈಸೂರು:** ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಮೂಲಕ ಸಮಾಜವನ್ನು ತಿದ್ದುವ ಕೆಲಸವನ್ನು ಕವಿಗಳು ಮಾಡುತ್ತಿದ್ದಾರೆ ಎಂದು ಪೌರಾಡಳಿತ ಸಚಿವ ಹೆಚ್.ಸಿ.ಬಾಲಕೃಷ್ಣ ತಿಳಿಸಿದರು.

ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿ.ಎಂ.ಶ್ರೀ ಸಭಾಂಗಣದಲ್ಲಿ ಗುರುವಾರ ನಡೆದ ಚಿಗುರು ಕವಿಗೋಷ್ಠಿಯಲ್ಲಿ ಭಾಗವಹಿಸಿ ಮಾತನಾಡಿದರು. ಹಿರಿಯ ಸಾಹಿತಿಗಳಾದ ದೇವನೂರ ಮಹಾದೇವ ಹಾಗೂ ಸಿದ್ದಲಿಂಗಯ್ಯ ಸ್ವಾಭಿಮಾನದಿಂದ ಕೂಡಿದ ಕವಿತೆಗಳ ರಚಿಸಿ ಸಮಾಜವನ್ನು ಎಚ್ಚರಿಸುವ ಕೆಲಸ ಮಾಡಿದ್ದಾರೆ ಎಂದರು.

ಅದ್ಭುತವಾದ ಪರಿಕಲ್ಪಯಲ್ಲಿ ದಸರಾ ಪ್ರಾರಂಭವಾಗಿದೆ. ದಸರಾದಲ್ಲಿ ಎಲ್ಲಾ ರಂಗದ ಪ್ರತಿಭೆಯನ್ನು ಹೊರತರುವ ಕೆಲಸ ಮಾಡಲಾಗುತ್ತದೆ. ಕವಿಗೆ ಚಿಕ್ಕವರು, ದೊಡ್ಡವರು ಎಂಬ ಬೇದವಿಲ್ಲ. ಪ್ರತಿಯೊಬ್ಬರೂ ಪುಸ್ತಕವನ್ನು ಓದುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಚಿಗುರು ಕವಿಗೋಷ್ಠಿ ಉದ್ಘಾಟಿಸಿದ ಮಕ್ಕಳ ಸಾಹಿತಿ ಬಿಳಿಗೆರೆ ಕೃಷ್ಣಮೂರ್ತಿ ಮಾತನಾಡಿ, ಕವಿತೆ ಬರೆಯುವುದು ಸುಳ್ಳಿನ ವಿರುದ್ಧ ಹೋರಾಟ ಮಾಡಿದಂತೆ. ಮನುಷ್ಯರನ್ನು ವಿಭಜನೆ ಮಾಡುತ್ತಿದ್ದ ಬಗ್ಗೆ ಪಂಪ, ಕುಮಾರವ್ಯಾಸ ಎಚ್ಚರಿಸಿದರು. ಪ್ರಭುತ್ವದ ಲೋಪವನ್ನು ಕಾವ್ಯ ಹೇಳುತ್ತದೆ. ಅದಕ್ಕೆ ಬಸವಣ್ಣ ಮತ್ತು



ಕುವೆಂಪು ಅವರೆ ಸಾಕ್ಷಿ ಎಂದರು.

ಮನುಷ್ಯ ಸತ್ತರೆ ಮಣ್ಣಿಗೆ ಹೂಳಲಾಗುತ್ತದೆ. ಆದರೆ ಮಣ್ಣು ಸತ್ತರೆ ಎಲ್ಲಿಗೆ ಹೂಳುವುದು ಎಂದು ಪ್ರಶ್ನಿಸಿದ ಅವರು, ತಾರತಮ್ಯದ ಸಮಾಜದಲ್ಲಿ ಒಳ್ಳೆಯ ಕವಿತೆ ಹುಟ್ಟಲ್ಲ, ಹುಟ್ಟಿದರೂ ಅದು ವಿಷಪೂರಿತವಾಗಿರುತ್ತದೆ. ಸಾಹಿತಿಗಳು ಹೆಚ್ಚಾಗಿ ಸಾಹಿತಿಗಳು ಮಕ್ಕಳಿಗಾಗಿ ನಾಟಕ ಬರೆಯಬೇಕು ಎಂದು ಹೇಳಿದರು.

ವಿದೇಶದಲ್ಲಿ ನೆಲೆಸಿರುವ ಕನ್ನಡ ಕವಿಗಳು ವಿಡಿಯೋ ರೇಕಾರ್ಡಿಂಗ್ ಮೂಲಕ ಕವಿತೆ ವಾಚನ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ವಹಿಸಿದ್ದರು. ಮುಖ್ಯ ಅತಿಥಿ ಲೇಖಕಿ ಡಾ.ಕವಿತಾ ಕುಸುಗಲ್, ಚಿಗುರು ಅತಿಥಿ ಎನ್.ತಾನೀಶ್, ದಸಾ ಕವಿಗೋಷ್ಠಿ ಉಪಸಮಿತಿಯ ಉಪವಿಶೇಷಾಧಿಕಾರಿ ಡಾ. ಎಂ.ದಾಸೇಗೌಡ ಸೇರಿ ಅನೇಕರು ಉಪಸ್ಥಿತರಿದ್ದರು.

## ರೀತು–ನಂದಿನಿ ಕಾದಾಟಕ್ಕೆ ಸಚಿವ ಚಲುವರಾಯಸ್ವಾಮಿ ಫಿದಾ

**ಮೈಸೂರು:** ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಗಳಲ್ಲಿ ಒಂದಾದ ಕುಸ್ತಿ ಪಂದ್ಯಾವಳಿಗೆ ವಸ್ತು ಪ್ರದರ್ಶನದ ಮೈದಾನದ ಆವರಣದಲ್ಲಿ ರಂಗುರಂಗಿನ ಚಾಲನೆ ದೊರೆತಿದೆ.

ಜಲಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಅಖಾಡದಲ್ಲಿ ಕುಸ್ತಿಪಟುಗಳ ಕೈಕುಲುಕುವ ಮೂಲಕ ಪಂದ್ಯಾವಳಿಗಳಿಗೆ ಚಾಲನೆ ನೀಡಿದರು. 17 ವರ್ಷದೊಳಗಿನ ಬಾಲಕಿಯರ 61 ಕೆಜಿ ವಿಭಾಗದಲ್ಲಿ ನಡೆದ ಆರಂಭಿಕ ಹಣಾಹಣಿಯಲ್ಲಿ ರೀತು ಮತ್ತು ನಂದಿನಿ ಅವರು ತೋರಿದ ಶಕ್ತಿಪ್ರದರ್ಶನ ಪ್ರೇಕ್ಷಕರ ಕರತಾಡನಕ್ಕೆ ಪಾತ್ರವಾಯಿತು. ಅಖಾಡದ ಬದಿಯಲ್ಲೇ ನಿಂತು ಇಬ್ಬರು ಬಾಲಕಿಯರ ಜಿದ್ದಾಜಿದ್ದಿನ ಪಟ್ಟುಗಳನ್ನು ವೀಕ್ಷಿಸಿದ ಸಚಿವರು, ಕ್ರೀಡಾಪಟುಗಳ ಚುರುಕುತನವನ್ನು ಶ್ಲಾಘಿಸಿದರು.

ಪಂದ್ಯ ವೀಕ್ಷಿಸಿದ ಬಳಿಕ ಕ್ರೀಡಾಪಟುಗಳನ್ನುದ್ದೇಶಿಸಿ ಮಾತನಾಡಿ, "ಮಣ್ಣಿನ ಕುಸ್ತಿ ನಮ್ಮ ಮೈಸೂರಿನ ಹೆಮ್ಮೆಯ ಸಂಸ್ಕೃತಿ. ಒಂದು ಕಾಲದಲ್ಲಿ ಪುರುಷ ಪ್ರಧಾನವೆನಿಸಿದ್ದ ಗರಡಿ ಮನೆಗಳಲ್ಲಿ ಇಂದು ನಮ್ಮ ಹೆಣ್ಣುಮಕ್ಕಳು ಪ್ರವೇಶಿಸಿ ಕಠಿಣ ಅಭ್ಯಾಸ ಮಾಡುತ್ತಿರುವುದು ಸಮಾಜದ ಸಕಾರಾತ್ಮಕ ಬೆಳವಣಿಗೆಯ ಸಂಕೇತ. ರೀತು ಮತ್ತು ನಂದಿನಿ ಅವರ ಆಟವನ್ನು ನೋಡಿದಾಗ ಹೆಣ್ಣುಮಕ್ಕಳು ಯಾವ ಕ್ಷೇತ್ರದಲ್ಲೂ



ಪುರುಷರಿಗಿಂತ ಕಡಿಮೆಯಿಲ್ಲ ಎಂಬುದು ಮತ್ತೊಮ್ಮೆ ಸಾಬೀತಾಗಿದೆ " ಎಂದರು.

"ದಸರಾ ಕ್ರೀಡಾಕೂಟವು ಕೇವಲ ಉತ್ಸವಕ್ಕೆ ಸೀಮಿತವಾಗದೆ ಯುವ ಕ್ರೀಡಾಪಟುಗಳ ಕ್ರೀಡಾ ಬದುಕಿಗೆ ಭದ್ರ ಬುನಾದಿಯಾಗಬೇಕು. ತಾಲೂಕು ಮತ್ತು ಜಿಲ್ಲಾ ಮಟ್ಟದಿಂದ ಬರುವ ಬಡ ಪ್ರತಿಭಾವಂತ ಪೈಲ್ವಾನರಿಗೆ ಉತ್ತಮ ಪೌಷ್ಟಿಕ ಆಹಾರ ಹಾಗೂ ಅತ್ಯಾಧುನಿಕ ಮ್ಯಾಟ್ ಕುಸ್ತಿ ತರಬೇತಿ ಸಿಗುವಂತಾಗಲು ಇಲಾಖೆಯ ವತಿಯಿಂದ ಸೂಕ್ತ ಯೋಜನೆ ರೂಪಿಸಲಾಗುವುದು. ಪ್ರತಿಯೊಬ್ಬ ಕ್ರೀಡಾಪಟುವೂ ಸೋಲು–ಗೆಲುವನ್ನು ಸಮಚಿತ್ತದಿಂದ ಸ್ವೀಕರಿಸಿ, ಕ್ರೀಡಾಸ್ಫೂರ್ತಿಯನ್ನು ಮೆರೆಯಬೇಕು" ಎಂದು ಕರೆ ನೀಡಿದರು.

ಅಖಾಡದಲ್ಲಿ ಕಿಕ್ಕಿರಿದು ನೆರೆದಿದ್ದ ಪ್ರೇಕ್ಷಕರು ಜೈಕಾರ ಕೂಗುವ ಮೂಲಕ ಕುಸ್ತಿಪಟುಗಳನ್ನು ಹುರಿದುಂಬಿಸಿದರು. ಶಾಸಕ ಹರೀಶ್ ಗೌಡ ಇದ್ದರು.

## ಬಂಬೂ ಬಿರಿಯಾನಿಗೆ ಡಿಮ್ಯಾಂಡ್

### ನಳ್ಳಿಸಾರು ಶೋಲ್ಡ್‌ಔಟ್, ಬಿದಿರಕ್ಕಿಪಾಯಸಕ್ಕೂ ಬೇಡಿಕೆ

**ಮೈಸೂರು:** ದಸರೆಯಲ್ಲಿ ರಾಜ್ಯದ ವಿವಿಧ ಖಾದ್ಯ ಆಹಾರದಲ್ಲಿ ಪೈಪೋಟಿ ನಡೆಯುತ್ತಿರುವ ಮಧ್ಯದಲ್ಲೇ ಆದಿವಾಸಿಗಳ ಬಂಬೂ ಬಿರಿಯಾನಿಗೆ ಎಂದಿನಂತೆ ಡಿಮ್ಯಾಂಡ್ ಹೆಚ್ಚಿದ್ದರೆ, ನಳ್ಳಿ ಸಾರು ಶೋಲ್ಡ್ ಔಟ್ ಆಗಿದೆ. ಉಳಿದಂತೆ ಮಾಕಳಿ ಬೇರಿನ ಟೀ, ಬಿದರಕ್ಕಿ ಪಾಯಸಕ್ಕೂ ಇನ್ನಿಲ್ಲದ ಬೇಡಿಕೆಯಿಂದ ಆಹಾರ ಪ್ರಿಯರ ಕೈ ಬಿಸಿ ಕರೆಯುತ್ತಿದೆ.

ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಿರುವ ಆಹಾರ ಮೇಳದಲ್ಲಿ ಒಂದೆಡೆ ಮಾಂಸಹಾರಿ ಖಾದ್ಯಗಳ ಕೋಂಬೋ ಆಫರ್ ನಲ್ಲಿ ಬಿರಿಯಾನಿ, ಕಬಾಬ್, ಫಿಶ್ ಕಬಾಬ್, ಮೊಟ್ಟೆ ಹೀಗೆ ಅನೇಕ ವಿವಿಧಗಳು ಮಾಂಸ ಪ್ರಿಯರ ಬಾಯಿ ರುಚಿ ನೀಡುತ್ತಿವೆ. ಮತ್ತೊಂದೆಡೆ ಸಸ್ಯಹಾರಿಗಳನ್ನು ಸಹ ಮೇಲುಕೋಟೆ ಪುಳಿಯೋಗರದ್ದೇ ನಾಲ್ಕೈದು ಮಳಿಗೆ ಆವರಿಸಿಕೊಂಡಿದ್ದರೆ ಉಳಿದಂತೆ ದಾವಣಗೆರೆ ಬೆಣ್ಣೆದೋಸೆ, ಮೈಸೂರು ಬಜ್ಜಿ, ರೋಟಿ ಬಾಸ್, ಪಾನಿಪುರಿ, ಮಸಲಾಪುರಿ ಹೀಗೆ ವಿವಿದ ಚಾಟ್ಸ್‌ಗಳು ಆಹಾರ ಪ್ರಿಯತ ಬಾಯಿರುಚಿ ಈಡೇರಿಸುತ್ತಿವೆ.




ಈ ಕುರಿತು ಮಾತನಾಡಿದ ಬಂಬೂ ಬಿರಿಯಾನಿ ಮಾಲೀಕರಾದ ಎಂ.ಕೃಷ್ಣಯ್ಯ ಮಾತನಾಡಿ, ಈ ಬಾರಿ ಬಂಬೂ ಬಿರಿಯಾನಿಗೆ ಬೇಡಿಕೆ ಹೆಚ್ಚಿದೆ. ಅದರಲ್ಲೂ ನಾಟಿ ಸ್ವಾಭಾವಿಕ ನಳ್ಳಿಗಳನ್ನು ಹಿಡಿದು ತರಬೇಕಿದೆ. ಇಲ್ಲಿ ಡಿಮ್ಯಾಂಡ್ ಹೆಚ್ಚಾಗಿ ಖಾಲಿ ಆಗಿದೆ. ಗ್ರಾಹಕರು ಕೇಳುತ್ತಿರುವುದರಿಂದ ಅದನ್ನು ಹುಡುಕಿಸಿ ತರಿಸುವ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ 60 ವರ್ಷದ ಬಿದಿರಿನಿಂದ ಬರುವ ಅಕ್ಕಿಯಿಂದ ತಯಾರಿಸಲ್ಪಡುವ ಅಪರೂಪದ ಬಿದಿರಕ್ಕಿ ಪಾಯಸಕ್ಕೂ ಬೇಡಿಕೆಯಿದೆ. ಮಾಕಳಿ ಬೇರಿನ ಟೀಗೂ ಬೇಡಿಕೆಗೆ ಅನುಗುಣವಾಗಿ ನೀಡುತ್ತಿದ್ದೇವೆಂದು ಸಂತಸ ಹಂಚಿಕೊಂಡರು.

### ಕರಾವಳಿ ಮೈಸೂರು ಬೆಸೆಯುವ ವೇದಿಕೆಯತ್ತ ಜನವೋ ಜನ

# ತಾಲೀಮಿನಲ್ಲೂ ಕಂಬಳ ಜೋರು

**ಮೈಸೂರು:** ಇದೇ ಮೊಟ್ಟ ಮೊದಲ ಬಾರಿಗೆ ವಿಶ್ವವಿಖ್ಯಾತ ದಸರೆಯಲ್ಲಿ ಕರಾವಳಿಯ ಕಂಬಳ ಆಯೋಜನೆಗೆ ಸಕಲ ರೀತಿಯಲ್ಲೂ ಮೈಸೂರು ಸಿದ್ದಗೊಂಡಿದ್ದು, ಗುರುವಾರ ನಡೆದ ಪೂರ್ವ ತಾಲೀಮಿಗೆ ಜನ ಸಮೂಹ ಹರಿದು ಬರುವ ಮೂಲಕ ಕಂಬಳ ದಸರೆ ಜೋಶ್ ಹೆಚ್ಚಿಸಿದರು.

ನಗರದ ಹೊರವಲಯದ ಸಾತಗಳ್ಳಿಯ ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜಿನ ಹಿಂಭಾಗದ ಮೈದಾನದಲ್ಲಿ ಆಯೋಜನೆಗೊಂಡಿರುವ ಎರಡು ದಿನಗಳ 'ಕಂಬಳದ ಪೂರ್ವಾಭ್ಯಾಸ ಪ್ರಾಯೋಗಿಕ ಓಟಕ್ಕೆ ಮಚ್ಚೂರು ಕಲ್ಕೂಡೆ ಲೋಕೇಶ್ ಶೆಟ್ಟಿ ಮಾಲೀಕತ್ವದ ಕೋಣಗಳನ್ನು ಓಡಿಸುವ ಎರಡನೇ ಹಂತದ ಪ್ರಯೋಗ ಗುರುವಾರ ಯಶಸ್ವಿಗೊಂಡಿತು. ಕೆಸರಿನ ಟ್ರ್ಯಾಕ್‌ನಲ್ಲಿ ಕೋಣಗಳ ಓಟ ನೋಡಲು ದೊಡ್ಡ ಸಂಖ್ಯೆಯಲ್ಲಿ ಸೇರಿದ್ದ ಜನರಿಗೆ ಮುದ ನೀಡಿತ್ತು. ರಾತ್ರಿ ಕೂಡ ಝಗಮಗಿಸುವ



ಬಣ್ಣದ ಚಿತ್ತಾರ ಸೃಷ್ಟಿಸಿ ಕಿನ್ನರಲೋಕವೇ ಸೃಷ್ಟಿಯಾಗಿತ್ತು. ಪ್ರತಿ ಓಟ ನಡೆದಾಗಲೂ ಜನರು ಕೇಕೆ, ಶಿಳ್ಳೆ, ಕೂಗು ಹಾಕುವಿಕೆಯಲ್ಲಿ ನಿರತರಾಗಿದ್ದರು.

ಕರಾವಳಿ ಕಂಬಳವನ್ನು ಈ ಭಾಗದ ಜನರಿಗೆ ತೋರುವ ಉದ್ದೇಶ ಹೊಂದಲಾಗಿದೆ. ಅಲ್ಲದೆ, ಹೆಚ್ಚಿನ ಜನರು ಕಂಬಳ ವೀಕ್ಷಿಸಲು ಉತ್ಸಾಹ ತೋರುತ್ತಿದ್ದಾರೆ. ಇಲ್ಲಿ ಮೂಲ ಸೌಲಭ್ಯ ವ್ಯವಸ್ಥೆ ಮಾಡಲಾಗಿದೆ. ಇದನ್ನು ನೋಡಲು ಯಾವುದೇ ಪಾಸ್ ಇಲ್ಲ. ಅವರು ಸದ್ಯದಲ್ಲೇ ಬರುವ ಕುರಿತಂತೆ ಖಚಿತ ಮಾಡಲಿದ್ದಾರೆ. ಇದೇ ಶನಿವಾರ ಬೆಳಗ್ಗೆ 9 ಕ್ಕೆ ಕಂಬಳಕ್ಕೆ ಚಾಲನೆ ಸಿಗಲಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಉದ್ಘಾಟನಾ ಕಾರ್ಯಕ್ರಮ ಬದಲು ಭಾನುವಾರ ಸಾಯಂಕಾಲ ಕಂಬಳ ಕಾರ್ಯಕ್ರಮಕ್ಕೆ ಬರುತ್ತಾರೆ ಎಂದು ತಿಳಿಸಿದರು.

> ಅದರಲ್ಲೂ ವಾಜಿ ಸಿಎಂ ಸಿದ್ದರಾಮ್ಂಯು ಅವರ ಬಗ್ಗೆ ತೇಜೋವಧೆ ವಾಡಿರುವುದು ಸರಿಯಿಲ್ಲ, ಅವರೊಬ್ಬರು ಉತ್ತಮ ಅವರ ಬಗ್ಗೆ ಕೆಟ್ಟದಾಗಿ ನಡೆದುಕೊಳ್ಳಲಾಗುತ್ತಿರುವುದು ಸಂಲ್ಲ. ಈ ರೀತಿ ವಾಡುವವರಿಗೆ ಮುಂದೆ ಜನರೇ ಪಾಠ ಕಲಿಸುತ್ತಾರೆ. ಜನರು ಇದಕ್ಕೆ ಮಹತ್ವ ಕೊಡಬಾರದು. ಇದರ ಜೊತೆಗೆ ಸಾರ್ವಜನಿಕ ಬದುಕಿನಲ್ಲಿರುವವರು ಎಚ್ಚರಿಕೆಯಿಂದ ಇರಬೇಕು.
>
> **ಅಶೋಕ್ ಕುಮಾರ್ ರೈ**
> ಶಾಸಕ

# 17ರಂದು ವಿ.ರವಿಚಂದ್ರನ್‌ರಿಂದ ದಸರಾ ಉದ್ಘಾಟನೆ

## ಚಾಮರಾಜನಗರ ದಸರಾ ಮಹೋತ್ಸವ-2026ರ ಲಾಂಛನ (ಲೋಗೋ) ಬಿಡುಗಡೆ

**ಚಾಮರಾಜನಗರ:** ಪಶುಸಂಗೋಪನೆ, ರೇಷ್ಮೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ನಗರದಲ್ಲಿಂದು ಚಾಮರಾಜನಗರ ದಸರಾ ಮಹೋತ್ಸವ-2026ರ ಲಾಂಛನ (ಲೋಗೋ) ಬಿಡುಗಡೆಗೊಳಿಸಿದರು.



ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವ-2026ರ ಕಾರ್ಯಕ್ರಮದ ಸುಗಮ ನಿರ್ವಹಣೆಗಾಗಿ ರಚಿಸಲಾಗಿರುವ ವಿವಿಧ ಸಮಿತಿಗಳ ಅಧಿಕಾರಿಗಳನ್ನೊಳಗೊಂಡ ಸಿದ್ಧತಾ ಪರಿಶೀಲನಾ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ದಸರಾ ಲಾಂಛನ ಬಿಡುಗಡೆ ಮಾಡಿದರು.

ಬಳಿಕ ದಸರಾ ಕಾರ್ಯಕ್ರಮ ಸಿದ್ಧತೆಗಾಗಿ ರಚಿಸಲಾಗಿರುವ ಸಮಿತಿ ಅಧಿಕಾರಿಗಳಿಂದ ಮಾಹಿತಿ ಪಡೆದು ಬಳಿಕ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಜಿಲ್ಲಾಕೇಂದ್ರದಲ್ಲಿ ಮೂರು ದಿನಗಳ ಕಾಲ ನಡೆಯುವ ದಸರಾ ಕಾರ್ಯಕ್ರಮ ನಿರ್ವಹಣೆಗಾಗಿ ರಚಿಸಲಾಗಿರುವ ಸ್ವಾಗತ ಸಮಿತಿ, ವೇದಿಕೆ, ಸಮಿತಿ, ಸ್ವಚ್ಛತಾ ಸಮಿತಿ ಸಾಂಸ್ಕೃತಿಕ ಸಮಿತಿ ಸೇರಿದಂತೆ ವಿವಿಧ ಸಮಿತಿಗಳಲ್ಲಿರುವ ಜಿಲ್ಲಾಮಟ್ಟದ ಅಧಿಕಾರಿಗಳು ಅತ್ಯಂತ ಶಿಸ್ತು ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಸೂಚಿಸಿದರು.

ದಸರಾ ಅಂಗವಾಗಿ ಪಟ್ಟಣದಲ್ಲಿ ಪ್ರಮುಖ ರಸ್ತೆಗಳು ಹಾಗೂ ಎಲ್ಲಾ ಸರ್ಕಾರಿ ಕಚೇರಿಗಳು, ಖಾಸಗಿ ಕಟ್ಟಡಗಳಲ್ಲಿ ದೀಪಾಲಂಕಾರ ಮಾಡಬೇಕು. ಶಿಷ್ಟಾಚಾರ ಪ್ರಕಾರವೇ ಕಾರ್ಯಕ್ರಮ ನಡೆಯಲಿದ್ದು, ಎಲ್ಲಾ ಕಲಾಪ್ರಕಾರಗಳಿಗೂ ಆದ್ಯತೆ ನೀಡಬೇಕು ಉಸ್ತುವಾರಿ ಸಚಿವರು ತಿಳಿಸಿದರು.

ರೈತ ದಸರಾ ಅಂಗವಾಗಿ ರೈತರಿಗೆ ನಡೆಸಲಾಗುವ ಹಾಲು ಕರೆಯುವ ಸ್ಪರ್ಧೆ ಹಾಗೂ ಶ್ವಾನ ಪ್ರದರ್ಶನಕ್ಕಾಗಿ ನಿಗದಿತ ದಿನಕ್ಕಿಂತ ಹಿಂದಿನ ದಿನವೇ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಬೇಕು. ದಸರಾ ಕಾರ್ಯಕ್ರಮಗಳಿಗೆ ಆಗಮಿಸಿ ತಂಗುವ ಕಲಾವಿದರಿಗೆ ಊಟ, ಉಪಹಾರ, ವಸತಿ ವ್ಯವಸ್ಥೆಯು ಸುವ್ಯವಸ್ಥಿತವಾಗಿರಬೇಕು. ಆಹಾರ ಮೇಳಕ್ಕೆ ಆಹಾರ ಸುರಕ್ಷತಾ ಅಧಿಕಾರಿಗಳನ್ನು ಆಹಾರ ತಪಾಸಣೆಗೆ ನೇಮಿಸಬೇಕು. ಮಹಿಳಾ ದಸರಾ ಅಂಗವಾಗಿ ನಡೆಯುವ ವಿವಿಧ ಸ್ಪರ್ಧೆಗಳಿಗೆ ಸಿದ್ಧತೆ ಪೂರ್ಣಗೊಳಿಸಬೇಕು ಎಂದು ಸಚಿವರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಯುವ ಸಂಭ್ರಮ ಕಾರ್ಯಕ್ರಮದಡಿ ಜಿಲ್ಲೆಯ ಎಲ್ಲಾ ಪ್ರೌಢಶಾಲಾ ಹಾಗೂ ಪದವಿಪೂರ್ವ ಹಾಗೂ ಪದವಿ, ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಕಲಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಬೇಕು. ಮ್ಯಾರಥಾನ್ ಹಾಗೂ ಪಾರಂಪರಿಕ ನಡಿಗೆ ವ್ಯವಸ್ಥಿತವಾಗಿ ಆಯೋಜಿಸಬೇಕು. ಮೆರವಣಿಗೆಯನ್ನು ಆಕರ್ಷಣೀಯವನ್ನಾಗಿಸಲು ವಿವಿಧ ಇಲಾಖೆಗಳು ಅನುಷ್ಠಾನಗೊಳಿಸುವ ಸರ್ಕಾರದ ಅಭಿವೃದ್ಧಿ ಕಾರ್ಯಕ್ರಮಗಳನ್ನೊಳಗೊಂಡ ಸ್ತಬ್ಧಚಿತ್ರಗಳನ್ನು ತಯಾರಿಸಬೇಕು. ಮೆರವಣಿಗೆಯಲ್ಲಿ ಜಿಲ್ಲೆಯ ಕಲಾತಂಡಗಳಲ್ಲದೆ ಇತರೆ ಜಿಲ್ಲೆಯ ಕಲಾತಂಡಗಳನ್ನು ನಿಯೋಜನೆ ಮಾಡಬೇಕೆಂದು ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ತಿಳಿಸಿದರು.

ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ದಸರಾ ಕಾರ್ಯಕ್ರಮಗಳ ನಿರ್ವಹಣೆಗಾಗಿ ವಿವಿಧ ಅಧಿಕಾರಿಗಳನ್ನೊಳಗೊಂಡ ಸಮಿತಿ ರಚಿಸಲಾಗಿದ್ದು, ಈಗಾಗಲೇ ವಿವಿಧ ಸಮಿತಿಗಳ ಸಭೆ ನಡೆಸಿ ದಸರಾ ಕಾರ್ಯಕ್ರಮ ಆಯೋಜನೆಗೆ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಲಾಗಿದೆ. ಅಚ್ಚುಕಟ್ಟಾಗಿ ನಿರ್ವಹಣೆಗೆ ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. ದಸರಾ ಮಹೋತ್ಸವ ಕಾರ್ಯಕ್ರಮದ ವ್ಯವಸ್ಥಿತ ಸಿದ್ಧತೆಗಾಗಿ ಎಲ್ಲಾ ತಾಲೂಕುಗಳ ತಹಶೀಲ್ದಾರರನ್ನು ನಿಯೋಜಿಸಿಕೊಳ್ಳಲಾಗಿದೆ. ಎಲ್ಲಾ ಕಾರ್ಯಕ್ರಮಗಳನ್ನು ಜನಾಕರ್ಷಕಗೊಳಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕರಾದ ಶ್ರೀಪತಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ನಂದೀಶ್, ಕಾವೇರಿ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಜಗನ್ನಾಥ್, ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಭಾಸ್ಕರ್, ಹೆಚ್ಚುವರಿ ಜಿಲ್ಲಾಧಿಕಾರಿ ವಿ. ಪ್ರಿಯದರ್ಶಿನಿ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಡಿ.ಸಿ. ಶೃತಿ, ಜಿಲ್ಲಾಮಟ್ಟದ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟಿ ಅವರು ಅಕ್ಟೋಬರ್ 17ರಂದು ಸಂಜೆ ಖ್ಯಾತ ಚಲನಚಿತ್ರ ನಟರಾದ ವಿ. ರವಿಚಂದ್ರನ್ ಅವರು ದಸರಾ ಉದ್ಘಾಟನೆ ನೆರವೇರಿಸುವರು. ರಾಜ್ಯಮಟ್ಟದ ಹೆಸರಾಂತ ಕಲಾವಿದರು ಹಾಗೂ ಜಿಲ್ಲೆಯ ಕಲಾವಿದರಿಂದ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಾಡು ಮಾಡಲಾಗಿದೆ. ಇದೇ ಮೊದಲ ಬಾರಿಗೆ ದಸರಾ ಅಂಗವಾಗಿ ಹೆಲಿ ರೈಡ್ ಆಯೋಜಿಸಲಾಗುತ್ತಿದೆ. ಹೀಗೆ ಹಲವು ವಿಭಿನ್ನ ಕಾರ್ಯಕ್ರಮಗಳ ಮೂಲಕ ದಸರಾ ಮಹೋತ್ಸವ ನಡೆಯಲಿದೆ ಎಂದರು.

### ಶ್ರೀ ಚಾಮರಾಜೇಶ್ವರ ದೇವಸ್ಥಾನದಲಿ ಪೂಜೆ

ಅಕ್ಟೋಬರ್ 17ರಂದು ಬೆಳಿಗ್ಗೆ 10.40ರಿಂದ 11.30 ಗಂಟೆಯೊಳಗಿನ ಶುಭ ಸಮಯದಲ್ಲಿ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ಪೂಜಾ ಕೈಂಕರ್ಯಗಳನ್ನು ನೆರವೇರಿಸುವ ಮೂಲಕ ಮೂರು ದಿನಗಳ ಚಾಮರಾಜನಗರ ಜಿಲ್ಲಾ ದಸರಾ ಮಹೋತ್ಸವಕ್ಕೆ ಅಧಿಕೃತ ಚಾಲನೆ ದೊರೆಯಲಿದೆ. ಎಲ್ಲಾ ಕಾರ್ಯಕ್ರಮಗಳ ಆಯೋಜನೆ ಅಚ್ಚುಕಟ್ಟಾಗಿ ಇರಬೇಕು. ಯಾವುದೇ ಲೋಪಗಳಾಗದಂತೆ ಎಲ್ಲಾ ಸಿದ್ದತಾ ಕಾರ್ಯಗಳನ್ನು ಶೀಘ್ರವಾಗಿ ಪೂರ್ಣಗೊಳಿಸಬೇಕು. ರೈತ ದಸರಾ, ಮಹಿಳಾ ದಸರಾ ಕಾರ್ಯಕ್ರಮಗಳಲ್ಲಿನ ವಿವಿಧ ಸ್ಪರ್ಧೆಗಳು ಹಾಗೂ ಪಾರಂಪರಿಕ ನಡಿಗೆ, ಮ್ಯಾರಥಾನ್ ಎಲ್ಲವೂ ವ್ಯವಸ್ಥಿತವಾಗಿರುವಂತೆ ನೋಡಿಕೊಳ್ಳಲು ಮುಂದಾಗುವಂತೆ ಸಚಿವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ!

ಕ್ಷಮಿಸೋ,,, ಕೃಷ್ಣ ಕ್ಷಮಿಸೋ,,,
ಕ್ಷಮಿಸೋ ದೇವನೆ ದೇವ ಕ್ಷಮಿಸೋ।
ತಣಿಸೋ,, ಮನ ತಣಿಸೋ,,,
ತಣಿಸೋ ಮನ ಭಕ್ತಿಲಿ ತಣಿಸೋ॥
ಕ್ಷಣ ಚಿತ್ತ, ಕ್ಷಣ ಪಿತ್ತ ಶಿರವು,
ಚಂಚಲ ಮನಸಿನ ತನುವು।
ಮತ್ಸರದ ಬುದ್ಧಿ ಗುಣವು,
ದ್ವೇಷದ ಕಿಚ್ಚಿನ ಕುಲವು ॥
ಅಪರಂಜಿ ಮನವ ನಾ ಸುಟ್ಟೆ,
ಮುಗ್ಧತನವನು ಮರೆತು ಬಿಟ್ಟೆ।
ಹಣದ ಮತ್ತನು ನಾ ನೆಟ್ಟೆ,
ಹುಟ್ಟು ಕಾರಣವ ತಿಳಿಯದೆ ಕೆಟ್ಟೆ॥
ಗುಡಿ ಗುಂಡಾರ ಸುತ್ತಿ ಬಂದೆ,
ಫಲಗಳ ಬೇಡುತ ನಿಂದೆ।
ಮನ ಶುದ್ಧಿ ಮಾಡದೆ ಬಂದೆ,
ಹೇಮಗಿರೀಶನೇ ಮನ್ನಿಸೆಂದೆ॥

# ಎಸ್‌ಸಿ, ಎಸ್‌ಟಿ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸಲು ಎಂ.ರಾಮಚಂದ್ರ ಆಗ್ರಹ

**ಮೀಸಲಾತಿ ಹೆಚ್ಚಳ ಮಾಡದಿದ್ದರೆ ಶ್ರೀಪ್ರಸನ್ನಾನಂದ ಶ್ರೀಗಳ ನೇತೃತ್ವದಲ್ಲಿ ಜನಾಂದೋಲನ: ಪು.ಶ್ರೀನಿವಾಸನಾಯಕ ಎಚ್ಚರಿಕೆ**



**ಚಾಮರಾಜನಗರ:** ಪರಿಶಿಷ್ಠ ಜಾತಿ, ಪರಿಶಿಷ್ಠಪಂಗಡದ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಬೇಕು ಎಂದು ಚಾಮರಾಜನಗರ ಜಿಲ್ಲಾ ನಾಯಕ ಜನಾಂಗದ ಹೋರಾಟ ಸಮಿತಿಯ ಮುಖಂಡ ಎಂ.ರಾಮಚಂದ್ರ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಸಮುದಾಯದ ವಾಲ್ಮೀಕಿ ಗುರುಪೀಠದ ಶ್ರೀಪ್ರಸನ್ನಾನಂದಸ್ವಾಮೀಜಿಯವರು 257ಕ್ಕೂ ಹೆಚ್ಚು ದಿನಗಳ ಕಾಲ ಅಹೋರಾತ್ರಿ ಹೋರಾಟ ಫಲವಾಗಿ ರಾಜ್ಯ ಸರ್ಕಾರ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳ ಮಾಡಿತು. ಆದರೆ ವ್ಯಕ್ತಿಯೊಬ್ಬ ತಡೆಯಾಜ್ಞೆ ಮಾಡಿದ ಹಿನ್ನಲೆಯಲ್ಲಿ ಕರ್ನಾಟಕ ಹೈಕೋರ್ಟ್ 2022ರಲ್ಲಿ

ಬೊಮ್ಮಾಯಿ ಅವರ ಸರ್ಕಾರ ಜಾರಿಗೆ ತಂದಿದ್ದ ಎಸ್ ಸಿ, ಮೀಸಲಾತಿಯನ್ನು ಶೇ. 15 ರಿಂದ 17ಕ್ಕೆ. ಮತ್ತು ಎಸ್‌ಟಿ ಮೀಸಲಾತಿಯನ್ನು ಶೇ. 3ರಿಂದ 7ಕ್ಕೆ ಹೆಚ್ಚಿಸುವ ನಿರ್ಧಾರವನ್ನು ರದ್ದುಗೊಳಿಸಿದೆ. ರಾಜ್ಯ ಸರ್ಕಾರ ನೇಮಿಸಿದ ವಕೀಲರು ಸರಿಯಾಗಿ ನ್ಯಾಯಾಲಯಕ್ಕೆ ಹಾಜರಾಗಿ ವಾದ ಮಂಡಿಸಿದರೆ ಇದು ಆಗುತ್ತಿರಲಿಲ್ಲ. ಸರ್ಕಾರದ ನಿರ್ಲಕ್ಷ ಧೋರಣೆಯಿಂದ ಇದಾಗಿದೆ. ಅಲ್ಲದೆ ರಾಜ್ಯ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸದಿರುವುದು ಅತ್ಯಂತ ಖಂಡನೀಯವಾಗಿದೆ. ಯಾವುದೇ ಸರ್ಕಾರಗಳು ನಮ್ಮ ಸಮುದಾಯಗಳ ಮೀಸಲಾತಿ ಹೆಚ್ಚಿಸುವ ಕೆಲಸ ಮಾಡಿಲ್ಲ ಎಂದು ಆರೋಪಿಸಿದರು.

ದೇಶದ ಅನೇಕ ರಾಜ್ಯಗಳಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಎಸ್‌ಸಿ, ಎಸ್‌ಟಿ ಮೀಸಲಾತಿ ಜಾರಿಮಾಡಿದೆ. ಕೇಂದ್ರದಲ್ಲೂ ಶೇ50 ಕ್ಕಿಂತ ಹೆಚ್ಚಿನ ಮೀಸಲಾತಿ ಇದೆ. ತಮಿಳುನಾಡಿನಲ್ಲಿ ಶೇ. 69 ರಷ್ಟು. ಬಿಹಾರ ಶೇ.65 ರಷ್ಟು, ರಾಜಸ್ತಾನ ಶೇ. 64 ರಷ್ಟು, ಆಂಧ್ರಪ್ರದೇಶ ಶೇ. 60 ರಷ್ಟು, ಸಿಕ್ಕಿಂ ನಲ್ಲಿ 60ರಿಂದ 79 ರಷ್ಟು ಹೀಗೆ ಇನ್ನೂ ಅನೇಕ ರಾಜ್ಯಗಳಲ್ಲಿ ಶೇ. 50ಕ್ಕಿಂತ ಹೆಚ್ಚು ಮೀಸಲಾತಿ ಜಾರಿಯಲ್ಲಿದೆ. ಆದರೆ ಕರ್ನಾಟಕದಲ್ಲಿ ಮಾತ್ರ ಶೇ 50 ರಷ್ಯಕ್ಕೆ ಮಿತಿ ಮಾಡಿರುವುದು ಸರಿಯಲ್ಲ. ಆಗಾಗಿ ರಾಜ್ಯದಲ್ಲೂ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಬೇಕು ಇಲ್ಲದಿದ್ದರೆ ಸಮುದಾಯ ಸಮುದಾಯದ ವಾಲ್ಮೀಕಿ ಗುರುಪೀಠದ ಶ್ರೀಪ್ರಸನ್ನಾನಂದಸ್ವಾಮೀಜಿಗಳ ನೇತೃತ್ವದಲ್ಲಿ ರಾಜ್ಯಾದ್ಯಂತ. ಉಗ್ರ ಮಾಡಲಾಗುವುದು ಎಂದು ಎಚ್ಚರಿಸಿದರು.

ಆದರೆ ಮೀಸಲಾತಿ ಹೆಚ್ಚಿಸುವ ನಿರ್ಧಾರವನ್ನು ನ್ಯಾಯಾಲಯ ರದ್ದುಪಡಿಸಿರುವುದು ಸಮುದಾಯಗಳಿಗೆ ಕೊಡಲಿಪೆಟ್ಟು ಬಿದ್ದಾಂತಾಗಿದೆ. ನ್ಯಾಯಾಲಯದ ತೀರ್ಪು ವಿರುದ್ಧ ರಾಜ್ಯ ಸರ್ಕಾರ ಮೇಲ್ಮನವಿ ಸಲ್ಲಿಸಿ ಕೇಂದ್ರ, ರಾಜ್ಯ ಸರ್ಕಾರ ನಮಗಾಗಿರುವ ಅನ್ಯಾಯ ಸರಿಪಡಿಸಬೇಕು ಇಲ್ಲದಿದ್ದರೆ ಸಮುದಾಯದ ಗುರುಪೀಠದ ವಾಲ್ಮೀಕಿ ಶ್ರೀಪ್ರಸನ್ನಾನಂದಸ್ವಾಮೀಜಿಯವರು ನೇತೃತ್ವದಲ್ಲಿ ರಾಜ್ಯಾದ್ಯಂತ ಜನಾಂದೋಲನ ಮಾಡಬೇಕಾಗುತ್ತದೆ, ಮುಂದಿನ ಚುನಾವಣೆಯಲ್ಲಿ ಪರ್ಯಾಯ ಮಾರ್ಗ ಅನುಸರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ನಗರಸಭಾ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ನಾಯಕ ಸಮುದಾಯದ ಮುಖಂಡ ಮಲ್ಲೇಶ್ ನಾಯಕ, ಸುರೇಶ್‌ನಾಯಕ ಇದ್ದರು.

**ಮಹಿಳಾ ಕಾಲೇಜಿನಲ್ಲಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ**

# ವಿದ್ಯಾರ್ಥಿಗಳು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ

**ಚಾಮರಾಜನಗರ:** ಕಾಲೇಜು ವಿದ್ಯಾರ್ಥಿಗಳು ನಿರಂತರ ಅಭ್ಯಾಸ ಮಾಡುವುದರಿಂದ ಜೀವನದಲ್ಲಿ ಯಶಸ್ಸು ಸಾಧಿಸಲು ಸಾಧ್ಯವಾಗುತ್ತದೆ ಎಂದು ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕಿ ಪುಟ್ಟಗೌರಮ್ಮ ಸಲಹೆ ನೀಡಿದರು.



ನಗರದ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನಲ್ಲಿ ಜಿಲ್ಲಾ ಪ್ರಾಂಶುಪಾಲರ ಮತ್ತು ಉಪನ್ಯಾಸಕರ ರಾಸಾಯನಶಾಸ್ತ್ರ ವೇದಿಕೆ ವತಿಯಿಂದ ಸೋಮವಾರ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪದವಿ ಪೂರ್ವ ಕಾಲೇಜು ಜೀವನ ಎನ್ನುವುದು ಪ್ರತಿಯೊಬ್ಬರ ಬದುಕಿನ ಅತ್ಯಂತ ಸುಂದರ ಮತ್ತು ಮಹತ್ವದ ಘಟ್ಟ. ಇಲ್ಲಿ ಕೇವಲ ಪದವಿಗಾಗಿ ಓದುವುದಷ್ಟೇ ಅಲ್ಲ, ನಿಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ, ನಿಮ್ಮ ಕನಸುಗಳಿಗೆ ರೆಕ್ಕೆ ಕಟ್ಟುವ ಅದ್ಭುತ ಸಮಯ ಇದಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ನಿರಂತರವಾಗಿ ಅಧ್ಯಯನ ನಡೆಸುವ ಮೂಲಕ ಉತ್ತಮ ಅಂಕಗಳಿಕೆ ಕಡೆಗೆ ಗಮನ ನೀಡಬೇಕು ಎಂದು ತಿಳಿಸಿದರು.

ಕಳೆದುಹೋದ ಸಮಯ ಮತ್ತೆ ಮರಳಿ ಬರಲ್ಲ. ಮೊಬೈಲ್ ಮತ್ತು ಸಾಮಾಜಿಕ ಜಾಲತಾಣಗಳ ಅತಿಯಾದ ಬಳಕೆಯಿಂದ ನಿಮ್ಮ ಅಮೂಲ್ಯ ಸಮಯವನ್ನು ವ್ಯರ್ಥ ಮಾಡಬೇಡಿ. ಇಂದಿನ ಜಗತ್ತಿಗೆ ಜ್ಞಾನದ ಜೊತೆಗೆ ಕೌಶಲ್ಯವೂ ಅತಿ ಮುಖ್ಯ. ನಿಮ್ಮ ಪೋಷಕರು ನಿಮ್ಮ ಮೇಲೆ ಸಾಲು ಸಾಲು ಕನಸುಗಳನ್ನು ಇಟ್ಟುಕೊಂಡಿದ್ದಾರೆ. ಅವರ ತ್ಯಾಗ ಮತ್ತು ಪರಿಶ್ರಮಕ್ಕೆ ನೀವು ಕೊಡುವ ಅತಿ ದೊಡ್ಡ ಉಡುಗೊರೆ ಎಂದರೆ ನಿಮ್ಮ ಯಶಸ್ಸು. ಕಷ್ಟಪಟ್ಟು ಓದುವುದಲ್ಲ, ಇಷ್ಟಪಟ್ಟು ಓದಿ ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ಪದವಿ ಪೂರ್ವ ಮಹಿಳಾ ಕಾಲೇಜು ಪ್ರಭಾರ ಪ್ರಾಂಶುಪಾಲರಾದ ಎಚ್.ಪಿ.ನಿರ್ಮಲಾ, ಜಿಲ್ಲಾ ಪ್ರಾಂಶುಪಾಲರ ಸಂಘದ ಅಧ್ಯಕ್ಷ ಪ್ರಿಯಾ ಶಂಕರ್, ಖಜಾಂಚಿ ಎಚ್.ಎನ್.ಸ್ವಾಮಿ, ಕಾರ್ಯದರ್ಶಿ ತಿಮ್ಮರಾಜು, ಜಿಲ್ಲಾ ರಸಾಯನಶಾಸ್ತ್ರ ವೇದಿಕೆಯ ಅಧ್ಯಕ್ಷ ಪಿ. ಎಸ್.ನಾಗರಾಜು, ಪ್ರಾಂಶುಪಾಲರಾದ ಮಿನ್ನಿ ಜಾರ್ಜ್, ನಂಜಮ್ಮಣ್ಣಿ, ಉಪನ್ಯಾಸಕಿ ಎಂ.ಅಮೃತಾ ಹಾಗೂ ಇತರರು ಹಾಜರಿದ್ದರು.

# ಫ್ರಿಕನ್ ಸ್ವೈನ್ ಫೀವರ್ (ಹಂದಿಜ್ವರ) ಸೋಂಕು ದೃಢ

**ಗುಂಡ್ಲುಪೇಟೆ:** ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಕಾಡುಹಂದಿಗಳಲ್ಲಿ ಆಫ್ರಿಕನ್ ಸ್ವೈನ್ ಫೀವರ್ (ಹಂದಿಜ್ವರ) ಸೋಂಕು ದೃಢಪಟ್ಟಿದ್ದು, ಕಳೆದ ಎರಡು ದಿನಗಳಲ್ಲಿ ಎರಡು ಕಾಡುಹಂದಿಗಳು ಮೃತಪಟ್ಟಿವೆ. ಇದರಿಂದ ಕಾಡಂಚಿನ ಗ್ರಾಮಗಳ ಜನರಲ್ಲಿ ಆತಂಕ ಮೂಡಿದೆ.



ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಮದ್ದೂರು ವಲಯದ ಕಾಡಂಚಿನಲ್ಲಿ ಕೆಲವು ದಿನಗಳ ಹಿಂದೆ ಜ್ವರದಿಂದ ಕಾಡುಹಂದಿಗಳು ಮೃತಪಟ್ಟಿದ್ದವು. ಇತ್ತೀಚೆಗೆ ಗೋಪಾಲಸ್ವಾಮಿಬೆಟ್ಟ ಮತ್ತು ಕುಂದಕೆರೆ ವಲಯಗಳ ಕಾಡಂಚಿನ ಬೂರದಾರಹುಂಡಿ, ಮಂಗಲ, ಜಕ್ಕಹಳ್ಳಿ ಹಾಗೂ ಕಣಿಯನಪುರ ಭಾಗಗಳಲ್ಲಿಯೂ ಕಾಡುಹಂದಿಗಳು ರಕ್ತವಾಂತಿ ಮಾಡಿಕೊಂಡು ಮೃತಪಟ್ಟಿದ್ದವು.

ಪಶುಪಾಲನಾ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್ ಮಾತನಾಡಿ, ಇತ್ತೀಚೆಗೆ ಮೂರು ಕಾಡುಹಂದಿಗಳು ಮೃತಪಟ್ಟಿದ್ದು, ಅವುಗಳ ಮಾದರಿಗಳನ್ನು ಪರೀಕ್ಷೆಗಾಗಿ ಭೂಪಾಲ್‌ಗೆ ಕಳುಹಿಸಲಾಗಿದೆ. ಆಫ್ರಿಕನ್ ಸ್ವೈನ್ ಫೀವರ್ ಹಂದಿಗಳಿಗೆ ಮಾತ್ರ ಹರಡುವ ರೋಗವಾಗಿದ್ದು, ಇತರ ಪ್ರಾಣಿಗಳು ಹಾಗೂ ಪಕ್ಷಿಗಳಿಗೆ ಹರಡುವುದಿಲ್ಲ. ಈ ಹಿನ್ನೆಲೆಯಲ್ಲಿ ಹಂದಿ ಸಾಕಾಣಿಕೆದಾರರಿಗೆ ರೋಗದ ಬಗ್ಗೆ ಅರಿವು ಮೂಡಿಸಲಾಗುವುದು. ನಾಲ್ಕು ತಿಂಗಳ ಹಿಂದೆ ಪಟ್ಟಣ ವ್ಯಾಪ್ತಿಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ 700 ಹಂದಿಗಳಿಗೆ ಲಸಿಕೆ ಹಾಕಲಾಗಿದ್ದು, ಸ್ವಚ್ಛತೆ ಕಾಪಾಡುವಂತೆಯೂ ತಿಳಿಸಲಾಗುವುದು ಎಂದರು.

**ತ್ಯಾಜ್ಯ ವಿಲೇವಾರಿಗೆ ಅರಣ್ಯ ಇಲಾಖೆ ಸೂಚನೆ**

ಕಾಡಂಚಿನ ಜಕ್ಕಹಳ್ಳಿ, ಮಂಗಲ ಸೇರಿದಂತೆ ವಿವಿಧ ಪ್ರದೇಶಗಳಲ್ಲಿರುವ ರೆಸಾರ್ಟ್‌ಗಳು ಮತ್ತು ಹೋಂಸ್ಟೇಗಳಲ್ಲಿ ಉತ್ಪತ್ತಿಯಾಗುವ ಕಸ ಹಾಗೂ ತ್ಯಾಜ್ಯವನ್ನು ಸಮರ್ಪಕವಾಗಿ ವಿಲೇವಾರಿ ಮಾಡುವಂತೆ ಅರಣ್ಯ ಇಲಾಖೆ ಸೂಚನೆ ನೀಡಿದೆ.

ರೆಸಾರ್ಟ್‌ಗಳಲ್ಲಿ ಬಿಸಾಡುವ ಆಹಾರ ತ್ಯಾಜ್ಯವನ್ನು ತಿನ್ನಲು ಕಾಡುಹಂದಿಗಳು ಗುಂಪುಗುಂಪಾಗಿ ಬರುತ್ತಿದ್ದು, ಇದರಿಂದ ಸೋಂಕು ಹರಡುವ ಅಪಾಯ ಹೆಚ್ಚಾಗಬಹುದು ಎಂಬ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಗೋಪಾಲಸ್ವಾಮಿಬೆಟ್ಟ ವಲಯ ಅರಣ್ಯಾಧಿಕಾರಿ ಕೆ.ಪಿ. ಸತೀಶ್ ಕುಮಾರ್ ತಿಳಿಸಿದ್ದಾರೆ.

# ಮಾನಸಿಕ, ದೈಹಿಕ ಆರೋಗ್ಯ ಒಂದೇ ನಾಣ್ಯದ ಎರಡು ಮುಖ: ಈಶ್ವರ

**ಚಾಮರಾಜನಗರ:** ಪ್ರತಿಯೊಬ್ಬ ವ್ಯಕ್ತಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯ ಮುಖ್ಯವಾಗಿದ್ದು, ಮಾನಸಿಕ ಹಾಗೂ ದೈಹಿಕ ಆರೋಗ್ಯವು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಈಶ್ವರ್ ಅವರು ತಿಳಿಸಿದರು.




ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಅಂಗವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಚಾಮರಾಜೇಶ್ವರ ದೇವಸ್ಥಾನದಿಂದ ಜಿಲ್ಲಾಡಳಿತ ಭವನದವರೆಗೆ ಹಮ್ಮಿಕೊಳ್ಳಲಾಗಿದ ಜಾಗೃತಿ ಜಾಥಾ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ವರ್ಷ ಅಕ್ಟೋಬರ್ 10ರಂದು ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಮಾನಸಿಕ ಮತ್ತು ದೈಹಿಕ ಆರೋಗ್ಯದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ದಿನಾಚರಣೆಯ ಪ್ರಮುಖ ಉದ್ದೇಶವಾಗಿದೆ. ದೈಹಿಕವಾಗಿ ಆರೋಗ್ಯವಾಗಿದ್ದರೂ ಮಾನಸಿಕವಾಗಿ ಅಸ್ವಸ್ಥರಾಗಿದ್ದರೆ ದೈನಂದಿನ ಕೆಲಸ ಕಾರ್ಯ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರೂ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಬೇಕಾಗಿದೆ ಎಂದರು.

ಮಾನಸಿಕ ಆರೋಗ್ಯವೆಂದರೆ ನಮ್ಮ ಆಲೋಚನೆಗಳು, ಭಾವನೆಗಳು ಮತ್ತು ನಡವಳಿಕೆಗಳ ಸಮತೋಲನವಾಗಿದೆ. ಇದಕ್ಕಾಗಿ ನಿಯಮಿತ ವ್ಯಾಯಾಮ, ಧ್ಯಾನದ ಮೂಲಕ ಮನಸ್ಸನ್ನು ಸಮತೋಲನದಲ್ಲಿಟ್ಟುಕೊಳ್ಳುವುದೇ ಆಗಿದೆ. 8 ಗಂಟೆಗಳ ಕಾಲ ನಿದ್ರೆ, ಪೌಷ್ಟಿಕ, ಸಮತೋಲಿತ ಆಹಾರವನ್ನು ಸೇವನೆ ಅಗತ್ಯವಾಗಿದೆ. ಮದ್ಯಪಾನ, ಧೂಮಪಾನ, ಇತರೆ ಕೆಟ್ಟ ಅಭ್ಯಾಸಗಳಿಂದ ದೂರವಿದ್ದು, ಉತ್ತಮ ಮಾನಸಿಕ ಆರೋಗ್ಯವನ್ನು ಹೊಂದಬಹುದಾಗಿದೆ. ಮಾನಸಿಕ ಆರೋಗ್ಯದ ಮಹತ್ವದ ಬಗ್ಗೆ ಜನರಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವುದು ಅತ್ಯಗತ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರಾದ ಈಶ್ವರ್ ತಿಳಿಸಿದರು.

ಮಾನಸಿಕ ಸಮಸ್ಯೆ ಇರುವವರನ್ನು ಈ ಕ್ಲಿನಿಗಳಿಗೆ ಕಳುಹಿಸುವ ಮೂಲಕ ಸೂಕ್ತ ಚಿಕಿತ್ಸೆ ಪಡೆಯಲು ನೆರವಾಗಬಹುದು. ಮಾನಸಿಕ ಆರೋಗ್ಯದ ಬಗ್ಗೆ ಅರಿವು ಮೂಡಿಸುವುದು, ಅಗತ್ಯವಿರುವವರಿಗೆ ಸಕಾಲದಲ್ಲಿ ಚಿಕಿತ್ಸೆ ದೊರಕಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ ಎಂದು ಡಾ. ಚಂದ್ರಶೇಖರ್ ಅವರು ತಿಳಿಸಿದರು.

ಇದೇ ವೇಳೆ ಜೆ.ಎಸ್.ಎಸ್ ಕಾಲೇಜು ವಿದ್ಯಾರ್ಥಿಗಳು ನಡೆಸಿಕೊಟ್ಟ ಮಾನಸಿಕ ಆರೋಗ್ಯದ ಬಗ್ಗೆ ಜನಜಾಗೃತಿ ಮೂಡಿಸುವ ನಾಟಕ ಪ್ರದರ್ಶನ ಎಲ್ಲರ ಗಮನ ಸೆಳೆಯಿತು.

ತಾಲೂಕು ಆರೋಗ್ಯ ಅಧಿಕಾರಿಗಳಾದ ಡಾ. ಶ್ರೀನಿವಾಸ, ಜಿಲ್ಲಾ ಮಾನಸಿಕ ವ್ಯದ್ಯರಾದ ಡಾ. ಮೇರಿ ಅಂಜಲ, ಸರ್ಕಾರಿ ನರ್ಸಿಂಗ್ ಕಾಲೇಜು, ಜೆ.ಎಸ್.ಎಸ್ ನರ್ಸಿಂಗ್ ಕಾಲೇಜು, ಮನೋನೀಧಿ ಕಾಲೇಜ್ ಆಫ್ ನರ್ಸಿಂಗ್ ವಿದ್ಯಾರ್ಥಿಗಳು ಜಾಥಾದಲ್ಲಿ ಪಾಲ್ಗೊಂಡಿದ್ದರು.

# ಅ.16 ರಂದು ಮಕ್ಕಳ ದಸರಾ ಸಂಭ್ರಮ: ಮಕ್ಕಳಿಂದ ವೈವಿಧ್ಯಮಯ ಸ್ಪರ್ಧೆಗಳು

**ಮಡಿಕೇರಿ:** ಮಡಿಕೇರಿ ಜನೋತ್ಸವ ದಸರಾ ಪ್ರಯುಕ್ತ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಅಕ್ಟೋಬರ್ 16 ರಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ 13 ನೇ ವರ್ಷದ ಮಕ್ಕಳ ದಸರಾ ನಡೆಯಲಿದೆ.

ಮಕ್ಕಳ ದಸರಾಗೆ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಚಾಲನೆ ನೀಡಲಿದ್ದಾರೆ. ಮಕ್ಕಳ ಸಂತೆ, ಅಂಗಡಿ ಸ್ಪರ್ಧೆಯನ್ನು ರೋಟರಿ ಜಿಲ್ಲೆ 3181 ನ ರಾಜ್ಯಪಾಲ ಸತೀಶ್ ಭೊಳಾರ್ ಉದ್ಘಾಟಿಸಲಿದ್ದಾರೆ. ರೋಟರಿ ವಲಯ 6 ರ ಸಹಾಯಕ ಗವರ್ನರ್ ಎಚ್.ಎಸ್.ವಸಂತ್ ಕುಮಾರ್, ವಲಯ ಸೇನಾನಿ ಮಧುಸೂದನ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪಿ.ಆರ್.ರಾಜೇಶ್, ಕಾರ್ಯದರ್ಶಿ ಡಾ.ಜಿ.ಡಿ.ಚೇತನ್, ಮಡಿಕೇರಿ ನಗರಸಭೆಯ ಅಧ್ಯಕ್ಷರಾದ ಪಿ.ಕಲಾವತಿ, ನಗರಸಭೆಯ ಉಪಾಧ್ಯಕ್ಷ ಮಹೇಶ್ ಜೈನಿ, ದಸರಾ ಸಮಿತಿ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಖಜಾಂಚಿ ಸಬಿತಾ ಪಾಲ್ಗೊಳ್ಳಲಿದ್ದಾರೆ ಎಂದು ಮಕ್ಕಳ ದಸರಾ ಸಂಚಾಲಕ ಅನಿಲ್ ಎಚ್.ಟಿ. ಅವರು ತಿಳಿಸಿದ್ದಾರೆ.



ಮಕ್ಕಳಿಂದ ಸಂತೆ, ಮಕ್ಕಳಿಂದ ಅಂಗಡಿ, ಮಕ್ಕಳಿಂದ ಛದ್ಮವೇಷ, ಮಕ್ಕಳಿಂದ ಕ್ಲೇಮಾಡೆಲಿಂಗ್, ಮಕ್ಕಳಿಂದ ಮಂಟಪ ರಚನೆಯ ಸ್ಪರ್ಧೆಗಳು ಮನಸೆಳೆಯಲಿವೆ. ನೂರಾರು ಮಕ್ಕಳು ಈ ಬಾರಿಯೂ ಮಕ್ಕಳ ದಸರಾದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅನಿಲ್ ಎಚ್.ಟಿ. ಅವರು ತಿಳಿಸಿದ್ದಾರೆ.

# ಪೌರಕಾರ್ಮಿಕರಿಗೆ ನಿವೇಶನ, ಮನೆ ನೀಡಲ ಜಾಗ ಗುರುತಿಸಿ: ಶಂಕರ ಸಿ.ಅಂಕನಶೆಟ್ಟಿಪುರ

**ಚಾಮರಾಜನಗರ:** ಜಿಲ್ಲೆಯ ವಿವಿಧ ಗ್ರಾಮಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೇಶನ, ಮನೆಗಳಿಲ್ಲದ ಪೌರಕಾರ್ಮಿಕರಿಗೆ ಆಯಾ ಗ್ರಾಮ ಠಾಣಾ ವ್ಯಾಪ್ತಿಯಲ್ಲಿ ಜಾಗ ಗುರುತಿಸುವ ಪ್ರಕ್ರಿಯೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಕರ್ನಾಟಕ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾದ ಶಂಕರ ಅಂಕನಶೆಟ್ಟಿಪುರ ಅವರು ತಿಳಿಸಿದರು.



ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಮಂಗಳವಾರ ಜಿಲ್ಲೆಯ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರೊಂದಿಗೆ ನೇರ ಸಂವಾದ ನಡೆಸಿ, ಕುಂದುಕೊರತೆಗಳನ್ನು ಆಲಿಸಿ ಬಳಿಕ ಅವರು ಮಾತನಾಡಿದರು.

ಸಫಾಯಿ ಕರ್ಮಚಾರಿ ಆಯೋಗದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಪೌರಕಾರ್ಮಿಕರಿಗೆ ಪುನರ್ವಸತಿ ಕಲ್ಪಿಸಲು ಸಮಸ್ಯೆಗಳನ್ನು ಆಲಿಸಲಾಗುತ್ತಿದೆ. ಸಾಕಷ್ಟು ಪೌರಕಾರ್ಮಿಕರು ನಿವೇಶನ, ಮನೆ ನೀಡುವಂತೆ ಅಹವಾಲು ಸಲ್ಲಿಸುತ್ತಿದ್ದಾರೆ. ಇತ್ತೀಚೆಗೆ ಪೌರಕಾರ್ಮಿಕರ ದಿನಾಚರಣೆಯಲ್ಲಿ ಪಾಲ್ಗೊಂಡಿದ್ದ ಮುಖ್ಯಮಂತ್ರಿಗಳು ನಿವೇಶನ, ಮನೆಗಳಿಲ್ಲದ ಪೌರಕಾರ್ಮಿಕರಿಗೆ ಆದ್ಯತೆ ಮೇರೆಗೆ ವಸತಿ ಸೌಲಭ್ಯ ನೀಡುವುದಾಗಿ ಘೋಷಿಸಿದ್ದಾರೆ. ಈ ನಿಟ್ಟಿನಲ್ಲಿ ಪ್ರತಿ ಗ್ರಾಮಠಾಣಾ ವ್ಯಾಪ್ತಿಯಲ್ಲಿ ಪೌರಕಾರ್ಮಿಕರಿಗೆ ಸೌಲಭ್ಯ ಒದಗಿಸಲು ಆಯಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಜಂಟಿ ಸರ್ವೇ ನಡೆಸಿ ಜಾಗ ಗುರುತಿಸಲು ಮುಂದಾಗುವಂತೆ ಸೂಚಿಸಿದರು.

ಪೌರಕಾರ್ಮಿಕರಿಗೆ ನಿವೇಶನ, ವಸತಿ, ಇ-ಸ್ವತ್ತು, ವೇತನ ಪಾವತಿ, ಆರೋಗ್ಯ ರಕ್ಷಣೆಯಂತಹ ಜ್ವಲಂತ ಸಮಸ್ಯೆಗಳಿವೆ. ಒಂದೊಮ್ಮೆ ಪೌರಕಾರ್ಮಿಕರು ಮುನಿದರೆ ಯಾವ ಊರು, ಗ್ರಾಮ, ಪಟ್ಟಣಗಳು ಶುದ್ಧಿಯಾಗುವುದಿಲ್ಲ. ಅವರ ಸಮಸ್ಯೆಗಳನ್ನು ಹಂತಹಂತವಾಗಿಯಾದರೂ ಪರಿಹರಿಸಲು ಅಧಿಕಾರಿಗಳು ತುರ್ತು ಕ್ರಮ ವಹಿಸಬೇಕು. ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮ ಆಡಳಿತ ಅಧಿಕಾರಿಗಳು ಮನಸ್ಸು ಮಾಡಿದರೆ ಪೌರಕಾರ್ಮಿಕರ ಬದುಕನ್ನು ಹಸನು ಮಾಡಬಹುದಾಗಿದೆ. ಪೌರಕಾರ್ಮಿಕರನ್ನು ಅವ್ಯಾಚ್ಯ ಪದಗಳಿಂದ ನಿಂದಿಸಿ ದೌರ್ಜನ್ಯ ಎಸಗಿದರೆ ಅಂತಹವರ ವಿರುದ್ಧ ಆಯೋಗ ಪ್ರಕರಣ ದಾಖಲಿಸಲಿದೆ ಎಂದರು.

ಪ್ರತಿ ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಐದು ಸಾವಿರ ಜನಸಂಖ್ಯೆಗೆ ಓರ್ವ ಪೌರಕಾರ್ಮಿಕರು ಹಾಗೂ 5 ಸಾವಿರಕ್ಕಿಂತ ಹೆಚ್ಚಿದ್ದರೆ ಮತ್ತೊಬ್ಬರನ್ನು ನಿಯೋಜಿಸಿಕೊಳ್ಳಲು ಅವಕಾಶವಿದೆ. ಕೆಲ ಗ್ರಾಮ ಪಂಚಾಯಿತಿಯಲ್ಲಿ ಪೌರಕಾರ್ಮಿಕರ ಕೊರತೆಯಿದೆ. ಕೆಲವೆಡೆ ಪೌರಕಾರ್ಮಿಕರ ಅನುಮೋದನೆಯಾಗದಿರುವುದರಿಂದ ಅಧಿಕ ಕಾರ್ಯದೊತ್ತಡವಿದೆ. ಹಾಗಿದ್ದರೂ ಪಂಚಾಯಿತಿಗಳು ಸಕಾಲಕ್ಕೆ ವೇತನ ಪಾವತಿಸುತ್ತಿಲ್ಲದಿರುವುದು ಕಂಡುಬಂದಿದೆ. ಮುಂದಿನ ದಿನಗಳಲ್ಲಿ ವೇತನ ವಿಳಂಬವಾಗದಂತೆ ನೋಡಿಕೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳು ಜಿಲ್ಲೆಯಲ್ಲಿ ಅನುಮೋದನೆಯಾಗದ ಪೌರಕಾರ್ಮಿಕರ ಪಟ್ಟಿ ತಯಾರಿಸಿ ಆಯೋಗಕ್ಕೆ ವರದಿ ಸಲ್ಲಿಸುವಂತೆ ಸದಸ್ಯರು ತಿಳಿಸಿದರು.

ಪೌರಕಾರ್ಮಿಕರ ಕಾಲೋನಿಗಳಿಗೆ ಕುಡಿಯುವ ನೀರು, ರಸ್ತೆ, ಚರಂಡಿ ಸೇರಿದಂತೆ ಮೂಲಸೌಕರ್ಯಗಳ ಪರಿಹಾರಕ್ಕಾಗಿ ಅಗತ್ಯ ಪ್ರಸ್ತಾವನೆ ಸಲ್ಲಿಸಿದರೆ ಎಸ್.ಸಿ.ಪಿ ಅಥವಾ ಟಿ.ಎಸ್.ಪಿ ಯೋಜನೆಗಳಡಿ ಸೌಲಭ್ಯ ನೀಡಲು ಆದ್ಯತೆ ನೀಡಲಾಗುವುದು ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಹೊನ್ನರಾಜು ಅವರು ಮಾತನಾಡಿ ನಿವೇಶನ, ಮನೆ ಇಲ್ಲದವರಿಗೆ ಜಾಗ ಗುರುತಿಸುವ ಕಾರ್ಯ ಪ್ರಗತಿಯಲ್ಲಿದ್ದು, ಒಟ್ಟಾರೆ 25 ಸಾವಿರ ಮನೆಗಳ ಅವಶ್ಯವಿದೆ. 5 ಸಾವಿರ ಜನಸಂಖ್ಯೆ ಮೀರಿದ ಗ್ರಾಮ ಪಂಚಾಯಿತಿಗಳಲ್ಲಿ ಹೆಚ್ಚುವರಿ ಪೌರಕಾರ್ಮಿಕರ ನಿಯೋಜನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ನಿವೃತ್ತಿ ಹಾಗೂ ಮರಣ ಹೊಂದಿದ ಪೌರಕಾರ್ಮಿಕರ ಕುಟುಂಬಕ್ಕೆ ಉಪಧನ ನೀಡಲು 15ನೇ ಹಣಕಾಸು ಆಯೋಗಕ್ಕೆ ಅನುದಾನ ಬಿಡುಗಡೆಗೆ ಬೇಡಿಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕು ಸಮಾಜ ಕಲ್ಯಾಣಾಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ವಿವಿಧ ಇಲಾಖೆಯ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

# ಅ.18ಕ್ಕೆ ಲೇಖಕ ಕೆ.ಮಾಯಿಗೌಡರ ಆತ್ಮಕಥೆ 'ಹುಚ್ಚೆಳ್ಳು ಹೂ' ಕೃತಿ ಲೋಕಾರ್ಪಣೆ




**ಮಂಡ್ಯ:** ಶ್ರೀ ರಾಮಕೃಷ್ಣ ಸೇವಾ ಕೇಂದ್ರ,ಯಾಚೇನಹಳ್ಳಿ, ವತಿಯಿಂದ ವೈಚಾರಿಕ ಲೇಖಕ, ವಾಗ್ಮಿ ಕೆ.ಮಾಯಿಗೌಡರ ಆತ್ಮಕಥೆ 'ಹುಚ್ಚೆಳ್ಳು ಹೂ' ಕೃತಿಯ ಲೋಕಾರ್ಪಣಾ ಸಮಾರಂಭವನ್ನು ಅ. 18 ರ ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಮಂಡ್ಯದ ಗಾಂಧಿ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಯಾಚೇನಹಳ್ಳಿಯ ಶ್ರೀ ರಾಮಕೃಷ್ಣ ಸೇವಾ ಕೇಂದ್ರದ ಶ್ರೀ ಸ್ವಾಮಿ ನಾದಾನಂದನಾಥ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಕುವೆಂಪುರವರ ಮೊದಲನೇ ತಲೆಮಾರಿನಲ್ಲಿ ಬರುವ ಮಾಯಿಗೌಡರು ವೈಚಾರಿಕ ಹಿನ್ನೆಲೆಯನ್ನು ಮೈಗೂಡಿಸಿಕೊಂಡಂತಹ ವ್ಯಕ್ತಿ. ಬುದ್ಧ, ಬಸವ, ಡಾ. ಎಚ್. ನರಸಿಂಹಯ್ಯ ನಂತವರ ಸಾಮಾಜಿಕ ಮನಸ್ಸುಗಳನ್ನು ಒಂದು ವೈಚಾರಿಕ ಹಿನ್ನೆಲೆಯಲ್ಲಿ ಪ್ರತಿಬಿಂಬಿಸುವಂತಹ ಮಹನೀಯರ ಜೊತೆಯಲ್ಲಿ ಕೆಲಸ ಮಾಡಿದಂತಹ ವ್ಯಕ್ತಿ

ಈಗ ಅಪಘಾತಕ್ಕೂ ಒಳಗಾಗಿ ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರೂ ಕೂಡ, ಕುಳಿತುಕೊಳ್ಳದೆ ಮತ್ತೆ ಮನುಷ್ಯತ್ವದ ಕೆಲಸದಲ್ಲಿ ತೊಡಗಿದ್ದಾರೆ. ಅವರ 'ಹುಚ್ಚೆಳ್ಳು ಹೂ' ಆತ್ಮಕಥೆ ಲೋಕಾರ್ಪಣೆಗೆ ಎಲ್ಲರೂ ಬರಬೇಕು ಎಂದು ಸ್ವಾಮೀಜಿ ಕರೆ ನೀಡಿದರು.

ಹಿರಿಯ ಪತ್ರಕರ್ತ ದ.ಕೋ.ಹಳ್ಳಿ ಚಂದ್ರಶೇಖರ್ ಮಾತನಾಡಿ ಕೆ.ಮಾಯಿಗೌಡರು ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ಶೈಕ್ಷಣಿಕವಾಗಿ ಕೆಲಸ ಮಾಡುತ್ತಾ ವೈಚಾರಿಕತೆಯನ್ನು ಜಿಲ್ಲೆಯಲ್ಲಿ ಹರಡುತ್ತಾ ಬಂದವರು.

88 ರ ವರ್ಷದ ಇಳಿ ವಯಸ್ಸಿನಲ್ಲಿಯೂ ಚಟುವಟಿಕೆಯಿಂದ ಕೆಲಸ ಮಾಡುತ್ತಿರುವ ಅವರ ಒಟ್ಟು ಸಾಹಿತ್ಯದ ಸಾರವೇ ಅನ್ನುವ ರೀತಿಯಲ್ಲಿ ಅವರ ಆತ್ಮಚರಿತ್ರೆ ಪ್ರಕಟವಾಗುತ್ತಿದೆ.ಕೆ.ಮಾಯಿಗೌಡರು ಇಲ್ಲಿಯವರೆಗೆ ಸುಮಾರು 32 ಕೃತಿಗಳನ್ನು ಪ್ರಕಟಿಸಿದ್ದಾರೆ ಎಂದರು.

ಈ ಸಮಾರಂಭದ ಸಾನ್ನಿಧ್ಯವನ್ನು ವಿಶ್ವಮಾನವ ಕೇಂದ್ರ, ಕೊಮ್ಮೇರಹಳ್ಳಿಯ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಅವರು ವಹಿಸಲಿದ್ದಾರೆ. ಪುಸ್ತಕ ಬಿಡುಗಡೆಯನ್ನು ಶ್ರೀ ರಾಮಕೃಷ್ಣ ಸೇವಾ ಕೇಂದ್ರ ಯಾಚೇನಹಳ್ಳಿಯ ಶ್ರೀ ಸ್ವಾಮಿ ನಾದಾನಂದನಾಥ ಅವರು ನೆರವೇರಿಸಲಿದ್ದಾರೆ.ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರೊ. ಕೆ.ಎಸ್. ಭಗವಾನ್ ಅವರು ವಹಿಸಲಿದ್ದಾರೆ. ಕೃತಿ ಕುರಿತು ಚಿಂತಕರಾದ ಪ್ರೊ. ಎಸ್.ಜಿ. ಸಿದ್ದರಾಮಯ್ಯ ಅವರು ಮಾತನಾಡಲಿದ್ದಾರೆ.ಪ್ರಾಸ್ತಾವಿಕ ನುಡಿಯನ್ನು ಕೃತಿಯ ಪ್ರಕಾಶಕರಾದ ಬೆಂಗಳೂರಿನ ಡಾ. ಎಂ. ಬೈರೇಗೌಡ ಅವರು ಮಂಡಿಸಲಿದ್ದು, ಕೃತಿಕಾರರಾದ ಶ್ರೀ ಕೆ.ಮಾಯಿಗೌಡ ಅವರು ಕೃತಜ್ಞತಾ ನುಡಿಗಳನ್ನಾಡಲಿದ್ದಾರೆ ಎಂದು ವಿವರಿಸಿದರು.

ಗೋಷ್ಠಿಯಲ್ಲಿ ಎಂಆರ್ ಎಂ ಪ್ರಕಾಶನದ ಮುತ್ತೇಗೆರೆ ಮಂಜು,ಕೀಲಾರ ಕೃಷ್ಣೇಗೌಡ ಇದ್ದರು.

# ಅ.16 ರಂದು ಮಕ್ಕಳ ದಸರಾ ಸಂಭ್ರಮ: ಮಕ್ಕಳಿಂದ ವೈವಿಧ್ಯಮಯ ಸ್ಪರ್ಧೆಗಳು

ಮಡಿಕೇರಿ: ಮಡಿಕೇರಿ ಜನೋತ್ಸವ ದಸರಾ ಪ್ರಯುಕ್ತ ರೋಟರಿ ಮಿಸ್ಟಿ ಹಿಲ್ಸ್ ವತಿಯಿಂದ ಅಕ್ಟೋಬರ್ 16 ರಂದು ಬೆಳಗ್ಗೆ 10 ಗಂಟೆಗೆ ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ 13 ನೇ ವರ್ಷದ ಮಕ್ಕಳ ದಸರಾ ನಡೆಯಲಿದೆ.

ಮಕ್ಕಳ ದಸರಾಗೆ ಜಿಲ್ಲಾಧಿಕಾರಿ ಎಸ್. ಜೆ.ಸೋಮಶೇಖರ್ ಅವರು ಚಾಲನೆ ನೀಡಲಿದ್ದಾರೆ. ಮಕ್ಕಳ ಸಂತೆ, ಅಂಗಡಿ ಸ್ಪರ್ಧೆಯನ್ನು ರೋಟರಿ ಜಿಲ್ಲೆ 3181 ನ ರಾಜ್ಯಪಾಲ ಸತೀಶ್ ಭೊಳಾರ್ ಉದ್ಘಾಟಿಸಲಿದ್ದಾರೆ. ರೋಟರಿ ವಲಯ 6 ರ ಸಹಾಯಕ ಗವರ್ನರ್ ಎಚ್.ಎಸ್.ವಸಂತ್ ಕುಮಾರ್, ವಲಯ ಸೇನಾನಿ ಮಧುಸೂದನ್, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷ ಪಿ.ಆರ್.ರಾಜೇಶ್, ಕಾರ್ಯದರ್ಶಿ ಡಾ.ಜಿ.ಡಿ.ಚೇತನ್, ಮಡಿಕೇರಿ ನಗರಸಭೆಯ ಅಧ್ಯಕ್ಷರಾದ ಪಿ.ಕಲಾವತಿ, ನಗರಸಭೆಯ ಉಪಾಧ್ಯಕ್ಷ ಮಹೇಶ್ ಜೈನಿ, ದಸರಾ ಸಮಿತಿ ಕಾರ್ಯಾಧ್ಯಕ್ಷ ಬಿ.ಕೆ.ಅರುಣ್ ಕುಮಾರ್, ಪ್ರಧಾನ ಕಾರ್ಯದರ್ಶಿ ಅರುಣ್ ಶೆಟ್ಟಿ, ಖಜಾಂಚಿ ಸಬಿತಾ ಪಾಲ್ಗೊಳ್ಳಲಿದ್ದಾರೆ ಎಂದು ಮಕ್ಕಳ ದಸರಾ ಸಂಚಾಲಕ ಅನಿಲ್ ಎಚ್.ಟಿ. ಅವರು ತಿಳಿಸಿದ್ದಾರೆ.

ಮಕ್ಕಳಿಂದ ಸಂತೆ, ಮಕ್ಕಳಿಂದ ಅಂಗಡಿ, ಮಕ್ಕಳಿಂದ ಛದ್ಮವೇಷ, ಮಕ್ಕಳಿಂದ ಕ್ಲೇಮಾಡೆಲಿಂಗ್, ಮಕ್ಕಳಿಂದ ಮಂಟಪ ರಚನೆಯ ಸ್ಪರ್ಧೆಗಳು ಮನಸೆಳೆಯಲಿವೆ. ನೂರಾರು ಮಕ್ಕಳು ಈ ಬಾರಿಯೂ ಮಕ್ಕಳ ದಸರಾದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಅನಿಲ್ ಎಚ್.ಟಿ. ಅವರು ತಿಳಿಸಿದ್ದಾರೆ.



# ಕಬ್ಬು ಬೆಳೆಗಾರರ ಸಂಕಷ್ಟಕ್ಕೆ ಸರ್ಕಾರವೇ ಹೊಣೆ : ಹಾಡ್ಯ ರಮೇಶರಾಜು ಆಕ್ರೋಶ




**ಮಂಡ್ಯ:** ಕಬ್ಬು ಬೆಳೆದ ರೈತನಿಗೆ ಖರ್ಚೇ ಬರುತ್ತಿಲ್ಲ, ಲಾಭದ ಮಾತು ದೂರ ಉಳಿಯಿತು. ರೈತರು ಪ್ರತಿ ಟನ್ ಗೆ 4000 ರೂ. ಕೇಳುತ್ತಿದ್ದಾರೆ. ಆದರೆ ದಕ್ಷಿಣದ 10 ಕಾರ್ಖಾನೆಗಳು ಕೊಡುತ್ತಿರುವುದು ಕೇವಲ 3650 ರೂ. ಅದರಲ್ಲೂ ಟ್ರಾನ್ಸ್ ಪೋರ್ಟೇಷನ್ ಮತ್ತು ಕಬ್ಬು ಕಡಿಯುವ ಖರ್ಚನ್ನು ರೈತರೇ ಭರಿಸಬೇಕು. ಕಡೆಗೆ ರೈತರ ಕೈಗೆ ಉಳಿಯುವುದು 2200 ರಿಂದ 2300 ರೂ. ಮಾತ್ರ. ಅಂದರೆ ಪ್ರತಿ ಟನ್ ಗೆ 2000 ರೂ. ನಷ್ಟ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರ ಈ ಸಂಕಷ್ಟಕ್ಕೆ ಸರ್ಕಾರಗಳೇ ಹೊಣೆ ಎಂದು ಭಾರತೀಯ ಕಿಸಾನ್ ಸಂಘದ ದಕ್ಷಿಣ ಪ್ರಾಂತ ಅಧ್ಯಕ್ಷ ಹಾಡ್ಯ ರಮೇಶರಾಜು ಆಕ್ರೋಶ ವ್ಯಕ್ತಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

**ರೈತರಿಂದ ಖರ್ಚಿನ ಲೆಕ್ಕಪತ್ರ ಸಿದ್ಧ:** ಭಾರತೀಯ ಕಿಸಾನ್ ಸಂಘದಿಂದ 50ಕ್ಕೂ ಹೆಚ್ಚು ಕಬ್ಬು ಬೆಳೆಗಾರರು ಕುಳಿತು ಕಬ್ಬು ಬೆಳೆಯುವ ನಿಜವಾದ ಖರ್ಚಿನ ಲೆಕ್ಕಪತ್ರ ರೆಡಿ ಮಾಡಿದ್ದೇವೆ. ಆ ಖರ್ಚಿನ ಮೇಲೆ 50% ಲಾಭ ಸೇರಿಸಿ ಅಂದರೆ 5500 ರಿಂದ 6000 ರೂ. ಪ್ರತಿ ಟನ್ ಗೆ ರೈತರ ಖಾತೆಗೆ ಬಂದರೆ ಮಾತ್ರ ಲಾಭದಾಯಕ. ಈ ಲೆಕ್ಕವನ್ನು ಮೊನ್ನೆ ದೆಹಲಿಯಲ್ಲಿ ನಡೆದ ರಾಷ್ಟ್ರಮಟ್ಟದ ಸಭೆಯಲ್ಲಿ ಮಂಡಿಸಿದ್ದೇವೆ, ಅಲ್ಲಿ ಕರ್ನಾಟಕದ ಕೃಷಿ ಸಚಿವರು, ಶಾಸಕರಾದ ದರ್ಶನ್ ಪುಟ್ಟಣ್ಣಯ್ಯ, ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರು ಇದ್ದರು.

ಪಂಜಾಬ್ – 610 ರೂ,ಹರಿಯಾಣ – 450 ರ,.ಯುಪಿ – 450 ರೂ,ಉತ್ತರಾಖಂಡ – 500 ರೂ, ತಮಿಳುನಾಡು – 709.50 ರೂ. ಪ್ರತಿ ಟನ್ ಗೆ ಪ್ರೋತ್ಸಾಹ ಧನ ನೀಡುತ್ತಿವೆ.ಆದರೆ ಕರ್ನಾಟಕದಲ್ಲಿ ಶೂನ್ಯ ಎಂದರು.

ಆದರೆ ಕರ್ನಾಟಕದಲ್ಲಿ ಕಳೆದ ವರ್ಷದ ಹೋರಾಟದ ನಂತರ ಕೇವಲ 50 ರೂ. ಕೊಟ್ಟು ಈ ವರ್ಷ ಅದನ್ನೂ ನಿಲ್ಲಿಸಲಾಗಿದೆ. ಇವತ್ತು ಕಬ್ಬು ಬೆಳೆಗಾರರು ಚಿಂತಾಜನಕ ಸ್ಥಿತಿಗೆ ಬರಲು ಕರ್ನಾಟಕ ಸರ್ಕಾರವೇ ನೇರ ಹೊಣೆ ಎಂದು ಕಿಸಾನ್ ಸಂಘ ತೀವ್ರವಾಗಿ ಆಗ್ರಹಿಸುತ್ತದೆ ಎಂದರು.

ಸಕ್ಕರೆ ದರ ಹೆಚ್ಚಳದ ಲಾಭ ರೈತರಿಗೆ ಸಿಗಬೇಕು

ಸಕ್ಕರೆ ಮಾರಾಟ ದರ 4200–4500 ರೂ. ಗಿಂತ ಹೆಚ್ಚು ಇದೆ. ಸರ್ಕಾರ ಎಂಎಸ್ ಪಿ ಜಾಸ್ತಿ ಮಾಡುವಾಗ ಫ್ಯಾಕ್ಟರಿಗಳನ್ನು ಕರೆದು "ಈ ಹೆಚ್ಚಳವನ್ನು ಪರಿಪೂರ್ಣವಾಗಿ ರೈತರಿಗೆ ಕೊಡಿ" ಎಂದು ಯಾಕೆ ಹೇಳುತ್ತಿಲ್ಲ ಎಂದು ಪ್ರಶ್ನಿಸಿದರು.

ಕೇಂದ್ರ ಸರ್ಕಾರ ಕಳೆದ 2–3 ವರ್ಷದಿಂದ ಕಬ್ಬಿನ ದರವನ್ನು ಕೇವಲ 40 ರೂ. ಮಾತ್ರ ಹೆಚ್ಚಳ ಮಾಡುತ್ತಿದೆ.ರಮೇಶ್ ಚಂದ್ರ ನೇತೃತ್ವದಲ್ಲಿ ಆಯೋಗ ರಚನೆ ಮಾಡಿರುವುದಕ್ಕೆ ಸ್ವಾಗತವಿದೆ, ಆದರೆ ವಿಳಂಬ ಮಾಡಬಾರದು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಬಿ.ಪಿ.ಅಪ್ಪಾಜಿ ಬೂದನೂರು, ಜಿಲ್ಲಾ ವಕ್ತಾರ ನರಸಿಂಹನ್ ಗಾಣದಾಳು, ಮೈಸೂರು ವ್ಯಾಪ್ತಿಯ ಕಬ್ಬು ಬೆಳೆಗಾರರ ಸಂಚಾಲಕ ಶಿವಣ್ಣ ಹೊಳಲು, ಮಂಡ್ಯ ತಾಲ್ಲೂಕು ಅಧ್ಯಕ್ಷ ಜಯರಾಮ್ ತೂಬಿನಕೆರೆ, ರಾಘವೇಂದ್ರ, ಜೋಗಿಗೌಡ, ಸ್ವಾಮಿ ತೂಬಿನಕೆರೆ ಇದ್ದರು.

# ಕಾವೇರಿ ಆರತಿ ಯೋಜನೆಗೆ ರೈತರ ಆಕ್ರೋಶ

## ಮಂಡ್ಯ ಜಿಲ್ಲೆಯನ್ನು ದಿವಾಳಿ ಮಾಡಲು ಸರ್ಕಾರ ಹೊರಟಿದೆ: ಸುನಂದ ಜಯರಾಂ ಆರೋಪ




**ಮಂಡ್ಯ:** ಸರ್ಕಾರವು ಕೆಆರ್‌ಎಸ್ ಬಳಿ ಅಮ್ಯೂಸ್‌ಮೆಂಟ್ ಪಾರ್ಕ್, ಕಾವೇರಿ ಆರತಿ, ಆರನೇ ಹಂತದ ಬೆಂಗಳೂರಿಗೆ ಕುಡಿಯುವ ನೀರಿನ ಯೋಜನೆ ಮಾಡುವ ಮೂಲಕ ಮಂಡ್ಯ ಜಿಲ್ಲೆಯನ್ನು ಸಂಪೂರ್ಣವಾಗಿ ದಿವಾಳಿ ಮಾಡಲು ಹೊರಟಿದೆ ಎಂದು ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಪ್ರಧಾನ ಕಾರ್ಯದರ್ಶಿ ಸುನಂದ ಜಯರಾಂ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಕೆಆರ್‌ಎಸ್ ಅಣೆಕಟ್ಟೆಯಲ್ಲಿ ಕಾವೇರಿ ಆರತಿ ನಡೆಸುವುದನ್ನು ಖಂಡಿಸಿ ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ವತಿಯಿಂದ ಕಾವೇರಿ ಪ್ರತಿಮೆ ಎದುರು ನಡೆದ ಈ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಈ ರೂಪಿತ ಪೂರ್ವನಿಯೋಜಿತ ಯೋಜನೆಗಳು ಮಂಡ್ಯ ಜಿಲ್ಲೆ ಮಾತ್ರವಲ್ಲದೆ ಕಾವೇರಿ ಕೊಳ್ಳದ ಎಲ್ಲಾ ಜಿಲ್ಲೆಗಳಿಗೂ ದೊಡ್ಡ ಅಪಾಯವನ್ನು ತಂದಿಟ್ಟಿವೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಶತಶತಮಾನಗಳಿಂದ ಬೆಳೆದು ಬಂದ ಕಾವೇರಿ ನದಿ ಹಾಗೂ ರೈತರ ಬದುಕಿನ ಇತಿಹಾಸವನ್ನು ಮುಚ್ಚಿಹಾಕುವ ಕೆಲಸಗಳು ಈಗ ನಡೆಯುತ್ತಿವೆ ಎಂದು ಅವರು ಹೇಳಿದರು. ಸ್ವಾತಂತ್ರ್ಯ ಬಂದ ನಂತರ ರಚಿತವಾದ ಎಲ್ಲಾ ಸರ್ಕಾರಗಳ ನಡೆಯೂ ಬಹುತೇಕ ಜನವಿರೋಧಿ, ರೈತ ವಿರೋಧಿ ಮತ್ತು ಸಾಮಾಜಿಕ ವಿರೋಧಿಯಾಗಿಯೇ ಕಾಣಿಸುತ್ತಿದೆ ಎಂದು ಅವರು ಟೀಕಿಸಿದರು.

ಕಾವೇರಿ ನದಿ ನೀರಿನ ವಿಚಾರದಲ್ಲಿ, ಕಬ್ಬು ಬೆಳೆಗಾರರ ಸಂಕಷ್ಟ ಹಾಗೂ ಹೊಲಗದ್ದೆಗಳಲ್ಲಿ ಬಿದ್ದು ಬೆವರು ಸುರಿಸುತ್ತಿರುವ ರೈತರ ಸಂಕಷ್ಟ ಯಾವ ಸರ್ಕಾರದ ಕಣ್ಣಿಗೂ ಕಾಣಿಸುತ್ತಿಲ್ಲ ಎಂದು ಅವರು ಬೇಸರ ವ್ಯಕ್ತಪಡಿಸಿದರು. ಸರ್ಕಾರದ ನಡೆ ಹಾಗೂ ಜನರ ನಡೆ ಎರಡೂ ಕೂಡ ದುರಂತಕ್ಕೆ ನಾಂದಿ ಹಾಡುತ್ತಿದ್ದು ರೈತರು ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ದೊಡ್ಡ ಅಪಾಯ ಎದುರಾಗಲಿದೆ ಎಂದು ಅವರು ಎಚ್ಚರಿಕೆ ನೀಡಿದರು.

ಇವತ್ತು ಕರ್ನಾಟಕ ಸರ್ಕಾರವೇ ಇಡೀ ರಾಜ್ಯ ಬರಗಾಲ ಪೀಡಿತ ಎಂದು ಘೋಷಣೆ ಮಾಡಿದೆ, ಅದರಲ್ಲೂ ವಿಶೇಷವಾಗಿ ನಮ್ಮ ಮಂಡ್ಯ ಜಿಲ್ಲೆ ಎಂದೆಂದೂ ಕಂಡರಿಯದ ರೀತಿಯಲ್ಲಿ ಬರ ಪೀಡಿತವಾಗಿ ನಮ್ಮ ರೈತರು ಬಹಳ ಸಂಕಷ್ಟದಲ್ಲಿ ಬದುಕುತ್ತಿದ್ದೇವೆ, ಇಲ್ಲಿ ನಮಗೆ ಕುಡಿಯಲು ಜನ ಜಾನುವಾರುಗಳಿಗೆ ನೀರಿಲ್ಲದೆ ಹೇಳಲಿಕ್ಕೂ ಸಾಧ್ಯವಿಲ್ಲದಷ್ಟು ಕಷ್ಟದ ಪರಿಸ್ಥಿತಿಯಲ್ಲಿ ಬದುಕುತ್ತಿದ್ದೇವೆ ಎಂದು ಅವರು ನೋವು ತೋಡಿಕೊಂಡರು.

ಆದರೂ ಮೊನ್ನೆ ಜಿಲ್ಲಾ ಮಂತ್ರಿಗಳು ರೈತರ ಸಭೆಯನ್ನು ಕರೆದು ಅಲ್ಲಿ ಕಾವೇರಿ ಆರತಿ ವಿಚಾರವನ್ನು ಕೋರ್ಟ್‌ನಲ್ಲಿ ತಡೆ ಇರುವುದರಿಂದ ಮಾಡುವುದಿಲ್ಲ ಎಂದು ಹೇಳಿ ಜಿಲ್ಲೆಯ ಜನರಿಗೆ ಮೋಸ ಮಾಡಲು ಹೊರಟು ಇವತ್ತು ಕಾವೇರಿ ಆರತಿಯನ್ನು ಮಾಡುತ್ತಿದ್ದೀರಲ್ಲ, ಇದು ಯಾವ ಪುರುಷಾರ್ಥಕ್ಕೆ ಮಾಡುತ್ತಿದ್ದೀರಿ ಎಂಬ ಪ್ರಶ್ನೆಯನ್ನು ನಾವು ಜಿಲ್ಲಾ ಮಂತ್ರಿಗಳಿಗೆ ಮತ್ತು ಆ ಕ್ಷೇತ್ರದ ಎಂಎಲ್‌ಎಗೆ ಕೇಳಲು ಬಯಸುತ್ತೇವೆ ಎಂದು ಅವರು ಪ್ರಶ್ನಿಸಿದರು.

ಕರುನಾಡ ಸೇವಕರು ಸಂಘಟನೆಯ ಎಂ.ಬಿನಾಗಣ್ಣಗೌಡ ಮಾತನಾಡಿ ಇವತ್ತು ಕನ್ನಂಬಾಡಿ ಕಟ್ಟೆ ಕಟ್ಟಿ ಎಷ್ಟು ವರ್ಷ ಆಗಿದೆ, ಕನ್ನಂಬಾಡಿ ಕಟ್ಟೆ ಊಳು ತುಂಬಿಕೊಂಡಿದೆ, ಆ ಊಳು ತೆಗೆಸಲು ನಿಮಗೆ ಯೋಗ್ಯತೆ ಇಲ್ಲ, ಇವತ್ತು ಕಾವೇರಿ ಆರತಿ ಹೆಸರಿನಲ್ಲಿ ಮೋಸ ಮಾಡಲು ಲೂಟಿ ಮಾಡಲು ಹೊರಟಿದ್ದೀರಲ್ಲ, ಇದು ಯಾವ ನ್ಯಾಯ ಎಂದು ಅವರು ಪ್ರಶ್ನಿಸಿದರು.

ಯಾವುದೋ ಒಂದು ವಿಚಾರಕ್ಕೆ ತಮಿಳುನಾಡಿಗೆ ನೀರು ಬಿಡಬೇಕು ಎಂದು ನ್ಯಾಯಾಲಯ ಆಜ್ಞೆ ಮಾಡುತ್ತದೆ ಎಂದು ನೀವು ನ್ಯಾಯಾಲಯಕ್ಕೆ ಗೌರವ ಕೊಡಬೇಕು ಎಂದು ನಮ್ಮ ರಾಜ್ಯದ ರೈತರಿಗೆ ಮೋಸ ಮಾಡಿಕೊಂಡು ತಮಿಳುನಾಡಿಗೆ ನೀರು ಬಿಡುತ್ತೀರಿ, ಆದರೆ ಅದೇ ಕಾವೇರಿ ಆರತಿ ನಿಲ್ಲಿಸಬೇಕು ಎಂದು

ಮಂಡ್ಯ ಜಿಲ್ಲಾ ರೈತ ಹಿತರಕ್ಷಣಾ ಸಮಿತಿ ಕೋರ್ಟ್ ಮೆಟ್ಟಿಲೇರಿ ಹೋದಾಗ ಒಂದು ವರ್ಷದಿಂದ ತಡೆಯಾಜ್ಞೆ ಕೊಟ್ಟು ಕಾವೇರಿ ಆರತಿ ಮಾಡಬಾರದು ಎಂದು ಹೇಳಿದ್ದರೂ ನೀವು ಕೋರ್ಟ್‌ಗೆ ಕಣ್ಣು ತಪ್ಪಿಸಿ ಲೂಟಿ ಮಾಡಲು ಕಾವೇರಿ ಆರತಿ ಮಾಡುತ್ತಿರುವುದು ಬಹಳ ಸ್ಪಷ್ಟ ಎಂದು ಜಿಲ್ಲೆಯ ಜನರು ಅರ್ಥ ಮಾಡಿಕೊಂಡಿದ್ದಾರೆ ಎಂದು ಅವರು ಹೇಳಿದರು.

ಸಮಿತಿಯ ಉಪಾಧ್ಯಕ್ಷ ಕೆ.ಬೋರಯ್ಯ ಮಾತನಾಡಿ ಸರ್ಕಾರ ಒಂದು ಭರವಸೆ ಕೊಟ್ಟು ಈಗ ಸುಮಾರು ಎಂಟರಿಂದ ಹತ್ತು ಕೋಟಿ ರೂಪಾಯಿ ಖರ್ಚು ಮಾಡಿ ಕಾವೇರಿ ಆರತಿ ಮಾಡಲು ಹೊರಟಿದೆ. ಇವತ್ತಿನ ಪರಿಸ್ಥಿತಿಯಲ್ಲಿ ಇದು ಮಾಡಬಹುದಾ ಎಂದು ನೀವೆಲ್ಲಾ ಅರ್ಥ ಮಾಡಿಕೊಳ್ಳಬೇಕು ಎಂದು ಹೇಳಿದರು. ಧಾರ್ಮಿಕ ಭಾವನೆ ಬಳಸಿಕೊಂಡು ಜನ ಸೇರಿಸುವ ತಂತ್ರವಾಗಿ ಬಸ್ಸು ಕಳಿಸ್ತೀವಿ,ಊಟದ ವ್ಯವಸ್ಥೆ ಮಾಡ್ತೀವಿ ಅಂತ ಹೇಳಿ ಜನಗಳು ಹೋಗುವಂತ ಪರಿಸ್ಥಿತಿಗೆ ತಂದಿದ್ದಾರೆ" ಎಂದು ಸರ್ಕಾರದ ನಡೆ ಬಗ್ಗೆ ಟೀಕಿಸಿದರು.

ನಂತರ ಬೆಂಗಳೂರು ಮೈಸೂರು ಹೆದ್ದಾರಿಯಲ್ಲಿ ಕೆಲಹೊತ್ತು ರಸ್ತೆ ತಡೆ ನಡೆಸಿದರು.

ಪ್ರತಿಭಟನೆಯಲ್ಲಿ ಕರವೇ ಎಚ್.ಡಿ.ಜಯರಾಮ್, ಜೈ ಕರ್ನಾಟಕ ಪರಿಷತ್ ರಾಜ್ಯಾಧ್ಯಕ್ಷ ಎಸ್.ನಾರಾಯಣ್, ರೈತ ಸಂಘದ ಅಧ್ಯಕ್ಷ ಇಂಡುವಾಳು ಚಂದ್ರಶೇಖರ್,ಸೊ.ಸಿ. ಪ್ರಕಾಶ್, ವೆಂಕಟೇಶ್, ಕನ್ನಡ ಸೇನೆ ಮಂಜುನಾಥ್, ನಗರಸಭೆ ಮಾಜಿ ಅಧ್ಯಕ್ಷೆ ಅಂಬುಜಮ್ಮ, ದಲಿತ ಸಂಘರ್ಷ ಸಮಿತಿ ಸಂಚಾಲಕ ಎಂ.ವಿ.ಕೃಷ್ಣ,ಮುದ್ದೇಗೌಡ ಮುಂತಾದವರು ಕೈಗೆ ಕಪ್ಪು ಪಟ್ಟಿ ಧರಿಸಿ ಭಾಗವಹಿಸಿದ್ದರು.

# ವಿಶ್ವ ಆಹಾರ ದಿನ : ಭಾರತದ ಸ್ಥಿತಿ ಎತ್ತ





ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ

ಅಕ್ಟೋಬರ್ 16 ರಂದು ಜಗತ್ತಿನಾದ್ಯಂತ "ವಿಶ್ವ ಆಹಾರ ದಿನ" (World Food Day) ವನ್ನಾಗಿ ಆಚರಿಸಲಾಗುತ್ತದೆ. ಈ ದಿನವು ಕೇವಲ ಆಹಾರದ ಮಹತ್ವವನ್ನು ನೆನಪಿಸಿಕೊಳ್ಳುವ ದಿನವಲ್ಲ; ಬದಲಿಗೆ ಹಸಿವು, ಅಪೌಷ್ಟಿಕತೆ, ಆಹಾರ ಭದ್ರತೆ ಮತ್ತು ಸುಸ್ಥಿರ ಕೃಷಿಯ ಸವಾಲುಗಳ ಕುರಿತು ಜಾಗತಿಕ ಮಟ್ಟದಲ್ಲಿ ಚಿಂತನೆ ಹಾಗೂ ಜಾಗೃತಿ ಮೂಡಿಸುವ ಒಂದು ಪ್ರಮುಖ ಘಟ್ಟವಾಗಿದೆ.

ಈ ಹಿನ್ನಲೆಯಲ್ಲಿ ನಮ್ಮ ಭಾರತದಲ್ಲಿ ಆಹಾರದ ಲಭ್ಯತೆ, ಕೃಷಿ ಉತ್ಪಾದನೆ, ಪೌಷ್ಟಿಕಾಂಶದ ಸ್ಥಿತಿಗತಿ ಮತ್ತು ಜಾಗತಿಕ ಸೂಚ್ಯಂಕಗಳಿಗೆ ಸಂಬಂಧಿಸಿದ ಪ್ರಮುಖ ಮತ್ತು ನವೀಕೃತ ಅಂಕಿ–ಅಂಶಗಳ ವಿವರವಾದ ಮಾಹಿತಿ ಇಲ್ಲಿದೆ:

1. ಕೃಷಿ ಉತ್ಪಾದನೆ ಮತ್ತು ಸ್ವಾವಲಂಬನೆ (Food Production)

ಭಾರತವು ಧಾನ್ಯ ಉತ್ಪಾದನೆಯಲ್ಲಿ ವಿಶ್ವದಲ್ಲೇ ಅತಿ ದೊಡ್ಡ ಕೃಷಿ ಶಕ್ತಿಗಳಲ್ಲಿ ಒಂದಾಗಿ ಹೊರಹೊಮ್ಮಿದೆ.

- ದಾಖಲೆಯ ಧಾನ್ಯ ಉತ್ಪಾದನೆ: ಇತ್ತೀಚಿನ ಕೇಂದ್ರ ಕೃಷಿ ಸಚಿವಾಲಯದ ವರದಿ ಪ್ರಕಾರ, ಭಾರತವು ವಾರ್ಷಿಕ ಸುಮಾರು 357.73 ಮಿಲಿಯನ್ ಮೆಟ್ರಿಕ್ ಟನ್ (ಒಒಖ) ಸಾರ್ವಕಾಲಿಕ ದಾಖಲೆಯ ಆಹಾರ ಧಾನ್ಯಗಳನ್ನು ಉತ್ಪಾದಿಸಿದೆ.
- ತೋಟಗಾರಿಕೆ (Horticulture) ಉತ್ಪನ್ನಗಳು: ಹಣ್ಣು ಮತ್ತು ತರಕಾರಿಗಳ ಉತ್ಪಾದನೆಯು ಧಾನ್ಯಗಳ ಉತ್ಪಾದನೆಯನ್ನೂ ಮೀರಿಸಿದ್ದು, ವಾರ್ಷಿಕ ಸುಮಾರು 362.08 ಮಿಲಿಯನ್ ಟನ್ ತಲುಪಿದೆ.
- ಜಾಗತಿಕ ಸ್ಥಾನ:
  ಅಕ್ಕಿ: ವಿಶ್ವದ ಒಟ್ಟು ಉತ್ಪಾದನೆಯ 26.5% ಪಾಲು ಹೊಂದುವ ಮೂಲಕ ವಿಶ್ವದ ಅತಿ ದೊಡ್ಡ ಅಕ್ಕಿ ಉತ್ಪಾದಕ ದೇಶವಾಗಿದೆ.
  ಗೋಧಿ: ವಿಶ್ವದ 2ನೇ ಅತಿ ದೊಡ್ಡ ಉತ್ಪಾದಕ (ಸುಮಾರು 14.2%).
  ಸಿರಿಧಾನ್ಯಗಳು (Millets): ವಾರ್ಷಿಕ 18.59 ಮಿಲಿಯನ್ ಟನ್ ಉತ್ಪಾದನೆಯೊಂದಿಗೆ ಭಾರತವು ವಿಶ್ವದಲ್ಲೇ ಮೊದಲ ಸ್ಥಾನದಲ್ಲಿದೆ. (ರಾಜಸ್ಥಾನ, ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಮುಖ ಕೊಡುಗೆ ನೀಡುತ್ತವೆ).
- ಆಹಾರ ರಫ್ತು: ಭಾರತದ ಕೃಷಿ ಮತ್ತು ಸಂಸ್ಕರಿಸಿದ ಆಹಾರ ಉತ್ಪನ್ನಗಳ ರಫ್ತು ಮೌಲ್ಯ 51.1 ಬಿಲಿಯನ್ ಡಾಲರ್ಗೆ ಏರಿಕೆಯಾಗಿದೆ.

2. ಜಾಗತಿಕ ಹಸಿವು ಸೂಚ್ಯಂಕ (Global Hunger Index - GHI)

ಉತ್ಪಾದನೆಯಲ್ಲಿ ದೇಶ ಮುಂಚೂಣಿಯಲ್ಲಿದ್ದರೂ, ವಿತರಣೆ ಮತ್ತು ಅಪೌಷ್ಟಿಕತೆಯ ಕಾರಣದಿಂದ ಜಾಗತಿಕ ಹಸಿವು ಸೂಚ್ಯಂಕದಲ್ಲಿ ಭಾರತದ ಶ್ರೇಯಾಂಕ ಕಳವಳಕಾರಿಯಾಗಿದೆ:

- ಶ್ರೇಯಾಂಕ (Rank): ಇತ್ತೀಚಿನ ಜಾಗತಿಕ ಹಸಿವು ಸೂಚ್ಯಂಕದ (ಉಊಖ 2026) ವರದಿಯ ಪ್ರಕಾರ, 122 ದೇಶಗಳ ಪಟ್ಟಿಯಲ್ಲಿ ಭಾರತಕ್ಕೆ 100 ನೇ ಸ್ಥಾನ ಲಭಿಸಿದೆ.
- ಅಂಕ (Score): ಭಾರತದ GHI ಅಂಕ 24.1 ಆಗಿದ್ದು, ದೇಶದಲ್ಲಿ ಹಸಿವಿನ ಮಟ್ಟ 'ಗಂಭೀರ' (ಖಜಡಿಠಣ) ವಿಭಾಗದಲ್ಲಿದೆ ಎಂದು ಇದು ಸೂಚಿಸುತ್ತದೆ.
- ನೆರೆಹೊರೆಯ ದೇಶಗಳು: ಶ್ರೀಲಂಕಾ, ನೇಪಾಳ ಮತ್ತು ಬಾಂಗ್ಲಾದೇಶಗಳಿಗಿಂತ ಭಾರತವು ಶ್ರೇಯಾಂಕದಲ್ಲಿ ಹಿಂದುಳಿದಿದೆ.

3. ಪೌಷ್ಟಿಕಾಂಶ ಮತ್ತು ಮಕ್ಕಳ ಆರೋಗ್ಯ (Nutrition & Health Stats)

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ (ಓಈಊಖ–5) ಪ್ರಕಾರ, ದೇಶದ ಮಕ್ಕಳಲ್ಲಿ ಪೌಷ್ಟಿಕಾಂಶದ ಕೊರತೆಯ ಅಂಕಿ–ಅಂಶಗಳು ಹೀಗಿವೆ:

ಕುಂಠಿತ ಬೆಳವಣಿಗೆ (Stunting) 35.5% ವಯಸ್ಸಿಗೆ ತಕ್ಕಷ್ಟು ಎತ್ತರ ಇಲ್ಲದಿರುವ 5 ವರ್ಷದೊಳಗಿನ ಮಕ್ಕಳು.

ತೂಕದ ಕೊರತೆ (Wasting) 19.3% ಎತ್ತರಕ್ಕೆ ತಕ್ಕಷ್ಟು ತೂಕ ಇಲ್ಲದಿರುವ ಅತಿಯಾದ ಅಪೌಷ್ಟಿಕತೆಯ ಮಕ್ಕಳು (ಇದು ಜಗತ್ತಿನಲ್ಲೇ ಗರಿಷ್ಠ ಮಟ್ಟದಲ್ಲಿದೆ).

ಕಡಿಮೆ ತೂಕ (Underweight) 32.1% ವಯಸ್ಸಿಗೆ ತಕ್ಕಷ್ಟು ತೂಕ ಹೊಂದಿರದ ಮಕ್ಕಳು.

ರಕ್ತಹೀನತೆ (Child Anaemia) 67.1% 6 ರಿಂದ 59 ತಿಂಗಳೊಳಗಿನ ಮಕ್ಕಳಲ್ಲಿ ರಕ್ತಹೀನತೆಯ ಕೊರತೆ.

4. ಆಹಾರ ಪೋಲು ಮತ್ತು ತ್ಯಾಜ್ಯ (Food Wastage)

- ಆಹಾರ ಪೋಲಾಗುವ ಪ್ರಮಾಣ: ಜಾಗತಿಕ ಮಟ್ಟದಲ್ಲಿ ಮತ್ತು ಭಾರತದಲ್ಲಿ ಉತ್ಪಾದನೆಯಾಗುವ ಒಟ್ಟು ಆಹಾರದಲ್ಲಿ ಸುಮಾರು 30% ರಿಂದ 40% ಭಾಗ ತಟ್ಟೆಗೆ ತಲುಪುವ ಮೊದಲೇ (ಸಾರಿಗೆ, ಸರಿಯಾದ ಶೀತಲ ಗೃಹಗಳಿಲ್ಲದೆ) ಅಥವಾ ಬಳಕೆದಾರರ ಮಟ್ಟದಲ್ಲಿ (ಮನೆ, ಮದುವೆ, ಸಮಾರಂಭಗಳಲ್ಲಿ) ವ್ಯರ್ಥವಾಗುತ್ತಿದೆ.
- ಮನೆಯ ಹಂತದ ಪೋಲು: ಯುಎನ್‌ಇಪಿ (UNEP) ಆಹಾರ ತ್ಯಾಜ್ಯ ಸೂಚ್ಯಂಕದ ವರದಿಗಳ ಪ್ರಕಾರ, ಭಾರತದ ಮನೆಗಳಲ್ಲಿ ತಲಾ ವಾರ್ಷಿಕ ಸುಮಾರು 50 ಕೆಜಿ ಗೂ ಹೆಚ್ಚು ಆಹಾರ ಪೋಲಾಗುತ್ತಿದೆ.

5. ಸರ್ಕಾರದ ಪ್ರಮುಖ ಯೋಜನೆಗಳು ಮತ್ತು ವಿತರಣೆ

ಹಸಿವು ಮತ್ತು ಅಪೌಷ್ಟಿಕತೆಯನ್ನು ನೀಗಿಸಲು ಭಾರತ ಸರ್ಕಾರವು ವಿಶ್ವದಲ್ಲೇ ಅತಿ ದೊಡ್ಡ ಆಹಾರ ಭದ್ರತಾ ಜಾಲವನ್ನು ನಡೆಸುತ್ತಿದೆ:

1. ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ್ ಅನ್ನ ಯೋಜನೆ (ಕಒಉಏಂಙ): ದೇಶದ ಸುಮಾರು 80 ಕೋಟಿಗೂ ಹೆಚ್ಚು ಬಡ ಜನರಿಗೆ ಸಾರ್ವಜನಿಕ ಪಡಿತರ ವ್ಯವಸ್ಥೆ (PDS) ಮೂಲಕ ಉಚಿತ ಧಾನ್ಯಗಳನ್ನು ಒದಗಿಸಲಾಗುತ್ತಿದೆ.
2. ಪಿಎಂ ಪೋಷಣ್ (PM-POSHAN / ಬಿಸಿಊಟ): ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳಿಗೆ ಪೌಷ್ಟಿಕ ಮಧ್ಯಾಹ್ನದ ಬಿಸಿಊಟ ಒದಗಿಸುವ ವಿಶ್ವದ ಅತಿ ದೊಡ್ಡ ಶಾಲಾ ಆಹಾರ ಕಾರ್ಯಕ್ರಮ.
3. ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0: ಗರ್ಭಿಣಿಯರು, ಬಾಣಂತಿಯರು ಮತ್ತು ಅಪೌಷ್ಟಿಕತೆಯಿಂದ ಬಳಲುವ ಮಕ್ಕಳಿಗೆ ಪೌಷ್ಟಿಕ ಆಹಾರ ಒದಗಿಸುವ ರಾಷ್ಟ್ರೀಯ ಅಭಿಯಾನ.

"ಅನ್ನದಾತೋ ಸುಖೀಭವ" ಎಂಬುದು ಭಾರತೀಯ ಸಂಸ್ಕೃತಿಯ ಮೂಲಮಂತ್ರ. ವಿಶ್ವ ಆಹಾರ ದಿನವು ನಮಗೆ ಆಹಾರದ ಮೌಲ್ಯವನ್ನು ಮತ್ತು ಅದನ್ನು ಬೆಳೆಯುವ ರೈತನ ಶ್ರಮವನ್ನು ಗೌರವಿಸಲು ನೆನಪಿಸುತ್ತದೆ. 'ಯಾರೂ ಹಸಿವಿನಿಂದ ಬಳಲಬಾರದು' ಎಂಬ ಜಾಗತಿಕ ಕನಸು ನನಸಾಗಲು ಆಹಾರ ಉಳಿತಾಯ ಮತ್ತು ಸುಸ್ಥಿರ ಆಹಾರ ಪದ್ಧತಿಯನ್ನು ನಮ್ಮ ದೈನಂದಿನ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ಈ ದಿನದ ನಿಜವಾದ ಸಂದೇಶ.

ಭಾರತವು ಆಹಾರ ಧಾನ್ಯಗಳ ಕೊರತೆ ಇರುವ ದೇಶ ಎನಿಸಿಕೊಂಡಿಲ್ಲ, ಬದಲಾಗಿ ಆಹಾರವನ್ನು ಅಗತ್ಯವಿರುವವರಿಗೆ ಸರಿಯಾಗಿ ತಲುಪಿಸುವ ಮತ್ತು ಅಪೌಷ್ಟಿಕತೆ ನೀಗಿಸುವ ಸವಾಲನ್ನು ಎದುರಿಸುತ್ತಿದೆ.



# ಅ.17 ರಂದು ಉಸ್ತುವಾರಿ ಸಚಿವರ ಕೊಡಗು ಜಿಲ್ಲಾ ಪ್ರವಾಸ

**ಮಡಿಕೇರಿ:** ಕೃಷಿ ಹಾಗೂ ಉಸ್ತುವಾರಿ ಸಚಿವರಾದ ಪಿ.ಎಂ.ನರೇಂದ್ರ ಸ್ವಾಮಿ ಅವರು ಅಕ್ಟೋಬರ್, 17 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ.

ಮಾನ್ಯ ಸಚಿವರು ಅಕ್ಟೋಬರ್, 17 ರಂದು ಸಂಜೆ 4 ಗಂಟೆಗೆ ಕರ್ಣಂಗೇರಿ ಗ್ರಾಮದಲ್ಲಿ ಸಮಗ್ರ ಕೃಷಿ ಪದ್ಧತಿ ಉತ್ಕೃಷ್ಟ ಕೇಂದ್ರ ಕಟ್ಟಡದ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಂತರ ಸಂಜೆ 7 ಗಂಟೆಗೆ ತಲಕಾವೇರಿಯಲ್ಲಿ ಜರುಗುವ ತುಲಾ ಸಂಕ್ರಮಣ–ಕಾವೇರಿ ಪವಿತ್ರ ತೀರ್ಥೋದ್ಭವದಲ್ಲಿ ಭಾಗವಹಿಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಕೆ.ಸಿ.ವಿರೂಪಾಕ್ಷ ಅವರು ತಿಳಿಸಿದ್ದಾರೆ.

# ನೂತನ ಶಾಖಾ ಕಚೇರಿಯನ್ನು ನಿರ್ಮಿಸಲು 15 ಸೆಂಟ್ಸ್ ಜಾಗ ಒದಗಿಸಲು ಅರ್ಜಿ ಆಹ್ವಾನ

**ಮಡಿಕೇರಿ:** ಬಾಳೆಲೆ ಪಟ್ಟಣ ವ್ಯಾಪ್ತಿಯಲ್ಲಿ ಚಾವಿಸನಿನಿ (ಸೆಸ್ಕ್) ಇಲಾಖೆಗೆ ಸಂಬಂಧಿಸಿದಂತೆ, ನೂತನ ಶಾಖಾ ಕಚೇರಿಯನ್ನು ನಿರ್ಮಿಸಲು 15 ಸೆಂಟ್ಸ್ ಜಾಗದ ಅವಶ್ಯಕತೆ ಇರುತ್ತದೆ. ಸೂಕ್ತ ರಸ್ತೆ ಸಂಪರ್ಕ ಹಾಗೂ ಬಾಳೆಲೆ ಪಟ್ಟಣ ವ್ಯಾಪ್ತಿಗೆ ಒಳಪಡುವ ಜಾಗವನ್ನು ನೀಡಲು ಆಸಕ್ತಿ ಇರುವ ಸಾರ್ವಜನಿಕರು ಅರ್ಜಿಯನ್ನು ಅಂಚೆ ಮುಖೇನ ಅಥವಾ ಖುದ್ದಾಗಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ಉಪ ವಿಭಾಗ, ಚಾವಿಸನಿನಿ, ಗೋಣಿಕೊಪ್ಪ, ದೂ.ಸಂ.9449598607 ಹಾಗೂ ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಶಾಖಾ ಕಚೇರಿ, ಚಾವಿಸನಿನಿ, ಬಾಳೆಲೆ, ದೂ.ಸಂ.9449597484 ಈ ವಿಳಾಸಕ್ಕೆ ಸಲ್ಲಿಸಲು ಕೋರಿದೆ.

ಹೆಚ್ಚಿನ ಮಾಹಿತಿಗೆ ಕಾರ್ಯನಿರ್ವಾಹಕ ಅಭಿಯಂತರರು, ಕಾರ್ಯ ಮತ್ತು ಪಾಲನೆ ವಿಭಾಗ ಕಚೇರಿ, ಚಾವಿಸನಿನಿ, ಮಡಿಕೇರಿ ಇವರನ್ನು ಸಂಪರ್ಕಿಸಬಹುದು ಎಂದು ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಸಾಂತ್ವನ ಕೌಟುಂಬಿಕ ಸಲಹಾ ಕೇಂದ್ರ ಮಹಿಳಾ ಸಹಾಯವಾಣಿ

ಮಡಿಕೇರಿ ಅ.15(ಕರ್ನಾಟಕ ವಾರ್ತೆ):–ಕರ್ನಾಟಕ ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2002 ರ ನವೆಂಬರ್, 04 ರಂದು ಕೊಡಗು ಜಿಲ್ಲಾ ಶಿಶು ಕಲ್ಯಾಣ ಸಂಸ್ಥೆಯಲ್ಲಿ ಪ್ರಾರಂಭಗೊಂಡ 'ಸಾಂತ್ವನ ಮಹಿಳಾ ಸಹಾಯವಾಣಿ' ಕೊಡಗಿನಾದ್ಯಂತ ಸಮಾಜದ ನೊಂದ ಮಹಿಳೆಯರು ಪ್ರತಿಯೊಂದು ಸ್ತರದಲ್ಲಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ದಾಖಲಿಸಿಕೊಂಡು ತಕ್ಷಣಕ್ಕೆ ಸರಿಯಾದ ಸಲಹೆ ಸೂಚನೆಗಳನ್ನು ನೀಡಿ ನೆರವು ಕಲ್ಪಿಸುತ್ತಾ ಬಂದಿರುತ್ತದೆ.

ಸಾಂತ್ವನ ಕೇಂದ್ರದಲ್ಲಿ ಈವರೆಗೆ 5894 ವಿವಿಧ ಸ್ವರೂಪದ ಪ್ರಕರಣಗಳು ದಾಖಲಾಗಿದ್ದು, 5860 ಪ್ರಕರಣಗಳು ಇತ್ಯರ್ಥಗೊಂಡಿದೆ. 2026–27 ನೇ ಆರ್ಥಿಕ ಸಾಲಿನಲ್ಲಿ 139 ಪ್ರಕರಣಗಳು ದಾಖಲಾಗಿ, 113 ಪ್ರಕರಣಗಳು ಇತ್ಯರ್ಥಗೊಂಡು ಹಿಂದಿನ ಸಾಲಿನ ಉಳಿಕೆ ಪ್ರಕರಣಗಳು ಸೇರಿ, ಉಳಿದ 34 ಪ್ರಕರಣಗಳು ಇತ್ಯರ್ಥದ ಹಂತದಲ್ಲಿದೆ.

ಈವರೆಗೆ ವಿವಿಧ ಸ್ವರೂಪದ ಪ್ರಕರಣಗಳಿಗೆ ಸಂಬಂಧಿಸಿದಂತೆ ಒಟ್ಟು ರೂ.5.25 ಲಕ್ಷ ಗಳನ್ನು ಸಾಂತ್ವನ ಕೇಂದ್ರ ಹಾಗೂ ನ್ಯಾಯಾಲಯದ ಮೂಲಕ ಫಲಾನುಭವಿಗಳಿಗೆ 2026–27ನೇ ಸಾಲಿನಲ್ಲಿ ಕೊಡಿಸಿಕೊಡಲಾಗಿದೆ.

ಮಹಿಳಾ ಸಹಾಯವಾಣಿಯ ಪ್ರಯೋಜನವನ್ನು ಪಡೆದುಕೊಳ್ಳುವಂತೆ ಸಾಂತ್ವನ ಕೇಂದ್ರದ ಅಧ್ಯಕ್ಷರಾದ ಬಿ.ಕೆ.ರವೀಂದ್ರ ರೈ ಹಾಗೂ ಪ್ರಧಾನ ಕಾರ್ಯದರ್ಶಿ ನಮಿತ ಆರ್.ರೈ ಅವರು ಕೋರಿದ್ದಾರೆ.

# ಅ.16 ರಂದು ವಿದ್ಯುತ್ ವ್ಯತ್ಯಯ

**ಮಡಿಕೇರಿ:** ಗೋಣಿಕೊಪ್ಪ ವಿದ್ಯುತ್ ವಿತರಣಾ ಉಪಕೇಂದ್ರದಿಂದ ಹೊರಹೊಮ್ಮುವ ಎಫ್7 ಅರುವತ್ತೋಕ್ಲು, ಎಫ್8 ಗೋಣಿಕೊಪ್ಪಲು ಫೀಡರ್‌ನಲ್ಲಿ ದಸರಾ ಹಬ್ಬದ ಪ್ರಯುಕ್ತ ತುರ್ತು ನಿರ್ವಹಣಾ ಕಾಮಗಾರಿ ನಡೆಸಬೇಕಿರುವುದರಿಂದ ಅಕ್ಟೋಬರ್, 16 ರಂದು ಬೆಳಗ್ಗೆ 10 ರಿಂದ 5 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಈ ಮಾರ್ಗದಿಂದ ವಿದ್ಯುತ್ ಸರಬರಾಜಾಗುವ ಗಣಪತಿನಗರ, ಜೋಡುಬೆಟ್ಟ, ಕಾಫಿ ಬೋರ್ಡ್, ಗೋಣಿಕೊಪ್ಪಲು ಟೌನ್, ಹರಿಶ್ಚಂದ್ರಪುರ, ಕೈಕೇರಿ, ಅರುವತ್ತೋಕ್ಲು, ಮೈಸೂರಮ್ಮನಗರ, ನೇತಾಜಿ ಬಡಾವಣೆ, ಲೋಪಮುದ್ರ ಆಸ್ಪತ್ರೆ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಚಾವಿಸನಿನಿ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.



# ಸಿ.ಎಂ.ಲಿಂಗಪ್ಪ ಅವರು ಮೌಲ್ಯಯುತ ಮತ್ತು ಜನಪರ ರಾಜಕಾರಣಿ

**ರಾಮನಗರ:** ಇತ್ತೀಚೆಗೆ ಅಧಿಕಾರ ಮತ್ತು ಹಣಕ್ಕೆ ಹೆಚ್ಚು ಗೌರವ ಸಿಗುತ್ತಿದೆ. ಅದೆಲ್ಲಕ್ಕಿಂತ ಹೆಚ್ಚಾಗಿ ಗುಣ, ನಿಸ್ವಾರ್ಥ ಸೇವೆ, ಜೀವನ ಮೌಲ್ಯ ಹಾಗೂ ಜನಪರ ನಿಲುವುಗಳನ್ನು ಗೌರವಿಸುವುದು ಈ ಕಾಲಕ್ಕೆ ಅತ್ಯಂತ ಅಗತ್ಯವಾದುದು. ಆ ನಿಟ್ಟಿನಲ್ಲಿ ಮೌಲ್ಯಯುತ ಮತ್ತು ಜನಪರ ರಾಜಕಾರಣಿ ಸಿ. ಎಂ. ಲಿಂಗಪ್ಪ ಅವರು ನಮ್ಮೆದುರಿಗೆ ಇರುವ ದೊಡ್ಡ ಮಾದರಿ ವ್ಯಕ್ತಿಯಾಗಿದ್ದಾರೆ ಎಂದು ಚಿಂತಕ ಡಾ.ಬಂಜಗೆರೆ ಜಯಪ್ರಕಾಶ್ ಅಭಿಪ್ರಾಯಪಟ್ಟರು.

ತಾಲ್ಲೂಕಿನ ಬಿಡದಿಯ ಜ್ಞಾನ ವಿಕಾಸ್ ವಿದ್ಯಾ ಸಂಘದ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಬುಧವಾರ ರಾಮನಗರದ ಕುಂಬಾಪುರದ ಜನಮುಖಿ ಟ್ರಸ್ಟ್ ಹಮ್ಮಿಕೊಂಡಿದ್ದ ಜನಮುಖಿ ಸೇವಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, 'ಸಿ.ಎಂ.ಲಿಂಗಪ್ಪ ಅವರು ಪ್ರಾಮಾಣಿಕ ಹಾಗೂ ಮೌಲ್ಯಾಧಾರಿತ ರಾಜಕಾರಣಕ್ಕೆ ಹೆಸರುವಾಸಿಯಾಗಿದ್ದಾರೆ ಸರಳ ಜೀವನ ನಡೆಸುತ್ತಾ ಇಂದಿಗೂ ಜನರೊಟ್ಟಿಗೆ ಇರುತ್ತಾ, ಜನಸೇವೆಯನ್ನೇ ಜೀವನದ ಅತ್ಯಂತ ಮುಖ್ಯವಾದ ಕೆಲಸ ಎಂದು ಮುನ್ನಡೆಯುತ್ತಿದ್ದಾರೆ ಎಂದರು.



ಅಧಿಕಾರವಿರಲಿ ಇಲ್ಲದಿರಲಿ ಸಿ.ಎಂ. ಲಿಂಗಪ್ಪ ಅವರ ನಡವಳಿಕೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಸೇವೆ ಎಂಬುದು ಹಣಕ್ಕಾಗಿ ಮಾಡುವುದಲ್ಲ. ಆದರೆ, ಸುದೀರ್ಘ ಅವಧಿಯವರೆಗೆ ಸಿ.ಎಂ. ಲಿಂಗಪ್ಪ ಅವರು ಜನಸೇವೆಯನ್ನು ಅಚ್ಚುಕಟ್ಟಾಗಿ ಮಾಡಿಕೊಂಡು ಬಂದಿದ್ದಾರೆ. ಅಂತಹ ಸಾರ್ಥಕ ಜೀವಿಯ ಸಾಧನೆಯನ್ನು ಯುವಜನರು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಲೇಖಕ ಕೊತ್ತಿಪುರ ಜಿ. ಶಿವಣ್ಣ ಮಾತನಾಡಿ, ಪ್ರಜೆ ಮತ್ತು ಪ್ರಭುವಿನ ದನಿಗಳು ಪರಸ್ಪರ ವಿನಿಮಯವಾದಾಗ ಮಾತ್ರ ಸಂವಿಧಾನದ ಆಶಯಗಳು ಈಡೇರುತ್ತವೆ. ಆದರೆ, ಹಿಂದಿನ ಹಾಗೂ ಈಗಿನ ರಾಜಕೀಯ ವ್ಯವಸ್ಥೆಯ ನಡುವೆ ಅಜಗಜಾಂತರ ವ್ಯತ್ಯಾಸವಿದೆ. ಹಿಂದಿನ ಆಡಳಿತಕ್ಕೆ ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್ ಸೇರಿದಂತೆ ಹೋರಾಟಗಾರರು ಹಾಗೂ ಮಹನೀಯರು ಆದರ್ಶವಾಗಿದ್ದರು ಇಂದು ಸ್ವಾರ್ಥ ಮತ್ತು ಧನ ಸಂಪಾದನೆಯೇ ಪ್ರಧಾನವಾಗಿವೆ ಎಂದು ಹೇಳಿದರು.

ಈಗಿನ ರಾಜಕೀಯ ಅದಕ್ಕೆ ತದ್ವಿರುದ್ಧವಾಗಿದೆ. ಹಿಂದಿನ ರಾಜಕಾರಣಕ್ಕೆ ಸಿ.ಎಂ. ಲಿಂಗಪ್ಪ ಅವರು ನಮ್ಮ ಎದುರಿಗೆ ಇರುವ ಬಹು ದೊಡ್ಡ ಮಾದರಿ. ತಮ್ಮ ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿ, ಜನಮನದಲ್ಲಿ ಉಳಿದಿದ್ದಾರೆ. ಅಂತಹವರಿಗೆ ಜನಮುಖಿ ಟ್ರಸ್ಟ್ ಪ್ರಶಸ್ತಿ ನೀಡುತ್ತಿರುವುದು ಪ್ರಶಸ್ತಿ ಮೌಲ್ಯವನ್ನು ಹೆಚ್ಚಿಸಿದೆ ಎಂದು ಅಭಿಪ್ರಾಯಪಟ್ಟರು.

**ವಿಚಾರ, ವೈಚಾರಿಕತೆ ಬೆಳೆಸಿಕೊಳ್ಳಿ?**

**ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಸಿ.ಎಂ. ಲಿಂಗಪ್ಪ, ಯುವಜನರು ವಿಚಾರದ ಜೊತೆಗೆ ವೈಚಾರಿಕತೆ ಬೆಳೆಸಿಕೊಳ್ಳಬೇಕು. ಮಹಾತ್ಮ ಗಾಂಧೀಜಿ, ಅಂಬೇಡ್ಕರ್, ಸ್ವಾಮಿ ವಿವೇಕಾನಂದ, ವಿಚಾರವಾದಿ ಎಚ್. ನರಸಿಂಹಯ್ಯ ಸೇರಿದಂತೆ ಮಹನೀಯರ ಬದುಕು ಮತ್ತು ವಿಚಾರಧಾರೆಗಳನ್ನು ತಿಳಿದುಕೊಳ್ಳಬೇಕು. ಬದುಕಿನಲ್ಲಿ ಕೃತಜ್ಞತೆ ಭಾವ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಬದುಕಿನಲ್ಲಿ ನೆನಪಿನಲ್ಲಿ ಉಳಿಯುವಂತಹ ಕೆಲಸಗಳನ್ನು ಮಾಡಲು ಸಾಧ್ಯ ಎಂದರು.**

ಮಾಜಿ ಶಾಸಕ ಹಾಗೂ ಜ್ಞಾನ ವಿಕಾಸ್ ವಿದ್ಯಾಸಂಘದ ಅಧ್ಯಕ್ಷ ಸಿ.ಎಂ. ಲಿಂಗಪ್ಪ ಅವರಿಗೆ ಜನಮುಖಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ರೈತ ಮುಖಂಡ ಸಿ. ಪುಟ್ಟಸ್ವಾಮಿ, ಸಂಘದ ನಿರ್ದೇಶಕ ಸತೀಶ್ ಚಂದ್ರ, ಖಜಾಂಚಿ ಗಂಗಾಧರಯ್ಯ, ಟ್ರಸ್ಟ್ ಅಧ್ಯಕ್ಷ ವೆಂಕಟರಾಮು, ಕಾರ್ಯದರ್ಶಿ ಕುಂಬಾಪುರ ವಿ. ಬಾಬು, ವಕೀಲ ರವಿಕುಮಾರ್, ಪದವಿ ಕಾಲೇಜಿನ ಪ್ರಾಂಶುಪಾಲೆ ರೂಪಶ್ರೀ, ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪದವಿ ಕಾಲೇಜಿನ ಇಂಗ್ಲಿಷ್ ವಿಭಾಗದ ಮುಖ್ಯಸ್ಥ ಆನಂದ ಪ್ರಭು ಕಾರ್ಯಕ್ರಮ ನಿರ್ವಹಣೆ ಮಾಡಿದರು.

# ಸಭೆ ಕರೆಯಿರಿ, ಡೀಸಿಗೆ ರೈತರ ಆಗ್ರಹ

**ರಾಮನಗರ :** ರೈತರ ವಿವಿಧ ಬೇಡಿಕೆಗಳನ್ನು ಚರ್ಚಿಸಲು ಜಿಲ್ಲಾಮಟ್ಟದ ಅಧಿಕಾರಿಗಳನ್ನೊಳಗೊಂಡಂತೆ ಜಿಲ್ಲಾಧಿಕಾರಿಗಳು ರೈತರ ಸಮಸ್ಯೆ ಆಲಿಸಲು ಸಭೆ ಕರೆಯಬೇಕೆಂದು ಒತ್ತಾಯಿಸಿ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆ ಕೋಡಿಹಳ್ಳಿ ಚಂದ್ರಶೇಖರ್ ಬಣದ ಕಾರ್ಯಕರ್ತರು ಜಿಲ್ಲಾಧ್ಯಕ್ಷ ಎ.ಎಲ್. ಬೈರೇಗೌಡ ನೇತ್ರತ್ವದಲ್ಲಿ ಜಿಲ್ಲಾಧಿಕಾರಿಗಳ ಕಛೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿ ಅಪರ ಜಿಲ್ಲಾಧಿಕಾರಿ ಚಂದ್ರಯ್ಯ ಅವರಿಗೆ ಮನವಿಪತ್ರ ನೀಡಿದರು.

ಜಿಲ್ಲಾಧ್ಯಕ್ಷ ಎ.ಎಲ್. ಬೈರೇಗೌಡ ಮಾತನಾಡಿ ಜಿಲ್ಲೆಯಲ್ಲಿ ನಿರುದ್ಯೋಗ ಯುವಕ ಯುವತಿಯರಿಗೆ ಅನುಕೂಲವಾಗುವಂತೆ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಕೇಂದ್ರಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ನಿರ್ವಹಣೆ ಮಾಡಲು ಹೊಸ ಕೇಂದ್ರಗಳನ್ನು ತೆರೆದು ಜನರಿಗೆ ಅನುಕೂಲ ಕಲ್ಪಿಸಬೇಕು. ಕೃಷಿ ಸಮ್ಮಾನ್ ಯೋಜನೆಯಲ್ಲಿ ಹಲವು ನಿಯಮಗಳನ್ನು ಸಡಿಲಿಕೆ ಮಾಡಬೇಕು. ಇದರಿಂದ ಹಲವಾರು ರೈತರಿಗೆ ಸರ್ಕಾರದ ಸೌಲಭ್ಯ ಸಿಕ್ಕಂತಾಗುತ್ತದೆ.

ಜಿಲ್ಲೆಯಲ್ಲಿ ವನ್ಯಪ್ರಾಣಿಗಳ ಹಾವಳಿ ಮಿತಿ ಮೀರಿದೆ. ಒಂದು ಕಡೆ ಚಿರತೆ ಧಾಳಿಗೆ ರೈತರು ಬಲಿಯಾಗುತ್ತಿದ್ದಾರೆ. ಮತ್ತೊಂದೆಡೆ ಆನೆ ಧಾಳಿ ನಿರಂತರವಾಗಿ ನಡೆಯುತ್ತಿದೆ. ವನ್ಯಪ್ರಾಣಿ ನಿಯಂತ್ರಣ ಆಗುತ್ತಿಲ್ಲ ರೈತರು ಕೃಷಿ ಕೆಲಸ ನಿರ್ವಹಿಸಲು ಸಾಧ್ಯವಾಗದೆ ಜಮೀನುಗಳ ಬಳಿ ಹೋಗಲು ಎದುರುವಂತಾಗಿದೆ.

ಜಿಲ್ಲೆಯ ತಾಲ್ಲೂಕು ಕಛೇರಿಗಳಲ್ಲಿ ಕಂದಾಯ ಇಲಾಖೆಯ ರೈತರ ಕೆಲಸಗಳು ಮಂದಗತಿಯಲ್ಲಿ ಸಾಗುತ್ತಿವೆ. ವಿವಿಧ ಇಲಾಖೆಗಳಲ್ಲಿ ಕೆಲಸಕಾರ್ಯಗಳು ಆಗುತ್ತಿಲ್ಲ. ಈ ರೀತಿಯಾಗಿ ಹತ್ತು ಹಲವು ಸಮಸ್ಯೆಯಲ್ಲಿ ಜಿಲ್ಲೆಯ ರೈತರು ಬಸವಳಿಯುತ್ತಿದ್ದಾರೆ. ಜಿಲ್ಲಾಧಿಕಾರಿಗಳು ರೈತರೊಟ್ಟಿಗೆ ಸಭೆ ಕರೆಯದೆ ಮೀನಮೇಷ ಎಣಿಸುತ್ತಿದ್ದಾರೆ ನಮ್ಮ ಸಮಸ್ಯೆ ಹೇಳಲು ಆಗುತ್ತಿಲ್ಲ ಕೂಡಲೇ ಜಿಲ್ಲಾಧಿಕಾರಿಗಳು ರೈತರೊಟ್ಟಿಗೆ ಸಭೆ ಕರೆಯಬೇಕು ರೈತರ ಸಮಸ್ಯೆ ಆಲಿಸಬೇಕು ಎಂದು ಆಗ್ರಹಿಸಿದರು.

ಸರ್ಕಾರದಿಂದ ರೈತರಿಗೆ ಕೊಡುತ್ತಿರುವ ಬರ ಪರಿಹಾರ ಮೊತ್ತವನ್ನು ಹೆಚ್ಚಿಸಬೇಕು. ರೈತರಿಗೆ ಸರ್ಕಾರದಿಂದ ನೀಡುವ ಸಹಾಯಧನವನ್ನು ನೇರವಾಗಿ ರೈತರ ಖಾತೆಗೆ ಜಮಾ ಮಾಡಬೇಕು ರಾಮನಗರ ರೇಷ್ಮೆ ಮಾರುಕಟ್ಟೆಯಲ್ಲಿ ರೈತರಿಗೆ ಮೂಲಸೌಕರ್ಯದ ಕೊರತೆಗಳಿವೆ ನೂತನ ಮಾರುಕಟ್ಟೆ ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಜಿಲ್ಲೆಯಲ್ಲಿ ಅನೇಕ ರೈತರು ಸರ್ಕಾರಿ ಜಮೀನನ್ನು ಇದುವರೆಗೆ ಮಾಡಿಕೊಂಡು ಜೀವನ ನಡೆಸುತ್ತಿದ್ದು ಇಂತಹ ಜಮೀನಗಳ ಭೂ ಮಂಜೂರಾತಿಯನ್ನು ತ್ವರಿತಗತಿಯಲ್ಲಿ ಮಾಡಲು ಅಗತ್ಯ ಕ್ರಮ ವಹಿಸಬೇಕೆಂದು ಒತ್ತಾಯಿಸಿದರು.

ರಾಜ್ಯ ರೈತ ಸಂಘದ ಜಿಲ್ಲಾ ಗೌರವಾಧ್ಯಕ್ಷ ಡಿ.ಎಂ. ಮಾದೇಗೌಡ ಮಾತನಾಡಿ ರೈತರು ಕಾಲಾಂತರದಿಂದ ಅನುಭವವಿರುವ ಸರ್ಕಾರಿ ಜಮೀನಿನ ಮೇಲೆ ಹಕ್ಕು ಸಾಧಿಸಲು ಹೋದರೆ ರೈತರ ಮೇಲೆ ಅರಣ್ಯ ಇಲಾಖೆ ದೌರ್ಜನ್ಯ ಮಾಡುತ್ತಿದೆ ಇದಕ್ಕೆ ಜಿಲ್ಲಾಡಳಿತ ಸರ್ಕಾರ ತಡೆಯೊಡ್ಡಬೆಕು ರೈತರಿಗೆ ನ್ಯಾಯಸಿಗಬೇಕು. ಸರ್ವೆ ಇಲಾಖೆಯಿಂದ ಆಗುತ್ತಿರುವ ವಿಳಂಬ ಅಧಿಕಾರಿಗಳಿಂದ ರೈತರಿಗೆ ಆಗುತ್ತಿರುವ ಕಿರುಕುಳ ತಡೆಯಬೇಕು.

ಜಿಲ್ಲೆಯಲ್ಲಿ ಬಾಕಿ ಇರುವ ರೈತರ ರಾಗಿ ಹಣವನ್ನು ಬಿಡುಗಡೆ ಮಾಡಬೇಕು. ಮಾವು ಸಂಸ್ಕರಣಾ ಘಟಕ ಪ್ರಾರಂಭಿಸಬೇಕಕು. ಎಸ್ಐಆರ್ ಮೂಲಕ ರಾಜ್ಯದಲ್ಲಿ ಮತದಾರರನ್ನು ಗೊಂದಲಕ್ಕೀಡು ಮಾಡುತ್ತಿದ್ದು ಚುನಾವಣಾ ಆಯೋಗ ಈ ಸಂಬಂಧ ಕ್ರಮ ವಹಿಸಿ ಜಿಲ್ಲೆಯ ಯಾವುದೇ ನೈಜ ಮತದಾರರು ತಮ್ಮ ಹಕ್ಕನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಲು ಸೂಚಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ರೈತ ಮುಖಂಡ ಅಶ್ವಥ್ ಮಾತನಾಡಿ ಜಿಲ್ಲೆಯಲ್ಲಿನ ಕಂದಾಯ ಇಲಾಖೆಗಳಲ್ಲಿ ವಿವಿಧ ಹಂತಗಳಲ್ಲಿರುವ ರೈತ ಸಂಬಂಧಿ ಸಿವಿಲ್ ದಾವೆಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥಗೊಳಿಸಿ ಸಂಬಂಧಪಟ್ಟ ರೈತರ ಭೂ ಹಕ್ಕು ಪಡೆಯಲು ಅನುಕೂಲ ಮಾಡಿಕೊಡಬೇಕು. ನೆನೆಗುದಿಗೆ ಬಿದ್ದಿರುವ ಮೇಕೆದಾಟು ಯೋಜನೆಯನ್ನು ಶೀಘ್ರವೇ ಪ್ರಾರಂಭಿಸಬೇಕು ಎಂದರು

ರೈತ ಸಂಘದ ಮುಖಂಡರಾದ ಗೋವಿಂದರಾಜು, ಜಯಮ್ಮ, ನಂಜಪ್ಪ, ಸಣ್ಣಮ್ಮ, ನವೀನ್‌ಕುಮಾರ್, ರಮೇಶ್, ರಾಜೇಶ್, ಜಯಲಕ್ಷ್ಮಮ್ಮ, ರವೀಶ, ಗೋವಿಂದಯ್ಯ, ಮರಿಲಿಂಗಯ್ಯ, ಚಿಕ್ಕಸಿದ್ದಯ್ಯ, ನಿಂಗಪ್ಪ, ರೇವಣ್ಣ, ಸಿದ್ದರಾಜು, ಶೈಲಜ, ರಾಮಚಂದ್ರಯ್ಯ, ನಂಜೇಗೌಡ, ಕೆಂಪರಾಜು, ಲೋಕೇಶ್, ನರಸಲಿಂಗಯ್ಯ, ಜೈಶಂಕರ್ ಇದ್ದರು.





# ಹಾಸ್ಟೆಲ್ ಗಳಿಗೆ ಶಾಸಕ ಇಕ್ಬಾಲ್ ಹುಸೇನ್ ದಿಢೀರ್ ಭೇಟಿ, ಪರಿಶೀಲನೆ

## ಅಡುಗೆ ಮನೆ, ಆಹಾರ ಪದಾರ್ಥಗಳ ಪರಿಶೀಲನೆ

**ರಾಮನಗರ :** ನಗರದ ಹೊರವಲಯದಲ್ಲಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿರುವ ದೇವರಾಜು ಅರಸು ಬಾಲಕ ಮತ್ತು ಬಾಲಕಿಯರ ಹಾಸ್ಟೆಲ್ ಗಳಿಗೆ ಗುರುವಾರ ಮದ್ಯಾಹ್ನ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ದಿಡೀರ್ ಬೇಟಿ ನೀಡಿ ಪರಿಶೀಲನೆ ನಡೆಸಿದರು.

ಬಾಲಕಿಯರ ಹಾಸ್ಟೆಲ್ ನ ಗೋದಾಮುಗೆ ತೆರಳಿ ಆಹಾರ ಪದಾರ್ಥಗಳ ಗುಣಮಟ್ಟ ಮತ್ತು ಅಡಿಗೆ ಮನೆ ಸ್ವಚ್ಚತೆ ಪರಿಶೀಲನೆ ನಡೆಸಿದರಲ್ಲದೆ, ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಊಟ ಮತ್ತು ಹಾಸ್ಟೆಲ್ ನ ಸೌಲಭ್ಯಗಳ ಬಗ್ಗೆ ಚರ್ಚೆ ನಡೆಸಿದರು. ಈ ವೇಳೆ ವಿದ್ಯಾರ್ಥಿಗಳು ಹಾಸಿಗೆಯ ವ್ಯವಸ್ಥೆ ಆಗಬೇಕು, ಕಂಪ್ಯೂಟರ್ ಗಳು, ನ್ಯಾಪ್ಕಿನ್ ಬರ್ನಿಂಗ್ ಮಿಷನ್ ಬೇಕು, ಸಾರಿಗೆ ಬಸ್ಸು ಅವಶ್ಯಕತೆ ಇದೆ. ಚಿರತೆ ಕಾಟವಿದೆ ಎಂಬಿತ್ಯಾದಿ ವಿಷಯಗಳ ಬಗ್ಗೆ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ಅವರ ಗಮನ ಸೆಳೆದರು.

**ವಿದ್ಯಾರ್ಥಿಗಳ ಮನವಿಗೆ ಶಾಸಕರ ಸ್ಪಂದನೆ :** ವಿದ್ಯಾರ್ಥಿಗಳು ತೋಡಿಕೊಂಡ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಕೆಎಸ್ ಆರ್ ಟಿಸಿ ಡಿಸಿ, ಅರಣ್ಯ ಇಲಾಖೆ, ಪಿಡಬ್ಲ್ಯುಡಿ ಅಧಿಕಾರಿಗಳಿಗೆ ಫೋನ್ ಕರೆ ಮಾಡಿ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ವಹಿಸುವಂತೆ ಸೂಚಿಸಿದರಲ್ಲದೆ, ಮಕ್ಕಳ ವಿದ್ಯಾಭ್ಯಾಸಕ್ಕೆ ಯಾವುದೇ ತೊಂದರೆ ಆಗಬಾರದು ನಾನು ನನ್ನ ಸ್ವಂತ ಖರ್ಚಿನಲ್ಲಿ ಸೌಲಭ್ಯ ಕೊಡುತ್ತೇನೆ. ಮಕ್ಕಳು ಉತ್ತಮ ಸೌಲಭ್ಯದ ವಾತಾರಣವನ್ನು ಹಾಸ್ಟೆಲ್ ನಲ್ಲಿ ನಿರ್ಮಾಣ ಮಾಡಿ ಎಂದು ಬಿಸಿಎಂ ಜಿಲ್ಲಾ ಅಧಿಕಾರಿ ಬೋರೇಗೌಡ ಮತ್ತು ಹಾಸ್ಟೆಲ್ ವಾರ್ಡನ್ ಗಳಿಗೆ ಸೂಚನೆ ನೀಡಿದರು.

ನಂತರ ಬಾಲಕರ ಹಾಸ್ಟೆಲ್ ನ ಗೋಡಾನ್ ಗೆ ಬೇಟಿ ನೀಡಿದಾಗ ಗೂಡು ಕಟ್ಟಿರುವ ಅಕ್ಕಿ ಕಣ್ಣಾರೆ ಕಂಡು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ವಾರ್ಡನ್ ಮೇಲೆ ಗರಂ ಆದ ಘಟನೆ ಸಹ ನಡೆಯಿತು. ಒಂದು ವಾರದಲ್ಲಿ ಇದನ್ನು ಸರಿಪಡಿಸಿಕೊಳ್ಳಲು ಸಮಯ ಕೊಡುತ್ತೇನೆ, ಸರಿಪಡಿಸಿಕೊಳ್ಳದಿದ್ದರೆ ಅಮಾನತು ಮಾಡುವ ಎಚ್ಚರಿಕೆ ನೀಡಿದರು

**ಚಿತ್ರದುರ್ಗ, ಹಾಸನ, ತರೀಕರೆ ಸೇರಿದಂತೆ ರಾಜ್ಯದ ವಿವಿಧ ಮೂಲಗಳಿಂದ ಇಲ್ಲಿಗೆ ಬಂದು ಎಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ. ಆ ಮಕ್ಕಳಿಗೆಲ್ಲ ವಸತಿ ನಿಲಯದ ಸೌಲಭ್ಯ ಇರಲಿಲ್ಲ. ಹಾಗಾಗಿ ಸರ್ಕಾರಿ ಎಂಜಿನಿಯರಂಗ್ ಕಾಲೇಜಿನ ಆವರಣದಲ್ಲಿದ್ದ ಕಟ್ಟಡವನ್ನು ಡಿ.ದೇವರಾಜ ಅರಸು ವಸತಿ ಬಾಲಕರ ಮತ್ತು ಬಾಲಕಿಯರ ವಸತಿ ಪ್ರಾರಂಭಿಸಿದ್ದೇವೆ. ಮೂಲಸೌಕರ್ಯ ಕಲ್ಪಿಸಲಾಗಿದೆ. ಊಟ ಚೆನ್ನಾಗಿದ್ದು, ಸೋಲಾರ್ , ಶೌಚಾಲಯ ವ್ಯವಸ್ಥೆ ಎಲ್ಲವೂ ಚೆನ್ನಾಗಿದೆ ಎಂದು ವಿದ್ಯಾರ್ಥಿಗಳೇ ಹೇಳಿದ್ದಾರೆ. ಅಗತ್ಯ ಸೌಲಭ್ಯಗಳನ್ನು ಒದಗಿಸುತ್ತೇನೆ.**

**– ಎಚ್.ಎ.ಇಕ್ಬಾಲ್ ಹುಸೇನ್, ಶಾಸಕರು**

# ಭಾವನೆ ಕಟ್ಟಿಕೊಡುವಲ್ಲಿ ಕಥೆ, ಕವನ, ಕವಿತೆ ಸಹಕಾರಿ: ಡಾ.ಎನ್.ಕೆ.ಲೋಲಾಕ್ಷಿ

**ಮಡಿಕೇರಿ:** ಪ್ರತಿಯೊಂದು ಭಾಷೆಯ ಸಾಹಿತ್ಯವು ಎಲ್ಲರ ಮನಸ್ಸನ್ನು ಗೆಲ್ಲುವ ಮಾನವೀಯತೆಯ ಶಕ್ತಿ ಹೊಂದಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾದ ಡಾ.ಎನ್. ಕೆ.ಲೋಲಾಕ್ಷಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಡಿಕೇರಿ ನಗರ ದಸರಾ ಸಮಿತಿ ವತಿಯಿಂದ ನಗರದ ಗಾಂಧಿ ಮೈದಾನದ ಕಲಾಸಂಭ್ರಮ ವೇದಿಕೆಯಲ್ಲಿ ಗುರುವಾರ ನಡೆದ ಬಹುಭಾಷಾ ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಯಾವುದೇ ಭಾಷೆಗೆ ಮಾನವೀಯತೆ ಕಟ್ಟಿಕೊಡುವಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಗಳು ಸಹಕಾರಿಯಾಗಿದೆ. ಸಾಹಿತ್ಯ, ಸಂಗೀತ, ಸಿನಿಮಾ ಕ್ಷೇತ್ರದಲ್ಲಿ ಬಹು ಸಂಸ್ಕೃತಿ ಒಳಗೊಂಡಿದ್ದು, ಆ ನಿಟ್ಟಿನಲ್ಲಿ ನಾಡಿನ ಸಂಸ್ಕೃತಿ ಉಳಿಸುವಲ್ಲಿ ಪ್ರತಿಯೊಬ್ಬರೂ ಶ್ರಮಿಸಬೇಕಿದೆ ಎಂದರು.

ಮಾತೃಭಾಷೆಯಲ್ಲಿ ಸಾಹಿತ್ಯ ರಚನೆಯಿಂದ ತಮ್ಮ ತಮ್ಮ ಮೂಲ ಕಸುಬು, ಸಂಸ್ಕೃತಿ ತಿಳಿಸಲು ಸಹಕಾರಿಯಾಗಲಿದೆ. ಆ ನಿಟ್ಟಿನಲ್ಲಿ ಬಹುಭಾಷಾ ಕವಿಗೋಷ್ಠಿ ಆಯೋಜಿಸಿರುವುದು ಎಲ್ಲರಿಗೂ ಅವಕಾಶ ಕೊಟ್ಟಂತಾಗುತ್ತದೆ ಎಂದರು.

ಭಾರತವು ಭಿನ್ನ ಭಿನ್ನ ಭಾಷೆ ಸಂಸ್ಕೃತಿ, ಕಲೆಗಳನ್ನು ಒಳಗೊಂಡಿದ್ದು, ಎಲ್ಲರೂ ಒಟ್ಟಾಗಿ ಏಕತೆ, ಭಾವೈಕ್ಯತೆ, ಭ್ರಾತೃತ್ವ ಸಾರಬೇಕು ಎಂದು ಲೋಲಾಕ್ಷಿ ಅವರು ನುಡಿದರು.

ಭಾಷೆಯು ಭಾವನೆ ಕಟ್ಟಿಕೊಡುತ್ತವೆ. ಆ ನಿಟ್ಟಿನಲ್ಲಿ ತಮ್ಮ ಮೂಲ ಸಂಸ್ಕೃತಿಯನ್ನು ಬರವಣಿಗೆಯ ಮೂಲಕ ಕಟ್ಟಿಕೊಡಬೇಕು ಎಂದರು.

ಕೊಡಗಿನ ಭಾರತೀಸುತ ಅವರ ಹುಲಿಹಾಲಿನ ಮೇವು ಸಿನಿಮಾ ಆಯಿತು. ಹೀಗೆ ಇಲ್ಲಿನ ಸಂಸ್ಕೃತಿಯನ್ನು ತಿಳಿಸಲು ಸಾಹಿತ್ಯ, ಸಂಗೀತ, ಸಿನಿಮಾದ ಮೂಲಕ ಮಾಹಿತಿ ನೀಡಬಹುದಾಗಿದೆ ಎಂದರು.

ಪರಸಂಗ ಚಲನಚಿತ್ರದಲ್ಲಿ 'ಮರಳಿ ಬಾರದೂರಿಗೆ ನಿನ್ನ ಪಯಣ' ಹಾಡನ್ನು ಬರೆಯುವ ಮೂಲಕ ಸಂಕಷ್ಟವನ್ನು ಹೇಳಿಕೊಳ್ಳಲಾಗಿದೆ ಎಂದು ಇದೇ ಸಂದರ್ಭದಲ್ಲಿ ಲೋಲಾಕ್ಷಿ ಅವರು ತಿಳಿಸಿದರು.

ಕೊಡಗು ವಿದ್ಯಾ ಇಲಾಖೆ ನೌಕರರ ಪತ್ತಿನ ಸೌಹಾರ್ದ ಸಹಕಾರ ಸಂಘದ ಅಧ್ಯಕ್ಷರಾದ ಎಚ್.ಎಸ್.ಚೇತನ್ ಅವರು ಮಾತನಾಡಿ ಕೊಡಗು ಬಹುಭಾಷೆ, ಬಹುಸಂಸ್ಕೃತಿ ಹೊಂದಿರುವ ವಿಶಿಷ್ಟ ಹಾಗೂ ವಿಶೇಷ ಜಿಲ್ಲೆಯಾಗಿದೆ ಎಂದರು.

ಸಾಹಿತ್ಯದ ವಿವಿಧ ಪ್ರಕಾರಗಳು ಹಾಗೂ ಕಾಲ ಘಟ್ಟಗಳನ್ನು ಗಮನಿಸಿದಾಗ ಇಂದಿನ ಡಿಜಿಟಲ್ ಹಾಗೂ ಎಐ ಕಾಲಘಟ್ಟದಲ್ಲಿ ಯುವ ಪೀಳಿಗೆ ಮತ್ತು ಹಿರಿಯರು ಒಂದೆಡೆ ಸೇರಿ ಸಾಹಿತ್ಯ ಕೃಷಿಯಲ್ಲಿ ತೊಡಗಿರುವುದು ಶ್ಲಾಘನೀಯ ಎಂದರು.

ಮಡಿಕೇರಿ ನಗರ ದಸರಾ ಸಮಿತಿ ಮಾಜಿ ಕಾರ್ಯಾಧ್ಯಕ್ಷರಾದ ಕೆ.ಎಂ.ಬಿ.ಗಣೇಶ್ ಅವರು ಮಾತನಾಡಿ ಮಡಿಕೇರಿ ದಸರಾಗೆ ಐತಿಹಾಸಿಕ ಹಿನ್ನೆಲೆ ಇದ್ದು, ಮಡಿಕೇರಿ ದಸರಾವನ್ನು ಬಜೆಟ್‌ನಲ್ಲಿ ಸೇರ್ಪಡೆ ಮಾಡಿ ಅನುದಾನ ಬಿಡುಗಡೆ ಮಾಡುವಂತಾಗಬೇಕು ಎಂದು ಕೋರಿದರು.

# ಸರಳ ಬದುಕೇ ಸಾವಿಗೆ ಅತಿದೊಡ್ಡ ಸೋಲು

ಬದುಕಿನ ಆಯುಷ್ಯ ವರ್ಷಗಳ ಸಂಖ್ಯೆಯಲ್ಲಿಲ್ಲ, ಪ್ರತಿದಿನದ ಸಣ್ಣ ಆಯ್ಕೆಗಳ ಗುಣಮಟ್ಟದಲ್ಲಿದೆ. ಮನುಷ್ಯ ನಿರಂತರ ಒತ್ತಡದಲ್ಲಿ ಬದುಕಿದಾಗ ದೇಹದ ಜೀವಕೋಶಗಳು ಬೇಗನೆ ಬಳಲಿ, ವಯಸ್ಸಾಗುವ ಪ್ರಕ್ರಿಯೆ ವೇಗವಾಗುತ್ತದೆ ಎಂದು ವಿಜ್ಞಾನ ಹೇಳುತ್ತದೆ. ಇದಕ್ಕೆ ವಿರುದ್ಧವಾಗಿ ಮಿತವಾದ ಆಸೆ, ಅಚ್ಚುಕಟ್ಟಾದ ದಿನಚರಿ, ಹಿತವಾದ ಆಹಾರ, ಸಾಕಷ್ಟು ನಿದ್ರೆ ಮತ್ತು ನಿತ್ಯದ ನಡಿಗೆ ದೇಹದ ನೈಸರ್ಗಿಕ ರಕ್ಷಣಾ ಶಕ್ತಿಯನ್ನು ಬಲಪಡಿಸಿ ದೀರ್ಘಕಾಲದ ಕಾಯಿಲೆಗಳನ್ನು ದೂರವಿಡುತ್ತದೆ.

ಸಮಾಜದಲ್ಲಿ ಸರಳ ಬದುಕು ನಂಬಿಕೆ ಮತ್ತು ಪ್ರೀತಿಯ ಬೇರನ್ನು ಗಟ್ಟಿಗೊಳಿಸುತ್ತದೆ. ಕೇವಲ ತೋರ್ಪಡಿಕೆಗಾಗಿ ಬದುಕುವುದಕ್ಕಿಂತ ಮೌಲ್ಯಗಳಿಗಾಗಿ ಬದುಕಿದಾಗ ಮನೆಯಲ್ಲಿ ಶಾಂತಿ ಮತ್ತು ಪರಸ್ಪರ ಗೌರವ ನೆಲೆಸುತ್ತದೆ. ಅನಗತ್ಯ ಪೈಪೋಟಿ ಮತ್ತು ಹೋಲಿಕೆಯಿಂದ ದೂರವಿರುವ ಮನಸ್ಸು ಮಾತ್ರ ತಿಳಿಯಾಗಿ ಯೋಚಿಸಿ ಸರಿಯಾದ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುತ್ತದೆ.

ಸರಳತೆ ಎಂದರೆ ಸೌಲಭ್ಯಗಳನ್ನು ಬಿಡುವುದಲ್ಲ, ಬೇಕು ಮತ್ತು ಬೇಡದ ನಡುವಿನ ವ್ಯತ್ಯಾಸವನ್ನು ತಿಳಿಯುವ ಜಾಣ್ಮೆ. ಈ ಯೋಚನೆ ಮನಸ್ಸಿನ ಮೇಲಿನ ಭಾರವನ್ನು ಕಡಿಮೆ ಮಾಡುವುದಲ್ಲದೆ, ಪರಿಸರದ ಮೇಲಿನ ಭಾರವನ್ನೂ ಕಡಿಮೆ ಮಾಡುತ್ತದೆ. ಸಂಪನ್ಮೂಲಗಳನ್ನು ಜಾಗರೂಕತೆಯಿಂದ ಬಳಸಲು ಇದು ದಾರಿ ಮಾಡಿಕೊಡುತ್ತದೆ.



ಆರೋಗ್ಯ, ನೆಮ್ಮದಿ ಮತ್ತು ಉತ್ತಮ ಸಂಬಂಧಗಳು ಒಂದಾಗಿ ಸೇರಿದಾಗಲೇ ಜೀವನ ಸುಂದರ ಉತ್ಸವವಾಗುತ್ತದೆ. ಇಂತಹ ಸಮತೋಲಿತ, ಸರಳ ಬದುಕೇ ದೇಹದ ಬಳಲಿಕೆಯನ್ನು ನಿಧಾನಗೊಳಿಸಿ ಪ್ರತಿ ದಿನವನ್ನೂ ಖುಷಿಯಿಂದ ಬದುಕುವ ಶಕ್ತಿ ನೀಡುತ್ತದೆ. ನಿಜವಾದ ಗೆಲುವು ದೊಡ್ಡ ವೈಭವದಲ್ಲಲ್ಲ, ಸರಳತೆಯ ನೆಮ್ಮದಿಯಲ್ಲಿದೆ.

ಅಂಕಣ-47

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ
87479 69381



ಸಿನಿಮಾ ವರದಿ: ಬಿ.ಜಿ.ರವಿಕುಮಾರ್



## "ಖೇಲಾ" ಚಿತ್ರದ ಟ್ರೇಲರ್ ಅನಾವರಣ

ಈಗಾಗಲೇ 'ಅಮ್ಮ' ಸಾಂಗ್ ಮೂಲಕ ಪ್ರೇಕ್ಷಕರ ಗಮನ ಸೆಳೆದಿರುವ 'ಖೇಲಾ' ಚಿತ್ರದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಟ್ರೇಲರ್ ಅನ್ನು ಆ ಸಿನಿಮಾದ ಕಲಾವಿದರು ಮತ್ತು ತಂತ್ರಜ್ಞರ ತಾಯಂದಿರು ಬಿಡುಗಡೆ ಮಾಡಿದ್ದು ವಿಶೇಷವಾಗಿತ್ತು. ಈ ಚಿತ್ರವನ್ನು ವಿ.ಜೆ. ಭರತ್ ನಿರ್ದೇಶನದ ಜೊತೆಗೆ ನಿರ್ಮಾಣ ಕೂಡ ಮಾಡಿದ್ದಾರೆ.

ಟ್ರೇಲರ್ ಬಿಡುಗಡೆ ನಂತರ ಮಾತನಾಡಿದ ನಿರ್ದೇಶಕ – ನಿರ್ಮಾಪಕ ವಿ.ಜೆ ಭರತ್, 'ವಿಹಾನ್ ಪ್ರಭಂಜನ್ ಈ ಚಿತ್ರದ ಹೀರೋ ಆದರೂ, ರಿಯಲ್ ಹೀರೋ ತಾಯಿ ಪಾತ್ರ ಮಾಡಿರುವ ಸ್ವಾತಿ ಅವರು ಎನ್ನಬಹುದು. ಅವರು ಪಾತ್ರವಾಗಿ ಜೀವಿಸಿದ್ದಾರೆ. ನನ್ನ ತಾಯಿ ಹಾಗೂ ತಂಗಿಯ ಸಹಕಾರದಿಂದ ಈ ಸಿನಿಮಾ ಮಾಡಲು ಸಾಧ್ಯವಾಯಿತು. ಚಿತ್ರದಲ್ಲಿ ಸ್ನೇಹ, ಪ್ರೀತಿ ಮತ್ತು ತಾಯಿಯ ಬಗ್ಗೆ ಹೇಳಲಾಗಿದೆ. ಬಿಗ್‌ಬಾಸ್ ಖ್ಯಾತಿಯ ಸಂಗೀತ ಭಟ್ ವಿಶೇಷ ಪಾತ್ರ ಮಾಡಿದ್ದಾರೆ. ಪ್ರಮೋದ್ ಗೌಡ ಅದ್ಭುತವಾಗಿ ಛಾಯಾಗ್ರಹಣ ಮಾಡಿದ್ದು, ತ್ಯಾಗು ಅವರ ಸಂಗೀತ ಚಿತ್ರದ ಶಕ್ತಿ ಹೆಚ್ಚಿಸಿದೆ. ತಂಡದ ಶ್ರಮದಿಂದ ಈ ಸಿನಿಮಾ ಆಗಿದೆ' ಎಂದು ಹೇಳಿದರು.

ಈ ಚಿತ್ರದ ನಾಯಕ ವಿಹಾನ್ ಮಾತನಾಡಿ ದೊಡ್ಡ ಮಟ್ಟದಲ್ಲಿಯೇ ನಮ್ಮ ಸಿನಿಮಾ ಬಂದಿದೆ. ನಾನಿಲ್ಲಿ ಭರತ್ ಎಂಬ ಪಾತ್ರ ಮಾಡಿದ್ದೇನೆ. ಎಲ್ಲರ ಮನೆಯಲ್ಲಿ ನಡೆಯುವ ಸಾಧಾರಣವಾದ ಕಥೆಯನ್ನು ಇಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ. ಇದು ಎಲ್ಲರಿಗೂ ಕನೆಕ್ಟ್ ಆಗುತ್ತದೆ' ಎಂದರು.

ಚಿತ್ರದಲ್ಲಿ ನಾಯಕಿಯಾಗಿ ಶಿವಮೊಗ್ಗ ಮೂಲದ ಆಶಿಕಾ ರಾವ್ ಅಭಿನಯ ಮಾಡಿದ್ದು, 'ಸಿನಿಮಾ ತುಂಬಾ ಚೆನ್ನಾಗಿ ಬಂದಿದೆ. ಟ್ರೇಲರ್‌ನಂತೆ ಸಿನಿಮಾ ಕೂಡ ನಿಮಗೆಲ್ಲಾ ಇಷ್ಟ ಆಗುತ್ತದೆ. ಇದು ನನ್ನ ಮೊದಲ ಸಿನಿಮಾ. ನನ್ನ ಪಾತ್ರಕ್ಕೆ ನಟನೆ ಮಾಡಲು ತುಂಬಾ ಅವಕಾಶವಿತ್ತು' ಎಂದು ಹೇಳಿಕೊಂಡರು.

ತಾಯಿ ಪಾತ್ರ ಮಾಡಿರುವ ಹಿರಿಯ ನಟಿ ಸ್ವಾತಿ, 'ತಾಯಿ ಎಂಬುದು ಶ್ರೇಷ್ಠವಾದ ಪದ. ಮಕ್ಕಳಿಗಾಗಿ ಒಬ್ಬ ತಾಯಿ ಏನೆಲ್ಲಾ ಕಷ್ಟ ಪಡುತ್ತಾಳೆ ಎಂಬುದು ಈ ಚಿತ್ರದಲ್ಲಿದೆ. ಇಂದಿನ ಜನರೇಷನ್ ನೋಡಲೇಬೇಕಾದ ಸಿನಿಮಾ ಇದು' ಎಂದು ಹೇಳಿದರು.



## ನಾಡಹಬ್ಬ ದಸರಾ ಗೆ "MR ಜಾಕ್" ಹಾಡು

ಗುರುನಂದನ್ ನಾಯಕರಾಗಿ ತಪಸ್ವಿನಿ ಪೂಣಚ್ಚ ನಾಯಕಿಯಾಗಿ ನಟಿಸಿರುವ ಚಿತ್ರ "MR ಜಾಕ್".ಸುಮಂತ್ ಗೌಡ ನಿರ್ದೇಶನದ ಹಾಗೂ ಗುರುನಂದನ್ ತಮ್ಮ ಸ್ನೇಹಿತರೊಡಗೂಡಿ ನಿರ್ಮಾಣ ಮಾಡಿರುವ "ಒಖ ಜಾಕ್" ಚಿತ್ರದ ಮೊದಲ ಹಾಡು ಗಣಪತಿ ಹಬ್ಬದ ಸಂದರ್ಭದಲ್ಲಿ ಬಿಡುಗಡೆಯಾಗಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ. ಈಗ ನಾಡಹಬ್ಬ ದಸರಾ ಸಂದರ್ಭದಲ್ಲಿ ಮತ್ತೊಂದು ಹಾಡು ಆನಂದ್ ಆಡಿಯೋ ಯೂಟ್ಯೂಬ್ ಚಾನಲ್ ನಲ್ಲಿ ಅನಾವರಣವಾಗಲಿದೆ. ಹೆಸರಾಂತ ಗೀತರಚನೆಕಾರ ಪ್ರಮೋದ್ ಮರವಂತೆ ಬರೆದಿರುವ ಈ ಹಾಡನ್ನು ಖ್ಯಾತ ಗಾಯಕ ಜಸ್ಕರಣ್ ಸಿಂಗ್ ಹಾಡಿದ್ದಾರೆ. ಕಿರಣ್ ರವೀಂದ್ರನಾಥ್ ಸಂಗೀತ ಸಂಯೋಜಿಸಿದ್ದಾರೆ. ಚಿತ್ರದ ಟೀಸರ್ ಗೆ ಕೂಡ ಪ್ರಶಂಸೆ ವ್ಯಕ್ತವಾಗಿದೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರಲು ಚಿತ್ರತಂಡ ಸಿದ್ದತೆ ನಡೆಸುತ್ತಿದೆ.

ತಮ್ಮ ಅಭಿನಯದ ಮೂಲಕ ಜನಪ್ರಿಯರಾಗಿರುವ ಗುರುನಂದನ್ ಹಾಗೂ ತಪಸ್ವಿನಿ ಪೂಣಚ್ಚ ಅವರ ಜೋಡಿಯಲ್ಲಿ ಮೂಡಿಬಂದಿರುವ ಈ ಚಿತ್ರದ ಮೇಲೆ ಅಪಾರ ನಿರೀಕ್ಷೆ ಇದೆ. ಹಾಸ್ಯವೇ ಪ್ರಧಾನವಾಗಿರುವ ಈ ಚಿತ್ರದ ತಾರಾಬಳಗದಲ್ಲಿ ಮಿತ್ರ, ಗೋಪಾಲಕೃಷ್ಣ ದೇಶಪಾಂಡೆ, ಅರವಿಂದ್, ಧರ್ಮಣ್ಣ, ಸುಶ್ಮಿತ ಜಗ್ಗಪ್ಪ ಮುಂತಾದವರಿದ್ದಾರೆ. ಶಿವಸೇನ ಛಾಯಾಗ್ರಾಹಕರಾಗಿ ಹಾಗೂ ವಿಜಯ್ ರಾಜ್ ಸಂಕಲನಕಾರರಾಗಿ ಕಾರ್ಯ ನಿರ್ವಹಿಸಿದ್ದಾರೆ.



## "ಹರಪನಹಳ್ಳಿ ಭೀಮವ್ವ" ಚಿತ್ರಕ್ಕೆ ಚಾಲನೆ

ಹರಿದಾಸರ ಚಿತ್ರಗಳ ನಿರ್ದೇಶಕ ಮಧುಸೂದನ್ ಹವಾಲ್ದಾರ್, ನಾಡಿನ ಮತ್ತೊಬ್ಬ ಹರಿದಾಸಿ ಹರಪನಹಳ್ಳಿ ಭೀಮವ್ವನವರ ಜೀವನ ಚರಿತ್ರೆ ಆಧಾರಿತ "ಹರಪನಹಳ್ಳಿ ಭೀಮವ್ವ" ಎಂಬ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಹಾಗೂ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಚಿತ್ರದ ಮೊದಲ ಸನ್ನಿವೇಶಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀಶಾನಂದ ಅವರು ಆರಂಭ ಫಲಕ ತೋರಿದರು. ರವೀಂದ್ರ ಜೋಶಿ ಕ್ಯಾಮೆರಾ ಚಾಲನೆ ಮಾಡಿದರು.

ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನದ ಶ್ರೇಷ್ಠ ಹರಿದಾಸಿಯರಲ್ಲಿ ಹರಪನಹಳ್ಳಿ ಭೀಮವ್ವ ಕೂಡ ಒಬ್ಬರು. ಕೃಷ್ಣನ ಪರಮಭಕ್ತೆಯಾದ ಇವರು ಭೀಮೇಶ ಕೃಷ್ಣ ಅಂಕಿತದಿಂದ 140 ಕ್ಕೂ ಹೆಚ್ಚು ದೇವರನಾಮಗಳನ್ನು, ಉಗಾಭೋಗ ಹಾಗೂ ಸುಳಾದಿಗಳನ್ನು ರಚಿಸಿದ್ದಾರೆ. ಯು.ಎಸ್.ಎ ನಿವಾಸಿ ವೈಷ್ಣವಿಮೂರ್ತಿ ಅವರು ಭೀಮವ್ವನ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಭೀಮವ್ವನವರ ತಂದೆಯ ಪಾತ್ರದಲ್ಲಿ ಗಾಯಕ ರಾಯಚೂರು ಶೇಷಗಿರಿದಾಸ್, ಗುರುವಿನ ಪಾತ್ರದಲ್ಲಿ ಗಾಯಕ ಅನಂತ ಕುಲಕರ್ಣಿ, ಶಿಷ್ಯನ ಪಾತ್ರದಲ್ಲಿ ಗಾಯಕ ಅನಂತ ಮಿಸ್ತ್ರಿ ಅಭಿನಯಿಸುತ್ತಿದ್ದಾರೆ. ಪತಿಯ ಪಾತ್ರದಲ್ಲಿ ತ್ರಿವಿಕ್ರಮ ಜೋಶಿ ಅವರು ನಟಿಸುತ್ತಿದ್ದಾರೆ. ಎಂಟು ಹಾಡುಗಳಿರುತ್ತದೆ. ರಾಯಚೂರು ಶೇಷಗಿರಿದಾಸ್, ಅನಂತ ಕುಲಕರ್ಣಿ, ಅನಂತ ಮಿಸ್ತ್ರಿ ಹಾಗೂ ನಾನು ಸಂಗೀತ ಸಂಯೋಜನೆ ಮಾಡುತ್ತಿದ್ದೇವೆ. ಎಂಟು ಹಾಡುಗಳನ್ನು ಭೀಮವ್ವನ ಪಾತ್ರದಲ್ಲಿ ನಟಿಸುತ್ತಿರುವ, ಮೂಲತಃ ಗಾಯಕಿಯೂ ಆಗಿರುವ ವೈಷ್ಣವಿಮೂರ್ತಿ ಅವರೆ ಹಾಡಲಿದ್ದಾರೆ. ಕನ್ನಡ ಹಾಗೂ ಹಿಂದಿಯಲ್ಲಿ ಈ ಚಿತ್ರ ಮೂಡಿಬರಲಿದೆ ಎಂದು ನಿರ್ದೇಶಕ ಮಧುಸೂದನ್ ಹವಾಲ್ದಾರ್ ತಿಳಿಸಿದರು.

ಮಂತ್ರಾಲಯದ ರಾಯರ ಸನ್ನಿಧಿಯಲ್ಲಿ ಭೇಟಿಯಾದ ನನ್ನನ್ನು ನಟನೆಗೆ ಕರೆತಂದವರು ಮಧುಸೂದನ್ ಹವಾಲ್ದಾರ್. ಅವರ ಹರಿದಾಸರ ಚಿತ್ರಗಳಲ್ಲಿ ನಾನು ವಿಜಯದಾಸರ ಪಾತ್ರ ನಿರ್ವಹಿಸಿದ್ದೇನೆ. ಈ ಚಿತ್ರದಲ್ಲಿ ಭೀಮವ್ವನ ಪತಿಯ ಪಾತ್ರ ಮಾಡುತ್ತಿದ್ದೇನೆ ಎಂದು ತ್ರಿವಿಕ್ರಮ ಜೋಶಿ ಹೇಳಿದರು.

ನಾನು ಯುಎಸ್‌ಎ ನಿವಾಸಿ. ಹರಿದಾಸರ ಭಕ್ತೆ. ನಾನು ಹರಪನಹಳ್ಳಿ ಭೀಮವ್ವನವರ ಪಾತ್ರ ಮಾಡುತ್ತಿರುವುದು ಬಹಳ ಸಂತೋಷವಾಗಿದೆ ಎಂದರು ನಟಿ ವೈಷ್ಣವಿಮೂರ್ತಿ.

ಗಾಯಕನಾಗಿದ್ದ ನನ್ನನ್ನು ಚಲನಚಿತ್ರ ಸಂಗೀತ ನಿರ್ದೇಶಕನಾಗಿ ಮಾಡಿದ್ದು ಮಧುಸೂದನ್ ಹವಾಲ್ದಾರ್. ಈಗ ಅವರ ಚಿತ್ರದ ಮೂಲಕ ನಟನಾಗಿಯೂ ಪರಿಚಯವಾಗುತ್ತಿದ್ದೇನೆ ಎಂದು ರಾಯಚೂರು ಶೇಷಗಿರಿ ದಾಸ್ ಹೇಳಿದರು.

ವಾಸುಮೂರ್ತಿ, ಪವನ್ ಕುಮಾರ್, ಸಿ.ಆರ್ ಮುರಳಿ, ವಾಸುದೇವ ಅಗ್ನಿಹೋತ್ರಿ ಹಾಗೂ ಹರಪನಹಳ್ಳಿ ಭೀಮವ್ವನ ವಂಶಸ್ಥರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ನವರಸನ್ ನಿರ್ದೇಶನದಲ್ಲಿ ಹೊಸ ಚಿತ್ರ...

ನವರಸನ್ ನಿರ್ದೇಶನದ ನೂತನ ಚಿತ್ರ ಶೀಘ್ರದಲ್ಲಿ ಆರಂಭಗೊಳ್ಳಲಿದೆ. ನಾಯಕನಾಗಿ ಆದಿ ಸಾಯಿಕುಮಾರ್ ಅಭಿನಯಿಸುತ್ತಿರುವ ಈ ಬಿಗ್ ಬಜೆಟ್ ಚಿತ್ರಕ್ಕೆ ಪ್ರಶಾಂತ್ ಜಿ. ರುದ್ರಪ್ಪ ಬಂಡವಾಳ ಹೂಡುತ್ತಿದ್ದು, ನವರಸನ್ ಕಥೆ, ಚಿತ್ರಕಥೆ ಬರೆದು ನಿರ್ದೇಶನದ ಜವಾಬ್ದಾರಿ ಹೊತ್ತಿದ್ದಾರೆ. ಖ್ಯಾತ ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್ ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ.

ಸದ್ಯಕ್ಕೆ ?ಪ್ರೊಡಕ್ಷನ್ ನಂ. 3? ಎಂಬ ತಾತ್ಕಾಲಿಕ ಹೆಸರಿನಲ್ಲಿ ಸಿದ್ಧವಾಗುತ್ತಿರುವ ಈ ಚಿತ್ರವು ದೈವಿಕ ರಹಸ್ಯ ಮತ್ತು ಸಸ್ಪೆನ್ಸ್‌ಭರಿತ ಕಥಾಹಂದರವನ್ನು ಒಳಗೊಂಡಿದೆ. ಆಧ್ಯಾತ್ಮಿಕ ನಂಬಿಕೆಗಳು, ಪುರಾತನ ಆಚರಣೆಗಳು, ದೈವಿಕ ಶಕ್ತಿಗಳು ಹಾಗೂ ನಿಗೂಢ ಸಂಗತಿಗಳ ಸುತ್ತ ಹೆಣೆದಿರುವ ಈ ಚಿತ್ರವು ಪ್ರೇಕ್ಷಕರಿಗೆ ವಿಭಿನ್ನ ಸಿನಿಮೀಯ ಅನುಭವ ನೀಡುವ ನಿರೀಕ್ಷೆ ಮೂಡಿಸಿದೆ. ಅದ್ದೂರಿ ನಿರ್ಮಾಣ, ಗಾಢ ವಾತಾವರಣ ಸೃಷ್ಟಿಸುವ ದೃಶ್ಯಗಳು, ಭಾವನಾತ್ಮಕ ಸನ್ನಿವೇಶಗಳು ಮತ್ತು ಕುತೂಹಲ ಕೆರಳಿಸುವ ನಿರೂಪಣೆ ಚಿತ್ರದ ಪ್ರಮುಖ ಆಕರ್ಷಣೆಗಳಾಗಲಿವೆ.

ಚಿತ್ರದ ಅನೌನ್ಸ್‌ಮೆಂಟ್ ಪೋಸ್ಟರ್ ಈಗಾಗಲೇ ತನ್ನ ವಿಶಿಷ್ಟ ವಿನ್ಯಾಸದಿಂದ ಗಮನ ಸೆಳೆಯುತ್ತಿದೆ. ಕತ್ತಲಾವರಿಸಿದ ದಟ್ಟ ಅರಣ್ಯದ ಹಿನ್ನೆಲೆಯಲ್ಲಿರುವ ಪುರಾತನ ಆರಾಧನಾ ಸ್ಥಳದಂತೆ ಕಾಣುವ ವಿನ್ಯಾಸವು ನಿಗೂಢತೆಯ ಭಾವವನ್ನು ಮೂಡಿಸುತ್ತದೆ. ಪೋಸ್ಟರ್‌ನ ಮಧ್ಯಭಾಗದಲ್ಲಿ ತ್ರಿಶೂಲವನ್ನು ಸುತ್ತಿಕೊಂಡು ಹೆಡೆಯೆತ್ತಿ ನಿಂತಿರುವ ಬೃಹತ್ ನಾಗರಹಾವು ಪ್ರಮುಖ ಆಕರ್ಷಣೆಯಾಗಿದೆ. ಇದರ ಸುತ್ತಲೂ ಕತ್ತಿಗಳು, ಕೊಡಲಿಗಳು, ಭರ್ಜಿಗಳು, ಅರ್ಧಚಂದ್ರಾಕೃತಿಯ ಆಯುಧ ಹಾಗೂ ಗದೆ ಸೇರಿದಂತೆ ಹಲವು ಪುರಾತನ ಆಯುಧಗಳನ್ನು ಜೋಡಿಸಲಾಗಿದೆ.

ಮರಗಳ ಸುರುಳಿಯಾಕಾರದ ಕೊಂಬೆಗಳು, ನೇತಾಡುವ ಗಂಟೆಗಳು, ಪ್ರಜ್ವಲಿಸುವ ಎಣ್ಣೆಯ ದೀಪಗಳು ಹಾಗೂ ಕೆಳಭಾಗದಲ್ಲಿರುವ ವರ್ಣರಂಜಿತ ಹೂವುಗಳ ನಡುವೆ ಉರಿಯುತ್ತಿರುವ ಜ್ವಾಲೆ ಪೋಸ್ಟರ್‌ಗೆ ಮತ್ತಷ್ಟು ತೀವ್ರತೆ ನೀಡಿವೆ. ಗಾಢ ನೀಲಿ ಮತ್ತು ಅಗ್ನಿಯ ಕೆಂಪು ಬಣ್ಣಗಳ ಸಂಯೋಜನೆಯು ಚಿತ್ರದ ದೈವಿಕ, ಪೌರಾಣಿಕ ಹಾಗೂ ನಿಗೂಢ ಲೋಕದ ಬಗ್ಗೆ ಕುತೂಹಲ ಹೆಚ್ಚಿಸಿದೆ. ಚಿತ್ರದ ಮುಂದಿನ ಹಂತದ ಮಾಹಿತಿಯನ್ನು ಇದೇ ಅಕ್ಟೋಬರ್ 20ರಂದು ಬಹಿರಂಗಪಡಿಸುವುದಾಗಿ ಚಿತ್ರತಂಡ ಘೋಷಿಸಿದೆ.



ಆದಿ ಸಾಯಿಕುಮಾರ್ ಅವರ ವೃತ್ತಿಜೀವನದಲ್ಲಿ ಈ ಚಿತ್ರ ಮತ್ತೊಂದು ವಿಭಿನ್ನ ಪ್ರಯತ್ನವಾಗಲಿದೆ. ವಿಭಿನ್ನ ಕಥಾವಸ್ತು, ಅದ್ದೂರಿ ನಿರ್ಮಾಣ ಹಾಗೂ ವಿಶಿಷ್ಟ ದೃಶ್ಯ ವೈಭವದೊಂದಿಗೆ ರೂಪುಗೊಳ್ಳುತ್ತಿರುವ ಈ ಸಿನಿಮಾ ಅವರ ಅಭಿಮಾನಿಗಳಲ್ಲಿ ನಿರೀಕ್ಷೆ ಮೂಡಿಸಿದೆ. ದೈವಿಕ ಅಂಶಗಳು ಮತ್ತು ನಿಗೂಢ ಘಟನೆಗಳ ಹಿನ್ನೆಲೆಯಲ್ಲಿನ ಕಥೆಯು ಪ್ರೇಕ್ಷಕರನ್ನು ಹೊಸ ಲೋಕಕ್ಕೆ ಕರೆದೊಯ್ಯುವ ಆಶಯ ಹೊಂದಿದೆ.

ಕನ್ನಡದ ಕಾಂತಾರ ಸೇರಿ ತೆಲುಗಿನ ವಿರೂಪಾಕ್ಷ ಹಾಗೂ ಮಂಗಳವಾರಂ ಚಿತ್ರಗಳ ಮೂಲಕ ತಮ್ಮ ಸಂಗೀತ ಮತ್ತು ಹಿನ್ನೆಲೆ ಸಂಗೀತದ ಛಾಪು ಮೂಡಿಸಿರುವ ಬಿ. ಅಜನೀಶ್ ಲೋಕನಾಥ್ ಈ ಚಿತ್ರಕ್ಕೆ ಸಂಗೀತ ನೀಡುತ್ತಿರುವುದು ವಿಶೇಷ. ಚಿತ್ರದ ನಿಗೂಢ ವಾತಾವರಣಕ್ಕೆ ಪೂರಕವಾದ ಹಿನ್ನೆಲೆ ಸಂಗೀತ ಹಾಗೂ ಶಕ್ತಿಯುತ ಧ್ವನಿ ವಿನ್ಯಾಸದ ಬಗ್ಗೆ ಈಗಿನಿಂದಲೇ ಕುತೂಹಲ ಮೂಡಿದೆ.

ಚಿತ್ರದ ಶೀರ್ಷಿಕೆ, ಕಥೆಯ ಪ್ರಮುಖ ವಿವರಗಳು ಹಾಗೂ ಇತರ ಪಾತ್ರವರ್ಗದ ಮಾಹಿತಿಯನ್ನು ಚಿತ್ರತಂಡ ಸದ್ಯಕ್ಕೆ ಗೌಪ್ಯವಾಗಿಟ್ಟಿದೆ. ಹಂತ ಹಂತವಾಗಿ ಮಾಹಿತಿಯನ್ನು ಬಹಿರಂಗಪಡಿಸುವ ಮೂಲಕ ಚಿತ್ರದ ಬಗ್ಗೆ ನಿರೀಕ್ಷೆ ಹೆಚ್ಚಿಸಲು ನಿರ್ಮಾಪಕರು ಯೋಜಿಸಿದ್ದಾರೆ. ಚಿತ್ರದ ಫಸ್ಟ್ ಲುಕ್, ಉಳಿದ ತಾರಾಗಣ, ತಾಂತ್ರಿಕ ವರ್ಗ ಹಾಗೂ ಪ್ರಚಾರದ ಕುರಿತಾದ ಹೆಚ್ಚಿನ ವಿವರಗಳು ಮುಂದಿನ ದಿನಗಳಲ್ಲಿ ಹೊರಬೀಳಲಿವೆ.

## "ನಾಕು ತಂತಿ" ಚಿತ್ರದ ಟೀಸರ್ ಅನಾವರಣ

ನಾಕು ತಂತಿ " ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆಯಾಗಿದೆ. ಜಯರಾಮ ದೇವಸಮುದ್ರ ನಿರ್ಮಿಸಿರುವ ಹಾಗೂ ಯೋಗೇಶ್ ಬಸವನಗೌಡ ನಂಬೂರು ಸಾಯಿ ಅವರ ಸಹ ನಿರ್ಮಾಣವಿರುವ ಹಾಗೂ ಪ್ರತಿಭಾವಂತ ನಟಿಯರಾದ ಖುಷಿ ರವಿ, ರೋಷಿಣಿ ಪ್ರಕಾಶ್, ಸಂಗೀತಾ ಭಟ್ ಹಾಗೂ ಸಿಂಧು ಶ್ರೀನಿವಾಸ ಮೂರ್ತಿ ಒಟ್ಟಾಗಿ ಕಾಣಿಸಿಕೊಳ್ಳುತ್ತಿರುವ ಹಾಗೂ ಗೌತಮ್ ಅನ್ವಿತ್, ಮಹೇಶ್ ರಾಜ್, ಶಶಿಕುಮಾರ್ ವಿ ಮತ್ತು ಪ್ರೀತಮ್ ಶಿವಕುಮಾರ್ ಅವರ ನಿರ್ದೇಶನದಲ್ಲಿ ಮೂಡಿಬರುತ್ತಿರುವ "ನಾಕುತಂತಿ" ಚಿತ್ರದ ಟೀಸರ್ ಬಿಡುಗಡೆ ಸಮಾರಂಭ ಇತ್ತೀಚೆಗೆ ನೆರವೇರಿತು.

"ನಾಕು ತಂತಿ" ಚಿತ್ರದ ಚಿತ್ರೀಕರಣ ಮುಕ್ತಾಯವಾಗಿ ಪೋಸ್ಟ್ ಪ್ರೊಡಕ್ಷನ್ ವರ್ಕ್ ನಡೆಯುತ್ತಿದೆ. ಅದೇ ರೀತಿ ಈ ಚಿತ್ರದ ಕಥೆ ಕೂಡ ನನ್ನ ಗಮನ ಸೆಳೆಯಿತು. ಹಾಗಾಗಿ ನಾನು ಈ ಚಿತ್ರದ ನಿರ್ಮಾಣಕ್ಕೆ ಮುಂದಾದೆ. ಜನರಿಗೂ "ನಾಕು ತಂತಿ" ಹಿಡಿಸಲಿದೆ ಎಂದು ನಿರ್ಮಾಪಕ ಜಯರಾಮ್ ದೇವಸಮುದ್ರ ತಿಳಿಸಿದರು.

ನಾನು ಮೂಲತಃ ರೈತ. ಸಿನಿಮಾ ಪ್ರೇಮಿ. ಸಿನಿಮಾ ನಿರ್ಮಾಣ ಮಾಡಬೇಕೆಂಬುದು ನನ್ನ ಆಸೆ. ಜಯರಾಮ್ ಅವರು ಈ ಚಿತ್ರದ ನಿರ್ಮಾಣಕ್ಕೆ ಬಂದಿರುವುದು ನಮಗೆ ದೊಡ್ಡ ಬಲ ಬಂದಂತಾಗಿದೆ ಎಂದು ಸಹ ನಿರ್ಮಾಪಕ ಯೋಗೇಶ್ ಬಸವನಗೌಡ ಹೇಳಿದರು. ಮತ್ತೊಬ್ಬ ಸಹ ನಿರ್ಮಾಪಕ ನಂಬೂರು ಸಾಯಿ ಎಲ್ಲರಿಗೂ ಧನ್ಯವಾದ ತಿಳಿಸಿದರು.

ನಾವು ನಾಲ್ಕು ಜನರು ಕಿರುಚಿತ್ರಗಳನ್ನು ನಿರ್ದೇಶಿಸಿ ಅನುಭವವಿರುವವರು. ಹಿರಿತೆರೆಯ ಸಿನಿಮಾ ಮಾಡುವುದು ನಮ್ಮ ಕನಸು. ಮೊದಲ ಪ್ರಯತ್ನದಲ್ಲೇ ಒಬ್ಬೊಬ್ಬರೆ ಎರಡು ಗಂಟೆಯ ಒಂದು ಸಿನಿಮಾ ಮಾಡುವುದು ಬೇಡ ಎಂದು ತೀರ್ಮಾನಿಸಿ, ನಾಲ್ಕು ಜನರು ಚರ್ಚಿಸಿ, ನಾಲ್ಕು ಕಥೆಗಳ "ನಾಕು ತಂತಿ" ಚಿತ್ರವನ್ನು ನಿರ್ದೇಶಿಸಿದ್ದೇವೆ. ನಾಲ್ಕು ಬೇರೆ ಬೇರೆ ಕಥೆಗಳನ್ನು ನಾಲ್ಕು ಜನರು ಪ್ರತ್ಯೇಕವಾಗಿ ನಿರ್ದೇಶನ ಮಾಡಿದ್ದೇವೆ. ಒಟ್ಟಾರೆಯಾಗಿ ಇದೊಂದು ಮಹಿಳಾ ಪ್ರಧಾನ ಚಿತ್ರ. ಪ್ರತಿ ನಿತ್ಯ ನಾವು ನೋಡುವ, ಕೇಳಿರುವ, ಕೇಳುತ್ತಿರುವ ಮಧ್ಯಮ ವರ್ಗದ ಹೆಣ್ಣುಮಕ್ಕಳ ಕಥೆ. ಈ ನಾಲ್ಕು ಕಥೆಗಳ ಪ್ರಮುಖಪಾತ್ರಗಳಲ್ಲಿ ಖುಷಿ ರವಿ, ರೋಷಿಣಿ ಪ್ರಕಾಶ್, ಸಂಗೀತಾ ಭಟ್ ಹಾಗೂ ಸಿಂಧು ಶ್ರೀನಿವಾಸಮೂರ್ತಿ ನಟಿಸಿದ್ದಾರೆ. ಸುಮೇಧ್ ಕೆ ಸಂಗೀತ ನೀಡಿದ್ದು, ರೊನದ ಬಕ್ಕೇಶ್ ಹಿನ್ನೆಲೆ ಸಂಗೀತ ನೀಡಿದ್ದಾರೆ.ನಾಲ್ಕು ಜನ ನುರಿತ ಛಾಯಾಗ್ರಾಹಕರು ಛಾಯಾಗ್ರಹಣ ಮಾಡಿದ್ದಾರೆ. ನಮ್ಮ ಚಿತ್ರ ಕೂಡ ಜನರ ಮನಸ್ಸಿಗೆ ಹತ್ತಿರವಾಗುತ್ತದೆ. ಅವಕಾಶ ನೀಡಿದ ನಿರ್ಮಾಪಕರಿಗೆ ನಮ್ಮ ಧನ್ಯವಾದ ಎಂದರು ನಿರ್ದೇಶಕರಾದ ಗೌತಮ್ ಅನ್ವಿತ್, ಮಹೇಶ್ ರಾಜ್, ಶಶಿಕುಮಾರ್, ಹಾಗೂ ಪ್ರೀತಮ್ ಶಿವಕುಮಾರ್ .

ನಾನು ಈ ಸಿನಿಮಾದಲ್ಲಿ ಮಹಿಳಾ ಟ್ರಾಫಿಕ್ ಪೊಲೀಸ್ ಪಾತ್ರದಲ್ಲಿ ಅಭಿನಯಿಸಿದ್ದೇನೆ. ನಿರ್ದೇಶಕರು ನನ್ನ ಹತ್ತಿರ ಫೈಟ್ ಕೂಡ ಮಾಡಿಸಿದ್ದಾರೆ ಎಂದು ನಟಿ ಸಿಂಧು ಶ್ರೀನಿವಾಸಮೂರ್ತಿ ಹೇಳಿದರು.

ನಟಿ ಖುಷಿ ರವಿ ಮಾತನಾಡಿ, ನಾನು ಈ ಚಿತ್ರದಲ್ಲಿ ನರ್ಸ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ನಾರ್ಮಲ್ ನರ್ಸ್ ಹತ್ತಿರ ಸಿನಿಮಾದವರು ಬಂದಾಗ ಆಕೆ ಅವರನ್ನು ಹೇಗೆ ನೋಡಿಕೊಳ್ಳುತ್ತಾಳೆ ಎನ್ನುವುದನ್ನು ಈ ಪಾತ್ರದ ಮೂಲಕ ಮಾಡಿದ್ದೇನೆ ಎಂದರು.

ನನ್ನದು ಐಟಿ ಉದ್ಯೋಗಿಯ ಪಾತ್ರ. ಐಟಿ ಉದ್ಯೋಗ ಸಿಕ್ಕ ಮೇಲೆ ಸಾಕಷ್ಟು ಕನಸು ಕಾಣುತ್ತೇನೆ. ಅದು ಈಡೇರುತ್ತದೆಯೊ? ಇಲ್ಲವೊ? ಎನ್ನುವುದನ್ನು ತೆರೆಯ ಮೇಲೆ ನೋಡಬೇಕು ಎಂದು ನಟಿ ರೋಷಿಣಿ ಪ್ರಕಾಶ್ ಹೇಳಿದರು.

ಸಂಗೀತಾ ಭಟ್ ಈ ಚಿತ್ರದಲ್ಲಿ ಮಧ್ಯಮ ವರ್ಗದ ಕುಟುಂಬದ ಗೃಹಿಣಿಯಾಗಿ ಕಾಣಿಸಿಕೊಂಡಿದ್ದಾರೆ.





## "ರಾಶಿ" ಚಿತ್ರದ ಪ್ರಮೋಷನ್ ಗೆ ಚಾಲನೆ

ಅಖಿಲೇಶ್ ನಿರ್ಮಿಸಿರುವ , ವಿಜಯ್ ಪಾಳೇಗಾರ್ ನಿರ್ದೇಶಿಸಿರುವ ಹಾಗೂ ನಟ ಶಶಿಕುಮಾರ್ ಪುತ್ರ ಆದಿತ್ಯ ಶಶಿಕುಮಾರ್ ನಾಯಕನಾಗಿ ನಟಿಸಿರುವ "ರಾಶಿ" ಚಿತ್ರದ ಪ್ರಮೋಷನ್ ಗೆ ಮಂಡ್ಯದ ಶ್ರೀಕಾಳಿಕಾಂಬ ದೇವಸ್ಥಾನದಲ್ಲಿ ಚಾಲನೆ ನೀಡಲಾಗಿದೆ.

ನಾಯಕ ಆದಿತ್ಯ ಶಶಿಕುಮಾರ್, ನಾಯಕಿ ಸಮೀಕ್ಷ, ವಿನೋದ್ ಗೊಬ್ಬರಗಾಲ, ಉಗ್ರಂ ರವಿ, ಪ್ರವೀಣ್, ನಿರ್ದೇಶಕ ವಿಜಯ್ ಪಾಳೇಗಾರ್ ಹಾಗೂ ಮಂಡ್ಯದ ಚಿದಂಬರಂ ಮುಂತಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಚಿತ್ರದ ಟ್ಯಾಬ್ಲೊ ಮಂಡ್ಯ, ಮೈಸೂರು, ಹಾಸನ, ದಾವಣಗೆರೆ, ಹುಬ್ಬಳ್ಳಿ ಹಾಗೂ ಶಿವಮೊಗ್ಗ ಮುಂತಾದ ಕಡೆ ಸಂಚರಿಸಲಿದೆ. ಹುಬ್ಬಳ್ಳಿಯಲ್ಲಿ ಬೈಕ್ ರ?ಯಾಲಿ ಸಹ ನಡೆಯಲಿದೆ. ಈಗಾಗಲೇ ಚಿತ್ರೀಕರಣ ಪೂರೈಸಿ ತೆರೆಗೆ ಬರಲು ಅಣಿಯಾಗಿರುವ ಈ ಚಿತ್ರವನ್ನು ಅಖಿಲೇಶ್ ಅವರು ಅದ್ದೂರಿಯಾಗಿ ನಿರ್ಮಾಣ ಮಾಡಿದ್ದಾರೆ. ಕಾಮಿಡಿ, ಲವ್ ಹಾಗೂ ಕೌಟುಂಬಿಕ ಕಥಾಹಂದರ ಹೊಂದಿರುವ ಈ ಚಿತ್ರಕ್ಕೆ ನಿರ್ಮಾಪಕ ಅಖಿಲೇಶ್ ಕಥೆ ಬರೆದಿದ್ದಾರೆ. ಚಿತ್ರಕಥೆ ನಿರ್ದೇಶಕ ವಿಜಯ್ ಪಾಳೇಗಾರ್ ಅವರದು. ನವೀನ್ ಸೂರ್ಯ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ಮಹೇಶ್ ಸಾತನೂರು ಅವರ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ಆದಿತ್ಯ ಶಶಿಕುಮಾರ್ ಅವರಿಗೆ ನಾಯಕಿಯಾಗಿ ಸಮೀಕ್ಷ ನಟಿಸಿದ್ದಾರೆ. ರಮೇಶ್ ಇಂದಿರಾ, ತಬಲ ನಾಣಿ, ವೀಣಾ ಸುಂದರ್, ಮಂಜು ಪಾವಗಡ, ಕರಿ ಸುಬ್ಬು, ವಿನೋದ್ ಗೊಬ್ಬರಗಾಲ, ಹುಲಿ ಕಾರ್ತಿಕ್, ವರ್ಧನ್ ತೀರ್ಥಹಳ್ಳಿ, ಉಗ್ರಂ ರವಿ, ಭಜರಂಗಿ ಪ್ರಸನ್ನ ಮುಂತಾದವರು "ರಾಶಿ" ಚಿತ್ರದ ತಾರಾಬಳಗದಲ್ಲಿದ್ದಾರೆ..



## "ಬೃಂದಾವಿಹಾರಿ" ನವೆಂಬರ್ 20ಕ್ಕೆ

ಪ್ರೊಡಕ್ಷನ್ ನಂಬರ್ 2 ಹೊಸ ಚಿತ್ರದಲ್ಲಿ ಪ್ರೇಮಾ ಗೌಡ

ಸಮೃದ್ಧಿ ಮಂಜುನಾಥ್ ನಿರ್ಮಿಸಿರುವ, ಶ್ರೀನಿವಾಸರಾಜು ನಿರ್ದೇಶನದ ಹಾಗೂನಟ ಗಣೇಶ್ ಅಭಿನಯದ 'ಬೃಂದಾವಿಹಾರಿ' ಚಿತ್ರ ಅಕ್ಟೋಬರ್ 16 ರಂದು ಬಿಡುಗಡೆಯಾಗಬೇಕಿತ್ತು. ನವೆಂಬರ್ 20ಕ್ಕೆ ಚಿತ್ರ ಬಿಡುಗಡೆಯನ್ನು ಮುಂದೂಡಲಾಗಿದೆ. ಹೊಸತಂಡದ "ಪ್ರೇಮದ ಊರಲಿ" ಚಿತ್ರ ಎಲ್ಲಾ ಕಡೆ ಯಶಸ್ವಿ ಪ್ರದರ್ಶನ ಕಾಣುತ್ತಿದೆ. ಅಕ್ಟೋಬರ್ 16 ರಂದು ನಮ್ಮ ಚಿತ್ರ ಬಿಡುಗಡೆಯಾದರೆ ಚಿತ್ರಮಂದಿರಗಳ ಸಮಸ್ಯೆ ಎದುರಾಗಲಿದೆ. ಕನ್ನಡ ಚಿತ್ರವೊಂದು ಯಶಸ್ವಿ ಪ್ರದರ್ಶನ ಕಾಣುತ್ತಿರುವುದು ಎಲ್ಲಾ ಕನ್ನಡಿಗರಿಗೂ ಹೆಮ್ಮೆಯ ವಿಷಯ. ಹಾಗಾಗಿ ನಮ್ಮ ಚಿತ್ರದ ಬಿಡುಗಡೆಯನ್ನು ನವೆಂಬರ್ 20 ಕ್ಕೆ ಮುಂದೂಡಿ ರುವುದಾಗಿ ನಿರ್ಮಾಪಕ ಸಮೃದ್ಧಿ ಮಂಜುನಾಥ್ ಹಾಗೂ ನಾಯಕ ಗಣೇಶ್ ತಿಳಿಸಿದ್ದಾರೆ.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,